TIGHT BINDING BOOK

UNIVERSAL LIBRARY
OU_200103
UNIVERSAL LIBRARY

ಶ್ರೀ ಶೇಷಾಚಲ ಗ್ರಂಥಮಾಲೆ, ಧಾರವಾಡ

# ಜೀವನ ವಿಕಾಸ

(ಒಂದು ಸಾಮಾಜಿಕ ಕತೆ)

ಲೇ:-

ಮುರಲಿ.

ಮುದ್ರಕ-ಪ್ರಕಾಶಕ:-

ಬಿ. ಪಿ. ಕಾಳೆ,

ಶ್ರೀ ಶೇಷಾಚಲ ಪ್ರೆಸ್ಸ,

ಮದಿಹಾಳ-ಧಾರವಾಡ

೧೯೪೪

(ಈ ಪುಸ್ತಕದ ಸಂಪೂರ್ಣ ಒಡೆತನ ಪ್ರಕಾಶಕರದು)

ಬೆಲೆ ೧-೮-೦

# ನಿವೇದನೆ

ಇದೀಗ ಕನ್ನಡಮ್ಮನಡಿದಾವರೆಗೆ ಇನ್ನೊಂದು ಹೂವು. ನನ್ನ ಪ್ರೇಮದ ಕನ್ನಡ ಬಂಧುಗಳು ಸಿಹಿಮಾಡಿಕೊಳ್ಳುವರೆಂದು ಆಶೆ.

ಕೆಲ ಸಾಮಾಜಿಕ ಸತ್ಯ ಘಟನೆಗಳಿಗೆ ಕಲ್ಪನೆಯ ಬಣ್ಣ ಬಳಿದ ಚಿತ್ರವೊಂದು. ಹೇಗಿದೆಯೆಂಬುದನ್ನು ಓದುಗರೇ ತಿಳಿಯಬೇಕು.

ಮಾನವ ಜೀವನಕ್ಕೊಂದು ವಿಕಾಸ ಅತ್ಯವಶ್ಯ. ಅಂತಹ ವಿಕಾಸ ಸಿಕ್ಕರೆ ಮಾತ್ರ ಜೀವನದ ಸುಮಧುರ ಫಲ ಸಿಕ್ಕುವುದೆಂದು ಎಲ್ಲರೂ ತಿಳಿದ ವಿಷಯ. ಸರಿಯಾದ ವಿಕಾಸ ದೊರೆತ ಮೂಲಕವೇ-ವ್ಯಕ್ತಿ ವಿಕಾಸ ಹೇಗಾಯಿತೆಂದು ತಿಳಿಸುವುದೇ-ಸದ್ಯದ ಬರೆಹದ ವಿಷಯ.

ನನ್ನ ಇದುವರೆಗಿನ ಪುಸ್ತಕಗಳಂತೆ ಇದೂ ಕೂಡಾ ಶ್ರೀ. ಬಿ. ಪಿ. ಕಾಳೆಯವರ ಮೂಲಕವೇ ಬೆಳಕಿಗೆ ಬರುತ್ತಲಿದೆ. ಅವರಿಗೆ ತುಂಬಾ ಋಣಿ.

ಅಕ್ಷಯ್ಯತೃತೀಯೆ, (೧-೫-೪೯)
ವಿರೋಧಿ ಸಂವತ್ಸರ, ಧಾರವಾಡ. ಮುರಲಿ.

---

# ಪರಿವಿಡಿ


| | ಪ್ರಕರಣ | ಪುಟ | | ಪ್ರಕರಣ | ಪುಟ |
|---|---|---|---|---|---|
| ೧ | ಅನಾಹುತ | ೧ | ೮ | ವಿಕಾಸ | ೬೫ |
| ೨ | ಭೀಕರ ಕಟ್ಟು | ೧೧ | ೯ | ಯಶೋಮಂದಿರ | ೭೧ |
| ೩ | ಪ್ರಾಣದಾತ-ತಂದೆ | ೨೧ | ೧೦ | ಭಿನ್ನ ದೃಷ್ಟಿ | ೭೪ |
| ೪ | ರಾಜಮಾರ್ಗ | ೩೨ | ೧೧ | ಮೋಹನರಾಯ | ೮೪ |
| ೫ | ಶಾಂತಾನುಕೂಲ ಪವನ | ೪೨ | ೧೨ | ಸಮ್ಮತಿ | ೮೯ |
| ೬ | ಆಶೀರ್ವಾದ | ೫೨ | ೧೩ | ಆಕರ್ಷಣೆ | ೯೫ |
| ೭ | ಪಾರ್ವತೀಬಾಯಿ | ೫೮ | ೧೪ | ಭೋಗವೋ-ತ್ಯಾಗವೋ? | ೧೦೩ |
| | | | ೧೫ | ನಿರ್ಝರ | ೧೦೮—೧೧೦ |

# ಜೀವನ ವಿಕಾಸ.

## ಅನಾಹುತ.

‘ಎಂಥಾ ಕರಿಗಾಲಿನ ಹೆಣ್ಣಽನಮ್ಮವ್ವಾ. ಇಂಥಾ ಕೆಟ್ಟಕಾಲ್ಗುಣದ ಹೆಣ್ಣ ತಂದ್ಕೊಳ್ಳಿಕ್ಕೆ ಹ್ಯಾಂಗ ತಿಳೀಲಿಲ್ಲೋ ಏನೊ? ಭಾಳ್ಮಾಡಿ ಮಂಗಳದ್ದೆಣ್ಣೇ ಇರ್ಬೇಕು. ಹ್ಯಾಂಗಾರ ಮಾಡಿಽ ದಾಟ್ಹಾಕ್ಬೇಕೂಽ ಅಂತ ಮುಚ್ಚಿಟ್ಟಿರ್ಬೇಕು. ಛೆ, ಛೆ! ಅಂಥಾ ಹೆಣ್ಣನಾನೆಲ್ಲೂ ನೋಡ್ಲಿಲ್ಲ. ಯಾಕ್ರೀ ವೇಣೂತಾಯೀ, ನಾ ಹೇಳೂ ಮಾತ ಖರೇ ಹೌದಲ್ಲೋ?’

‘ಖರೇ ಇಲ್ದಿದ್ರೇನು? ಮದಿವ್ಯಾಗಿ ಮೂರು ದಿನಾ ಸುದ್ಧಾ ಆಗ್ಲಿಲ್ಲ. ಇಷ್ಟರಾಗಽ ಗಂಡನ್ನೀಗಿ ಕೂತ್ಲು.’

‘ಛೆ, ಛೆ! ಎಂಥಾ ಛಲೋ ಗಂಡನ್ನಽ ಬಲಿ ತೊಗೊಂಡ್ಲು? ಇಂಥಾ ಗಂಡ ಒಂಟಿಗಾಲಿನ್ಮ್ಯಾಲಿ ನಿಂತ್ಹನ್ನೆರ್ಡ್ವರ್ಷ ತಪಸ್ಮಾಡಿದ್ರೂ ಸಿಗಲಿಕ್ಕಿಲ್ಲ. ಅದ್ಕೂ ನಸೀಬ ಬೇಕ್ರೀ ಗಂಡನ್ ಇಟಗೊಳ್ಳಿಕ್ಕೆ. ಇದೆಂಥಾ ಹೆಣ್ಣೋ ಏನೋ? ನನಗಂತೂ ತಿಳೀಲಿಕ್ಕಿಲ್ನಮ್ಮವ್ವಾ.’

‘ಎಲ್ಲೀ ಹೆಣ್ರೀ ಭಾಗಕ್ಕಾ? ಇದ್ದೆಣ್ಣಲ್ಲ, ರಕ್ಕಸಿ. ಇಂಥಾ ರಕ್ಕಸೀನ್ಮಾಡ್ಕೊಂಡ್ಮ್ಯಾಲ ಇನ್ನೇನ್ಸುಖಾ ಸಿಗ್ತದ? ಹಣೇಬಾರ ಕಂಡದ್ದಽ ಆದ.’

‘ನನಗ ನೋಡ್ರೀ ಕಮಲಕ್ಕಾ, ಈ ದೆವ್ವನ್ಮಾರೀ ಸುದ್ಧಾ ನೋಡ್ಬಾರ್ದೂ ಅಂತನಸ್ತದ.’

‘ಇದ್ಮಾತ್ರ ಖರೇ ನೋಡ್ರಿ. ನನಗ ಮೊದ್ಲಽ ಗೊತ್ತಿತ್ತು. ಈಕೀ ಇಂಥಾ ಕರಿಗಾಲ್ನಾಕೀಽ ಅಂತ. ಆದ್ರ ಸುಮ್ನ ಮಾತಾಡಿ ಬಾಯ್ಹೋರೀ ಯಾಕಾಗ್ಬೇಕು? ಇಕೀ ಹಣೇಬಾರ್ದಾಗ ಇಂಥಾದಽ ಅದಽ ಅಂತ ಒಮ್ಮೆ ಮಾರೀ ನೋಡಿದ್ರ ಗೊತ್ತಽ ಆಗ್ತದ.’

'ಹವ್ವಹವ್ವರೀ ವೇಣೂತಾಯೀ. ನಮ್ಮನೀಗೆಂದಾದ್ರೂ ಬಂದ್ರಾತು. ಅವತ್ತ ಮುಂಝಾನಿಂದ ಸಂಜೀತನ್ಕಾ ಏನಾರ ಕೆಟ್ಟ ಕೆಲ್ಸಾ, ಝಗ್ಡಾ ಆಗೋದೆ, ಮೊನ್ನೆ—ಹೌದು. ಮನ್ನಿನ ಸ್ವಾಮಾರಾನ ಬಂದಿದ್ಲು, ಅವ್ವ ಕರೀತಾಳ ಅಂತೇನೋ ಹೇಳ್ಳಿಕ್ಕೆ—ನೋಡ್ರೀ ಅವತ್ತ ಎಷ್ಟ ಕೆಟ್ಕೆಲಸಾ ಗೋದು? ಎಂಥಾ ಚಲೋ ಕಲಪರ್ಟ ಒಡ್ದ್ಹೋತು. ಎಡ್ಸೇರ್ಹಾಲುಬೆಕ್ಕಿನ ಪಾಲಾದ್ವು. ಕಡೀಕೆ ನಾನ ಕಾಲ್ಜಾರಿ ಬಿದ್ದೆ. ಛೆ. ನಮ್ಮವ್ವಾ! ಒಂದ ಎರಡ ಸಂಜೀತನಕಾ ಇದ ಹಾಚಾತ್ನೋಡ್ರಿ. ಯಾಕರ ಈ ಶನೀ ಬಂತೊ ಅಂತ ಒಂದ್ಸಾವಿರ್ಸಾರೆ ಅಂದೆ. ದ್ಯಾಮವ್ವ ಕಾಯಿ ಒಡಸ್ತೇನೀ ಅಂತ ಬೇಡ್ಕೊಂಡ್ಮ್ಯಾಲ ಕಡಿಮ್ಯಾತು.'

'ಹೌದ್ಹೇದ್ರೇ ಭಾಗಕ್ಕ. ನನಗಂತೂ ಆಕೀ ಸುಟ್ಮೋರೀ ಕಂಡ್ರಾಗ್ತಿ ದ್ದಿಲ್ಲ. ಇನ್ಮ್ಯಾಲ ನಮ್ಮನೀಗೇನ ಕಾಲ್ಹಾಕ್ಬ್ಯಾಡಾ ಅಂತ್ಹೇಳ್ಬೇಕೂ ಅಂತ್ಮಾಡಿದ್ದೆ. ಆದ್ರ ಪಾರಕ್ಕನ ಮೋರೀ ನೋಡ್ಸುಮ್ನಿದ್ದೆ. ಪಾರಕ್ಕಾ ಎಂಥಾ ಧರ್ಮಿಷ್ಠಳಿದ್ದಾಳ? ಇದೆಲ್ಲಿಂದ ಹುಟ್ಟಿತಂಥಾಕೀ ಹೊಟ್ಟೀಲೆ?'

'ಹೌದ್ರೇ ಭಾಗಕ್ಕ, ರಾಮಕ್ಕ, ನನ್ಗೂ ಆಕೀ ಮೋರೀನ ಬ್ಯಾಡಾ ಅಂತನಸ್ತದ. ಮಾಡೂದೇನು? ಈಗ ಮಾತಾಡಿಸ್ಲಕ್ಕಂತೂ ಹೋಗ್ಬೇಕ? ಮನದಿಚ್ಛೆಗಾಗ್ದಿದ್ರೂ ಜನದಿಚ್ಛೆ ಒಂದದ ಅಲ್ಲ? ನಿರ್ವಾಹ ಇಲ್ಲ. ನಡೀರಿ. ದ್ಯಾಮವ್ವಾ, ನೀನ ಕಾಯವ್ವಾ. ಎಲ್ಲಾ ಹೊರೀ ನಿನ್ಮ್ಯಾಲ'

'ಗೂಳಿ ಬಿದ್ದಮೇಲೆ ಆಳಿಗೊಂದು ಕಲ್ಲು'

ಎಂಬ ಜಾಣ್ನುಡಿಯ ಸತ್ಯತೆಯೇ ಇಲ್ಲಿದೆ. ಗಂಗೂನಿಗೆ ವರ ಗೊತ್ತಾದಾಗ್ಗೆ ಮದುವೆ ನಡೆದಾಗ್ಗೆ ಇದೇ ಅಕ್ಕ-ಬಾಯಿಯವರು ಅದೆಷ್ಟು ಆನಂದ ಪ್ರದ ರ್ಶನ ಮಾಡಿದ್ದರು? ಬಾಯ್ತುಂಬ ಹೇಗೆ ಹರಸಿದ್ದರು!!! ಅವಳ ಉತ್ಕೃಷ್ಟ ಬಗೆಯ ದೈವವನ್ನು ಹೇಗೆ ಹೊಗಳಿದ್ದರು!!! 'ಗಂಗಕ್ಕಾ, ನೀ ಭಾಳ್ಗು ಣವಂತಿ ನಮ್ಮವ್ವಾ. ನಿನ್ಹಾಂಗ ಪುಣ್ಯಾ ಮಾಡ್ದವ್ರಾರು? ಖರೇ ಹೇಳ್ಬೇ ಕಂದ್ರ, ಭೀಮ್ರಾಯ್ರೂ, ಪಾರಕ್ಕಾ ಮಾಡಿದ ಅಖಂಡ ತಪಸ್ಸಿನ ಫಲ. ಇಂಥವ್ರ ಹೊಟ್ಯಾಗ ಹುಟ್ಟಿಕ್ಕೂ ಪುಣ್ಯಾ ಬೇಕಾಗ್ತದ. ಅಂದ್ರ ಇಂಥಾ ಗಂಡ ಸಿಗ್ಬೇಕು ಬೇಕಾದಷ್ಟು ಶ್ರೀಮಂತಿ, ದೊಡ್ಡನೌಕರಿ. ಆಳು-ಹೋಳೂ ಅಡಿಗೀ ಅವ್ರು ನೀರಿನವ್ರೂ ಎಲ್ಲಾ ಅದ, ಅಂದ್ಮ್ಯಾಲೇನು? ತೂಗ್ಮಂಚ ದ್ಮ್ಯಾಲ ತೂಗ್ತೀದಿ—'ಮುಂತಾಗಿ ಸಾವಿರಾರು ಸಲ ಹೊಗಳುವುದಲ್ಲದೆ

ಅಖಂಡ ಸೌಭಾಗ್ಯವತೀಭವ' 'ಅಷ್ಟಪುತ್ರ ಸೌಭಾಗ್ಯವತೀ ಭವ' ಮುಂತಾಗಿ ಗುರು, ಹಿರಿಯರು, ಭೂಸುರರು, ಅನೇಕ ಪತಿವ್ರತೆಯರು ನೂರಾರುಸಲವಾದರೂ ಆಶೀರ್ವದಿಸಿದ್ದರು. ಎಲ್ಲಿ ಹೋದಲ್ಲಿ ಸವಿಮಾತಿನ ಸುರಿಮಳೆ, ಅಕ್ಕರೆಯ ಬಿರುಮಳೆ—'ಎಲ್ಲವೂ ಅದೆಲ್ಲಿ ಮಾಯವಾಯಿತು?' ಹಿಂದಿನ ಕಾಲದ ಆ ಮಹರ್ಷಿಗಳ ಒಂದೇ ಒಂದು ಹರಕೆ ದೈವವನ್ನೇ ಬದಲಿಸುತ್ತಿದ್ದಿತಲ್ಲವೆ? ಈಗಿನ ಸಾವಿರಾರು ಹರಕೆಗಳ ಸಮೂಹವೆಲ್ಲ ಅಸಹಾಯವಾದುದೇಕೆ? ಗಂಗೂನ ದೈವ ಬದಲಿಸುವದಿರಲಿ, ಅವಳಾ ದೀನ ಸ್ಥಿತಿಯ ಒಂದೇ ಒಂದು ಮಮತೆಯ ಮಾತು ಆ ಬ್ರಾಹ್ಮಣರ,-ಸುವಾಸಿನಿಯರ, ಹಿರಿಯರ ಬಾಯಲ್ಲಿದ್ದರೆ?—ಸುಳಿವು ಕೂಡಾ ಇಲ್ಲ. ಮುನ್ನಿನ ಅಕ್ಕರತೆಯಿಂದ ತುಂಬಿದ ಆ ಪ್ರಫುಲ್ಲ ನಿಸರ್ಗ ಅಲ್ಪಾವಕಾಶದಲ್ಲಿ, ತೀರಾ ಅಲ್ಪವಾದ ಕಾಲದಲ್ಲಿ ಭೀಕರ ಮರುಭೂಮಿಯಾಗಿ ಮಾರ್ಪಟ್ಟು ಗುಟ್ಟಾದರೂ ಏನು? ಪರಿಶುದ್ಧವಾದ ಪ್ರೇಮ ಭೀಕರ ವೈರವಾಗಿ ಪರಿಣಮಿಸಿದುದೇಕೆ? ದಯಾ ಸಮುದ್ರ ಒಮ್ಮೆಲೆ ಬತ್ತಿಹೋದುದೇಕೆ? ಏಕೆ? ಕೇಳುವುದಾರನ್ನು? ಉತ್ತರ ಕೊಡುವವರಾದರೂ ಯಾರು? ಸೆಳವಿಗೆ ಸಿಕ್ಕ ಹುಳಗಳಲ್ಲವೇ ನಾವೆಲ್ಲ?

ಗಂಗೂನ ಗಂಡ ಸತ್ತನು. ಅಹುದು ಅಪಘಾತಕ್ಕೆ ಸಿಕ್ಕು ಸತ್ತನು; ಆದರೆ ಇದರಲ್ಲಿ ಗಂಗೂನ ಅಪರಾಧವಾದರೂ ಏನು? ಈ ವಿಶ್ವದಲ್ಲಿ ಪ್ರತಿ ನಿಮಿಷ ಅಸಂಖ್ಯ ಪ್ರಾಣಿಗಳು ಮರಣಕ್ಕೆ ಗುರಿಯಾಗುತ್ತಲಿಲ್ಲವೆ? ಸತ್ತವರ ಸಾವು ಬೇರೇ ಇನ್ನಾರನ್ನಾದರೂ ಅವಲಂಬಿಸಿರುತ್ತದೆಯೆ? ಹಾಗೆಯೇ ಗಂಗೂನ ಗಂಡನೂ ಮರಣಕ್ಕೆ ಗುರಿಯಾದರೆ ಗಂಗೂನ ದೋಷವೇನು? ಅವಳೇನು ಅಂತಹ ಆ ಭೀಕರ ಅಪಘಾತಕ್ಕೆ ಯಾವದೊಂದು ವಿಧವಾಗಿ ಕಾರಣಳಾಗಿದ್ದಳೆ? ಹಾಗಾಗಬೇಕೆಂದರೆ ಸಾಧ್ಯವಾದರೂ ಇದೆಯೆ?—ಅವಳಾ ಸಸ್ನೇಹ ಮನದಲ್ಲಿ ಅಂತಹ ಯೋಚನೆ ಒಂದೇ ಒಂದು ಸಲವಾದರೂ ಬಂದಿದ್ದಿತೆ? ಮತ್ತು ಅವಳಿಗದು ಬೇಕಿದ್ದಿತೆ? ತೀರಾ ವಿಚಿತ್ರ! 'ಜನವೋ ದನವೋ?' ಎಂಬದು ಸುಳ್ಳಲ್ಲ; ಮತ್ತು ಇಂತಹ ವಿಚಾರ ವ್ಯಕ್ತಪಡಿಸುವವರಾದರೂ ಯಾರು? ಈ ಅಪಘಾತಕ್ಕೊಳಗಾದವರಿಗೆ ಯಾರಿಗೂ ಯಾವ ವಿಧದಲ್ಲಿಯೂ ಸಂಬಂಧವಿಲ್ಲದವರು! ಇದೇ ನಮ್ಮ ಸಮಾಜ. ಬೀಳುವವನನ್ನು ಕೆಳಕ್ಕೆ ತುಳಿದು, ಬೇಗ ಹಾಳಾಗುವಂತೆ ಮಾಡುವದೇ ಈ ಸಮಾಜದವರ ಪರಮೋಚ್ಚ ಧ್ಯೇಯ, ಭಾವು, ಸಮಾಜಪುರುಷನೇ ಭಾವು! ಅರ್ಥ

ಕ್ಕೊಂದಪಾರ್ಥ ಕಂಡು ಹಿಡಿದು, ಅನ್ಯರ ನಿಂದೆ-ದೂರುಗಳಲ್ಲಿಯೇ ನಿನ್ನ ಶಕ್ತಿ-ವ್ಯಕ್ತಿಗಳೆಲ್ಲವೂ ಹಾಳಾಗಬೇಕೇ? ನಮ್ಮ ಅತ್ಯುಚ್ಚವಾದ ಸಂಸ್ಕೃತಿಯಿದೇಯೊ? ಹೆಮ್ಮೆಯಿಂದ ಹೇಳಿಕೊಳ್ಳುವ ನಮ್ಮ ಆಚಾರಗಳಿವೆಯೋ? ಕಾಲಾಯ ತಸ್ಮೈ ನಮಃ!

ಭೀಮರಾಯರಲ್ಲಿ ಶೋಕಪ್ರದರ್ಶನ ಸಭೆ ನೆರೆಯಿತು. ಆ ಸಭೆಗೊಂದಾಮಂತ್ರಣ ಬೇಕಿರಲಿಲ್ಲ, ಅಧ್ಯಕ್ಷನೂಬೇಕಿರಲಿಲ್ಲ. ಗೊತ್ತು-ಗುರಿಗಳಾವೂ ಇರಲೇ ಇಲ್ಲ· ನಕ್ರಾಶ್ರು ಸುರಿಸುತ್ತ, ಭೀಮರಾಯರ-ಪಾರ್ವತಿಬಾಯಿಯವರ ದೈವ ದೂಷಿಸುತ್ತ, ತಮ್ಮ ತಮ್ಮೊಳಗೆ ಗಂಗೂನ ಆ ಕರಿಗಾಲಿಗಾಗಿ ಅವಳನ್ನು—ಕಣ್ಣನ್ನೆಯೊಡನೆ—ಹಳಿಯುತ್ತ ಕುಳಿತಿದ್ದರು. ಅವರಾ ಅಳು ಕೇಳಿದರೆ ಕಲ್ಲು ಕೂಡ ಕರಗಿ ನೀರಾಗಬೇಕು! ಅವರ ದೀನವಾದ ಮಾತು ಆ ನಿರ್ದಯ ಯಮನನ್ನೂ ಸದಯನನ್ನಾಗಿ ಮಾಡಬೇಕು. ಅವರಾ ಹಳಹಳಿ ವಿಧಿಲಿಖಿತವನ್ನೂ ಅಳಿಸಬೇಕು! ಎಲ್ಲಾ ನಟನೆ! ಎಂತಹ ನುರಿತ ನಟನಿಂದಲೂ ಸಾಧಿಸಲಾಗದ ಮೇಲ್ತರಗತಿಯ ನಟನೆ.

ನಡು ಮನೆಯಲ್ಲೀ ತಾಂಡವನೃತ್ಯ ನಡೆದಿರುವಾಗ ಭೀಮರಾಯರು ನಡುಮನೆಗೆ ಹೊಂದಿದ ಕೋಣೆಯಲ್ಲಿ ಕುಳಿತಿದ್ದರು. ಅವರ ಹಾವ-ಭಾವ, ಕುಣಿತ-ಮಣಿತ, ಮಾತು-ಕತೆಗಳು ಒಂದೊಂದಾಗಿ ಅವರ ಹೃದಯವನ್ನು ಕಾಯ್ದ ಸೀಸದಂತೆ ಪ್ರವೇಶಿಸುತ್ತಲಿದ್ದುವು. ತಮ್ಮ ಅಳುವೇ ಅಳವು ಮೀರಿರುವಾಗ ಇವರ ಅಸಂಬದ್ಧ ಪ್ರಲಾಪ ಅವರನ್ನು ಇನ್ನೂ ದುಃಖದಾಳಕ್ಕೆಳೆಯುತ್ತಲಿದ್ದುವು. ಬೇಗ ಮುಗಿದೀತೆಂದು ಕಾದರು. ಹತ್ತು ನಿಮಿಷ, ಹದಿನೈದು ನಿಮಿಷ, ಅರ್ಧಗಂಟೆ ಕಾಯ್ದರು. ತುದಿ-ಮೊದಲಿಲ್ಲದ ಶೋಕರಸಪೂರ್ಣ-ಅಳುವು—ಆಕ್ರೋಶಗಳು, ದುಃಖ-ಬಿಕ್ಕುಗಳು ಇನ್ನೂ ಬಳೆಯುತ್ತಲೇ ಇದ್ದವು. ಹೆಚ್ಚು ಹೆಚ್ಚು ಆವೇಗ-ಉದ್ವೇಗಗಳಿಂದ ತುಂಬಿ ಓತಪ್ರೋತವಾಗಿ ಹರಿಯಲಾರಂಭಿಸಿದುವು. ಸಹನೆ ಮೀರಿತು; ಅದರೆ ತಡೆಯುವದಾದರೂ ಹೇಗೆ? ಉಪಾಯಗಾಣದೇ ಕೈಕಾಲು ಶಕ್ತಿಹೀನವಾಗಿದ್ದುವು. ಕಣ್ಣು ಕಳೆಗೆಟ್ಟಿದ್ದುವು. ಶೂನ್ಯ ದೃಷ್ಟಿಯಿಂದ ತೆರೆಗಣ್ಣಿನಿಂದ ಕುಳಿತಿದ್ದರು.

ಏನು? ಏಕೆ?—ಮುಂತಾದ ಯಾವ ವಿಚಾರಗಳೂ ಅವರ ತಲೆಯಲ್ಲಿರಲಿಲ್ಲ. ದೆವ್ವ ಬಡಿದವರಂತೆ ಮೂಕರಾಗಿದ್ದರು. ಇಂದ್ರಿಯಗಳೆಲ್ಲವೂ

ಮೂಕವಾಗಿದ್ದವು, ಚೇತನೆ ಕೂಡ ಅಲ್ಪಾವಕಾಶ ಮರೆಯಾಗಿ ಹೋಗಿದ್ದಿತು. ಶೋಕಪ್ರದರ್ಶನ ಸಭೆಯ ಕಾರ್ಯ-ಕಲಾಪಗಳು ಕ್ರಮವಾಗಿ ಅವರನ್ನು ಮೂರ್ಛಿತಾವಸ್ಥೆಗೆ ಮುಟ್ಟಿಸಿದುವು. ಬಾಗಿಲು ಹಾಕುವುದೊಂದು ಹೇಗಾದರೂ ಪೂರಯಿಸಿತು. ಮುಂದೆ ಕುಳಿತಲ್ಲಿಯೇ ಉರುಳಿದರು. ಒಂದು ಒಂದೂವರೆ ಗಂಟೆ ತೆರೆಗಣ್ಣಿನಾ ತಂದ್ರಿಯುವರನ್ನು ವಿಚಾರಕ್ಕೆ ಗುರಿಮಾಡುವಷ್ಟು ಎಚ್ಚರಿಕೆಗೆ ತಂದಿತು. ಮೆಲ್ಲಗೆ ಸ್ಮೃತಿ ಬಂದಂತೆ ಗಂಗೂನ ಹಿಂದಿನ ಅನೇಕ ಮೂರ್ತಿಗಳವರ ಸ್ಮೃತಿ ಪಟಲದ ಮೇಲೆ ಮೂಡಲಾರಂಭಿಸಿದವು.

ಗಂಗೂ ಭೀಮರಾಯರ ಏಕಮೇವ ಪುತ್ರಿ. ಅಂದು ಮಗು ಹುಟ್ಟಿದಾಗಿನ ಅವರ ಮನಃಸ್ಥಿತಿ, ಅವರ ಆನಂದ ಮೇರೆ ಮೀರಿದ್ದಿತು. ಗಂಡಾಗಲಿಲ್ಲವೆಂಬ ಅಲ್ಪವಿಷಾದ ಅಡಕವಾಗಿದ್ದರೂ ಹಿಂಜಿದ ಅರಳೆಯಂತೆ ಮೃದುವಾದ ಹಾಸಿನಲ್ಲಿ ಮಲಗಿದ ಸುಂದರ ಮಗುವನ್ನು ಕಂಡಾಗಿನಾನಂದ ಒಂದು ಕ್ಷಣ ಎಲ್ಲವನ್ನೂ ಮರೆಯಿಸಿತು. ಎಳೆಯಳಾದ ಪಾರ್ವತಿ 'ಗಂಡಾಗಲಿಲ್ಲ'ವೆಂದು ಕಿರಿದನಿಯಲ್ಲಿ ನುಡಿದಾಗ 'ಈಗಲೇ ಸಂಸಾರ ಮುಗಿಯಿತೆ? ಆದಾವು. ಗಂಡೂ ಆದಾವು, ಹೆಣ್ಣೂ ಆದಾವು. ಗಂಡೇನು-ಹೆಣ್ಣೇನು? ಉಭಯ ಕುಲಕ್ಕೂ ಭೂಷಣಪ್ರಾಯಳಾಗುವ ಮಗಳ ಸರಿ ಮಗನು ಬರಲಾರ' ಎಂದು ಹೆಮ್ಮೆಯಿಂದ ನುಡಿದ ಆ ಮಾತುಗಳು ಪಡಿನುಡಿಯೆಬ್ಬಿಸಿದುವು?

ಹೆಸರಿಡುವಾಗಿನ ಆ ಗಂಡ-ಹೆಂಡಿರ ಪ್ರೇಮಕಲಹ. ಭೀಮರಾಯರೇ ಗೆದ್ದರು. ಬೆಳ್ಳನ್ನ ಪವಿತ್ರವಾದ ಆ ಮಗು ಗಂಗೆಯಂತೆ ಜಗತ್ಪಾವನಳಾಗುವಳೆಂಬ ಹರಕೆ,-ಬಯಕೆಗಳೊಡನೆ 'ಗಂಗೂ' ನಾಮಕರಣವಾಯಿತು. ಪವಿತ್ರವಾದ ಶುಭ್ರ ಮಗು ಅವರಾ ಹೃದಯದಲ್ಲಿ ನಗಹತ್ತಿತು.

ಮುಂದೆ ದೈವಯೋಗದಿಂದ ಭೀಮರಾಯರಿಗೆ ಮಕ್ಕಳಾಗಲಿಲ್ಲ. ಅವರ ಪ್ರೇಮವೆಲ್ಲವೂ ಗಂಗೂನಲ್ಲಿಯೇ ಕೇಂದ್ರೀಕೃತವಾಯಿತು. ಪಾರ್ವತಿಬಾಯಿಗೆ ಕೊಂಚ ಹಳಹಳಿಯೆನಿಸುತ್ತಲಿದ್ದಿತು. ಗಂಗೂನನ್ನೂ ಒಮ್ಮೊಮ್ಮೆ ದೂಷಿಸುತ್ತಲಿದ್ದಳು; ಆದರೆ ಭೀಮರಾಯರಿಗದು ಸಹನೆಯಾಗುತ್ತಲಿರಲಿಲ್ಲ. 'ನಮ್ಮ ಗಂಗೂ ಪ್ರತ್ಯಕ್ಷ ಗಂಗಾಮಾತೆಯಿರುವಳು. ನಮ್ಮ ಕುಲವನ್ನೇ ಪವಿತ್ರಗೊಳಿಸುವಳು. ಅವಳ ನಿಂದೆ ಮಹಾ ಪಾತಕ-' ಮುಂತಾಗಿ ಪಾರ್ವತಿಬಾಯಿಯನ್ನು ತಡೆಗಟ್ಟುತ್ತಲಿದ್ದರು.

ಭೀಮರಾಯರ ಶಿಕ್ಷಣದ ಮೂಲಕವಾಗಿಯೋ, ಅಥವಾ ಅವಳ ಹಿಂದಿನ ಜನುಮದ ಸಂಸ್ಕೃತಿಯ ಪರಿಣಾಮವಾಗಿಯೋ ಗಂಗೂ ಬೆಳೆದಂತೆ ಅವಳ ಸದ್ಗುಣಗಳ ವಿಕಾಸ ಮಿಂಚಿನ ವೇಗದಲ್ಲಿ ಆಗಹತ್ತಿತು. ಅವಳಾ ಮೃದು ಮಾತು, ಸ್ನೇಹಪೂರ್ಣ ವರ್ತನೆಗಳು ಬರಿಯ ತಂದೆ-ತಾಯಿಗಳನ್ನೇ ಏಕೆ, ಊರಿನವರನ್ನೂ ಮುಗ್ಧವಾಗಿಸುತ್ತಲಿದ್ದವು. ಶಾಲೆಯ ಶಿಕ್ಷಣದಲ್ಲಿ ಎಲ್ಲ ಕ್ಕೂ ಮೇಲು, ಮನೆಗೆಲಸದಲ್ಲಿ ಯಾವಾಗಲೂ ಮುಂದು. ಅಳುವವರನ್ನು ರಮಿಸುವುದರಲ್ಲಿ ಎಲ್ಲರಿಗಿಂತಲೂ ಮೊದಲು. ಎಂಟು-ಹತ್ತು ವರುಷದ ಬಾಲಿಕೆ. ಊರಿಗೆ ಊರೇ ಅವಳದಾಗಿದ್ದಿತು ಯಾರಿಗೆ ನೋವಾದರೂ ಅವಳಿಗೇ ಹೆಚ್ಚು ದುಃಖ, ಯಾರ ಮಗು ಅತ್ತರೂ ಗಂಗೂ ಕಯ್ಯಲ್ಲಿಯೇ ಸಂತಯಿಕೆ. ಮುಂಬರುವ ಭೀಕರ ಸಂಕಟ ಸಹಿಸಲೆಂದೇ ಪರಮಾತ್ಮ ಅವನ್ನೆಲ್ಲ ನಿರ್ಮಿಸಿದ್ದನೊ?

ಹೆಣ್ಣು ಎಂದಲ್ಲಿ, ಗಂಡಿನ ಚಿಂತೆ. ನಮ್ಮ ಗಂಗೂನಿಗೆ ತಕ್ಕ ಗಂಡ ಸಿಕ್ಕುತ್ತಾನೆಯೋ? ಎಂಬದೇ ಭೀಮರಾಯರ ತವಕ. ಹತ್ತು ವರುಷ ತುಂಬಿದಾಗಲೇ ಒಳ್ಳೆಯ ಗಂಡು ಶೋಧಿಸಲಾರಂಭಿಸಿದರು. 'ನಮ್ಮ ಗಂಗೂ ನಿಜವಾಗಿಯೂ ಸುದೈವಿ. ಅವಳಿಗೆ ತಕ್ಕ ಗಂಡು ಸಿಕ್ಕಲೇಬೇಕು.' ಎಂದು ಅವರ ಆತ್ಮವಿಶ್ವಾಸ. ಇಷ್ಟರಲ್ಲಿ ಭೀಮರಾಯರಿಗೊಮ್ಮೆ ವಿಷಮ ಜ್ವರ ಬಂದಿತು. ಅರ್ಧಾಂಗಿಯೆನ್ನಿಸುವ ಪಾರ್ವತೀಬಾಯಿಯೇ ಬೇಸತ್ತಲ್ಲಿ ಉಳಿದವರ ಪಾಡೇನು? ಒಮ್ಮೊಮ್ಮೆಯಾದರೂ ದೇವರ ಮೇಲೆ ಭಾರ ಹಾಕಿ ಪಾರ್ವತೀಬಾಯಿ ಮಲಗುವಳು; ಆದರೆ ಹತ್ತೇ ಹತ್ತು ವರುಷದ ಚಿಕ್ಕಬಾಲಿಕೆ ಗಂಗೂ ಒಂದೇ ಒಂದು ಸಲವಾದರೂ ಬೇಸರಿಯಲಿಲ್ಲ. ಅವಶ್ಯದ ಕಾರ್ಯ ಪೂರಯಿಸುತ್ತಲೇ ತಂದೆಯ ಬಳಿಯೇ ಕುಳಿತು, ಅರವತ್ತುವರುಷದ ಅಜ್ಜಿಯಂತೆ ಆರೈಕೆ ಮಾಡುತ್ತಲಿರುವಳು. ಏನವಳ ತಾಳ್ಮೆ! ಎನಿತವಳ ಮಧುರ ವರ್ತನೆ!! ಎಂಥ ಧೈರ್ಯವದು!!! ಅವಳಾ ಹಸನ್ಮುಖ ಭೀಮರಾಯರ ಹೃದಯದಿಂದ ಎಂದಾದರೂ ಮರೆಯಾದೀತೆ?

ಗಂಗೂ ಬೆಳೆದು ದೊಡ್ಡವಳಾದ ಹದಿನಾಲ್ಕು ವರುಷಕ್ಕೇನೇ ಗಂಗೂ ಸುಂದರ ತರುಣಿಯಾಗಿದ್ದಳು. ಅವಳ ಅನಿಂದ್ಯ ಸೌಂದರ್ಯ ತಂದೆಯನ್ನೇ ಮುಗ್ಧನನ್ನಾಗಿ ಮಾಡುತಲಿದ್ದಿತು. 'ತಮ್ಮದೇ ದೃಷ್ಟಿ ತಾಗಿತೆ'ಂದ ಅವರೇ ಅನೇಕ ಸಲ 'ಒಳಿತು' ಎಂದುದುಂಟು.

ಅನುರೂಪನಾದ ಗಂಡೂ ದೊರೆತುದಾಯಿತು. ಭೀಮರಾಯರಾನಂದಕ್ಕೆ ಮೇರೆಯಿರಲಿಲ್ಲ. ಅಂತಹಪ್ರೇಮಲ ಪಿತೃವಿಗಾದ ಆನಂದವನ್ನರಿಯಲು ಅಂತಹ ತಂದೆಯೇ ಬೇಕು. ಹೋದ ಬಂದವರೊಡನೆ ಚರ್ಚಿಸಲು ಭೀಮರಾಯರಿಗನ್ಯ ವಿಷಯವೇ ಇರಲಿಲ್ಲ. ತಾಯಿ ಪಾರ್ವತೀಬಾಯಿಯಂತಹಳಿಗೂ ಅಸಹ್ಯವೆನಿಸದಿರುತ್ತಲಿರಲಿಲ್ಲ. 'ಇರಲಿ ಬಿಡಿ. ನೀವೇ ಏನು ಜಗತ್ತಿನಲ್ಲಿಲ್ಲದ ಮಗಳನ್ನು ಹೆತ್ತವರು? ಇನ್ನಾರೂ ಮಕ್ಕಳ ಮದುವೆ ಮಾಡುವುದಿಲ್ಲವೆ—'ಮುಂತಾಗಿ ಉಪರೋಧಕ ಸ್ವರದಲ್ಲಿ ಮೂದಲಿಸುವಳು. 'ಬರಿಯ ತಾಯಿಯಾದ ಮಾತ್ರಕ್ಕೆ ಗಂಗೂಳನ್ನು ಪೂರ್ಣವಾಗರಿತಿರುವೆಯೆಂದು ತಿಳಿಯಬೇಡ. ನಮ್ಮ ಗಂಗೂ ನಿಜವಾಗಿಯೂ ಗಂಗಾದೇವಿ ಇರುವಳು. ಜಗತ್ತನ್ನೇ ಪವಿತ್ರ ಮಾಡುವಳವಳು ಅಂತಹಳ ಬಗ್ಗೆನನಗಿರುವ ಹೆಮ್ಮೆಗೆ ಸೀಮೆಯಿಲ್ಲ—'ಭೀಮರಾಯರು ಅಭಿಮಾನದಿಂದ ಉತ್ತರಿಸುವರು.

ಮುಂದೆ ಮದುಮಗಳಾಗಿದ್ದಾ ಗಂಗೂನ ಮುಗ್ಧ ಮನೋಹರ ಸೌಂದರ್ಯವನ್ನು ಕಂಡು ಮೋಹಿಸದವರೇ ಇರಲಿಲ್ಲ. ದೃಷ್ಟಿ ತೆಗೆಯದೇ ಒಬ್ಬರೂ ಉಳಿಯಲಿಲ್ಲ. ಗಂಗೂನ ಸೌಂದರ್ಯ, ಸವಿಮಾತು, ಸದಾಚಾರಗಳನ್ನು ಗಂಡಿನವರೇ ಬಣ್ಣಿಸುವಾಗ ಉಳಿದವರದೇನು?

ಕನ್ಯೆ ಒಪ್ಪಿಸಿಕೊಡುವಾಗಕಣ್ವರಂತಹ ಮಹಾ ಮುನಿಗಳೂ ಕಣ್ಣೀರು ಸುರಿಸಿದಾಗ ಭೀಮರಾಯರಂತಹ ಪ್ರಾಪಂಚಿಕರ ಪಾಡೇನು? ಗಂಗೂ ಅವರ ದ್ವಿತೀಯ ಆತ್ಮವೇ ಆಗಿದ್ದಳಾದುದರಿಂದ, 'ಗಂಗೂ ಹೆಣ್ಣಾಗದೇ ಗಂಡಾಗಿದ್ದರೆ' ಎಂಬ ವಿಚಾರ ಸಾವಿರ ಸಲವಾದರೂ ಅವರಿಗೆ ಬಾರದಿರಲಿಲ್ಲ.

ಹೃದಯ ತುಂಬಿ ಬಂದಿತು. ಕಂಠ ಗದ್ಗದವಾಯಿತು. ಧ್ವನಿ ಕಂಪ ಹೊಂದಿತು. ಇದರ ಪ್ರತಿಬಿಂಬ ಗಂಗೂನ ಹೃದಯದಲ್ಲೂ ಮೂಡಿತು. ಅನೇಕರಿರುವದನ್ನು ಮರೆತೇ 'ಅಪ್ಪಾ' ಎಂದು ಕಾತರ ಸ್ವರದಲ್ಲಿ ಕೂಗಿ ತಂದೆಯನ್ನು ಬಿಗಿದಪ್ಪಿದಳು. ಆ ತಂದೆ-ಮಕ್ಕಳ ದಿವ್ಯ ಮೀಲನ ಎಲ್ಲರನ್ನೂ ಬೆರಗುಗೊಳಿಸಿತು. ಎಲ್ಲರೂ ಹನಿಗಣ್ಣು ಹೊಂದಿದರು.

ಮದುವೆ ಯಥಾ ವಿಧವಾಗಿ ಪೂರಯಿಸಿತು ಅಳಿಯನಾಗಲಿ, ಅವನವರಾಗಲಿ ಕೇಳಿದುದನ್ನಲ್ಲಗಳೆಯಲಿಲ್ಲ. ಗಂಗೂನ ರೂಪ-ಗುಣಗಳಿಗೆ ಮನಸೋತ ಅಳಿಯ ಭೀಮರಾಯರೌದಾರ್ಯದಿಂದ ತೀರಾ ಮನಸೋತನು. ತನ್ನ ಭಾವೀ ಜೀವನದ ನಾನಾ ಬಗೆಯ ಸವಿಗನಸುಗಳನ್ನು ಕಂಡನು.

ಆ ಕೂಡಲೆ ಗಂಗೂನನ್ನು ಕಳಿಸಿಕೊಡಬೇಕೆಂದು ಗಂಡಿನವರು ಕೇಳಿದರು. ಮೂರು ತಿಂಗಳು ಕಳಿಸುವುದಾಗಿ ಹೇಳಿದರು. ಮಗಳ ವಿಯೋಗ ಅಲ್ಪವಾದರೂ ತಪ್ಪಲೆಂದು ಹೃದಯದ ಭಾವವೊಂದು ಇಳಿಯುವಾಗಲೇ ಅಗಲುವಿಕೆಯಿಂದ ಜಡವಾಗಿದ್ದಿತು.

ಬೀಗರು ಆಗ ತಾನೇ ಹೋಗಿ ಅರ್ಧಗಂಟೆಯಾಗಿದ್ದಿತು. ಮದುವೆಯಂತಹ ಮಹತ್ಕಾರ್ಯ ಯಶಸ್ವೀಯಾಗಿ ಪೂರೈಸಿ ಮುಂದಿನ ಯೋಚನೆಗಳಲ್ಲಿ ಮುಳುಗುತ್ತಲಿರುವಾಗಲೇ:ಎಂತಹ ಬೀಕರ ವಾರ್ತೆ! ಏನು ಅನರ್ಥ! ಎಷ್ಟು ಸಂಕಟ!!! ಮೈ ಮೇಲೆ ರೋಮಾಂಚ ಮೂಡಿದುವು. ಹೃದಯ ರೋದನದಿಂದ ತುಂಬಿತ್ತು. ಕಣ್ಣು ಕಂಗೆಟ್ಟುವು. ಸ್ವರ ಕುಂದಿತು. 'ಅಳಿಯ ಮರಳುವಾಗ ಮೋಟರಿನ ಅಪಘಾತಕ್ಕೆ ಸಿಕ್ಕು ತತ್‌ಕ್ಷಣ ಮರಣ ಹೊಂದಿದ!' ಹಾಯ್ ಹಾಯ್, ದೇವರೇ, ಏನು ನಿನ್ನ ನ್ಯಾಯ? ಯಾರಿಗೆ ಯಾವಾಗ ಯಾವ ವಿಪತ್ತು ತಂದೊಡ್ಡುವೆ? ಏನಾದರೊಂದು ರೀತಿ ನೀತಿಯಿದೆಯೆ? ಯಾರ ಭಾವೀ ಸುಖಜೀವನಕ್ಕಾಗಿ ಹಣವನ್ನು ನೀರಿನಂತೆ ವೆಚ್ಚಿಸಿದರೋ? ಯಾರ ಹಿತವೇ ತಮ್ಮ ಹಿತವೆಂದು ಬಗೆದರೋ? ಅಂಥ ಗಂಗು—ಗಂಗಾಮಾತೆಯಂತೆ ಪವಿತ್ರಳಾಗಿರುದಳೆಂದು ಹೆಮ್ಮೆಯಿಂದ ಹೇಳುತ್ತಲಿದ್ದ ಗಂಗೂ-ನ ಬಗ್ಗೆ ಭೀಮರಾಯ ಮುಂಗಾಣದಾದ. ಕಣ್ದೆರದು ನೋಡಿದಂತೆ ಎಲ್ಲೆಡೆಯಲ್ಲೂ ಭೀಕರ ಭಯಾನಕವಾದ ನೋಟಗಳೇ! ವಿಶ್ವದಂತ್ಯದ ವರೆಗೂ ಅಳು. ಶೋಕ, ಆಕ್ರೋಶಗಳೇ. ನೋಡಿ ನೋಡಿದಂತೆ ವಿಕೃತ ಭೂತಗಳೇ. ಅಸಹ್ಯ, ಭೀಕರ, ಅಕ್ರಾಳ, ವಿಕ್ರಾಳ ನೋಟಗಳೇ! ಕಣ್ಮುಚ್ಚುತ್ತಲೇ ಗಂಗೂನ ಆ ಸುಂದರ, ಸುಮನೋಹರ ಮೂರುತಿಗಳನೇಕ ಕಾತರತೆಯ ಕಂಪಿನೊಡನೆ—'ಅಪ್ಪಾ, ನನ್ನನ್ನು ಹೆತ್ತುದೇಕೆ? ಪ್ರೇಮದಿಂದ ಪಾಲಿಸಿದುದೇಕೆ? ಮದುವೆ ಮಾಡಿದುದೇಕೆ? ನನ್ನ ಬಾಳು ಹಾಳು ಮಾಡಿದುದೇಕೆ? ನನ್ನನ್ನೀ ದುರವಸ್ಥೆಗೊಯ್ದುದೇಕೆ?'

ಮುಂತಾಗಿ ಪ್ರಶ್ನೆಗಳ ಮಳೆಯನ್ನೇ ಸುರಿಸಿದುವು. ಆ ಸಾವಿರಾರು ಸುಂದರಾಕಾರದ ಮೂರ್ತಿಗಳೆಲ್ಲ ಭಯಂಕರವಾಗಿ ಕೂಗಿ ಆಕ್ರೋಶಿಸುವವು ಭೀಕರಾಕಾರ ತಾಳಿ ಎದೆ ನಡುಗುವಂತೆ ನರ್ತಿಸುವುವು. ಮಾಂಗಲ್ಯ ಹರಿದಿದೆ ಕುಂಕುಮ ಅಳಿಸಿದೆ. ತಲೆಯಲ್ಲಿನ ಸುಂದರ ಕೇಶ ಪಾಶ ಕಾಣದಾಗಿದೆ. ಕೆಂಬಟ್ಟೆ ಕೆನ್ನೀರಿನಲ್ಲಿ ತೊಯ್ದಂತೆ ಅವಳಾ ಸುಂದರ ತನು ಸುತ್ತುವರಿದು

ಕಣ್ಣೀರಿನಲ್ಲಿಯೇ ಮೀಯಿಸುವಂತಿದೆ. ಭೀಮರಾಯ ಹೌಹಾರಿ ಹೋಗಿ ದಿಗ್ಗನೇ ಮೇಲಕ್ಕೆದ್ದು ಒಡನೆಯೇ ಗಂಗೂ ಇರಬಹುದಾದ ಒಳಕೋಣೆಗೆ ಹೋದರು. ತಂದೆಯು ಕಣ್ಣೂ ಗುರತಿಸಲಾಗದಷ್ಟು ಗಂಗೂ ಮಾರ್ಪಟ್ಟಿದ್ದಳು ಸಿಡಿಲಿನ ಹೊಡೆತಕ್ಕೆ ಸಿಕ್ಕ ಎಳೆ ಸಸಿಯಂತೆ ಗಂಗು ಕಪ್ಪಿಟ್ಟಿದ್ದಳು. ಮುದುಡಿ ಕೊಂಡು ಮೂಲೆಯೊಂದರಲ್ಲಿ ಬಿದ್ದುಕೊಂಡಿದ್ದಾ ಕಳೇಬರ ಜೀವಂತ ವ್ಯಕ್ತಿ ಯೋ ಎಂದು ಸಂಶಯಪಡುವಂತಾಗಿದ್ದಿತು ಕೇಶಪಾಶ ಅಸ್ತವ್ಯಸ್ತವಾಗಿ ದ್ದಿತು. ಧೂಳು ಮೈತುಂಬ ಮುಸುಕಿದ್ದಿತು. ಮದುವೆಯಲ್ಲಿ ಹಚ್ಚಿದ ಅರಿಷಿಣ ಧೂಳಿಯಿಂದ ವಿಕಾರ ಹೊಂದಿ ಎದೆ ಬಿರಿಯಿಸುತ್ತಲಿದ್ದಿತು ಭೀಮರಾಯರ ಹೃದಯ ಹಿಂಡಿ ಹಿಪ್ಪೆಯಾಯಿತು; ಆದರೆ ಒಂದೇ ಒಂದು ಅಡಿ ಮುಂದಿಡುವ ಎದೆಯಾಗಲಿಲ್ಲ. ಏನೆಂದು ಮುಂಬರುವುದು? ಸಂತಯಿಸಲು ಅವರಲ್ಲಿ ಉಳಿ ದುದೇನು? ಮುದ್ದು ಗಿಳಿಯನ್ನು ಸಾಕಿ ಬೆಕ್ಕಿನ ಕೈಗೆ ಕೊಟ್ಟಂತಾಯಿತು!

ಅಹುದು, ಬೆಕ್ಕಿನಂತೆ ವಿಧಿ ಮಂದ ಹೆಜ್ಜೆಗಳಿಂದ ತಿಳಿಯದೇ ಜಪ್ಪಿಸಿ ಹಾರುತ್ತದೆ. ಬೆಕ್ಕನ್ನಾದರೋ ಹೊಡೆಯಬಹುದು. ತಡೆವ ಎತ್ತುಗಡೆಯ ನ್ನಾದರೂ ಮಾಡಬಹುದು. ಆದರೆ ವಿಧಿಯೋ? ಯಾರ ಕೈಗೂ ನಿಲುಕು ವವನಲ್ಲ. ರಾಜ--ರಂಕರನ್ನೂ ಒಂದೇ ಮಣ್ಣಲ್ಲಿ ಮಲಗಿಸುವ ಧೀರನವ. ಅವನೆದುರು ಯಾರ ಆಟವೂ ನಡೆಯದು. ಇದರಲ್ಲಿ ಯಾರ ಅಪರಾಧವೂ ಇರಲಿಲ್ಲ. ಆದರೂ ಭೀಮರಾಯರಿಗೊಂದಸಹ್ಯ ವೇದನೆಯಾಗಿ ತಾವೇ ತಪ್ಪುಗಾರರೆಂಬ ಭಾವ ಮೂಡಿದ್ದಿತು. ಕಾರಣಗಳೇನೂ ಇರಲಿಲ್ಲ. ಏನಿಲ್ಲ ವಾದರೂ ಆ ವೃದು ಸಂಬಂಧ ಅವರನ್ನು ಶೀರಾ ಹಣ್ಣುಮಾಡಿತು. ಕಾಲು ಕಂಪಿಸಿದುವು. ಕಣ್ಣು ಕತ್ತಲೆಗೊಂಡವು. ನಡುಗುವ ತುಟಿಗಳಿಂದ 'ಗಂಗೂ' ಎಂದು ಅಸ್ಪಷ್ಟವಾಗಿ ಕೂಗುತ್ತಲೇ ನೆಲಕ್ಕುರುಳಿದರು!

ಅವರು ಹಾಗೆ ಅಸಾವಧರಾಗಿ ಬಿದ್ದ ಸಪ್ಪಳ, ಅದಕ್ಕಿಂತಲೂ ಭೀಕರ ವಾದ ಕಾತರತೆಯ ಕೂಗು ಗಂಗೂನನ್ನು ಬಡಿದೆಬ್ಬಿಸಿತು. 'ಅಪ್ಪಾ', ಎಂದು ಎದೆಗರಗುವಂತೆ ದೈನ್ಯದಿಂದ ಕೂಗಿ ಭೀಮರಾಯರನ್ನ ವಚಿಕೊಂಡಳು. ಮದುವೆಯಲ್ಲೊಮ್ಮೆ ಹೀಗೇ ಆಗಿದ್ದಿತು. ಆದರದಕ್ಕೂ ಇದಕ್ಕೂ ಅದೆಷ್ಟು ಅಂತರ! ಇಬ್ಬರೂ ಅಸಹಾಯರಾಗಿದ್ದರು. ಇಬ್ಬರ ಜೀವನ ನೌಕೆ ಒಡೆ ದಿದ್ದಿತು. ಇಬ್ಬರೂ ಎದುರಿನಲ್ಲಿ ದಟ್ಟವಾದ ಕತ್ತಲೆಯನ್ನೇ ಕಾಣುತ್ತ ಲಿದ್ದರು ಹೀಗೆ ಸಮಾನವಾದ ಸಂಕಟದಲ್ಲಿ ಇಬ್ಬರೂ ಸಿಕ್ಕಂತಾಗಿದ್ದರು.

ಇಬ್ಬರ ಸುಖವನ್ನೂ ಅವಲಂಬಿಸಿದ ಆ ಮದುವೆ ಆಗ ತಾನೇ ಮುಗಿದಿದ್ದಿತು. ಆದರೆ—

ಮದುವೆ ಮಾನವೀ ಜೀವನದಲ್ಲೊಂದತೀವ ಮಹತ್ವದ ವಿಷಯ ವೆಂಬದನ್ನಾರೂ ಅಲ್ಲಗಳೆಯಲಾರರು; ಆದರೆ ಜೀವನ-ಮರಣದಂತಹ ಭೀಕರಪ್ರಸಂಗವದರಲ್ಲಡಕವಾಗಿದೆಯೆಂದರಿತವರೆಷ್ಟು ಜನ? ಅಪಘಾತ ವಾಗಲಿ ಇನ್ನೇನಾದರೂ ಆಗಲಿ ಗಂಡನಾದ ಗಂಡು ಸತ್ತರೆ ಆ ಮೂಲಕ ವಾಗಿ ಹೆಂಡತಿಯು ಇದ್ದೂ ಇಲ್ಲದಂತೆ-ಜೀವನ್ಮೃತಳೇಕಾಗಬೇಕು? ಅವನ ಮರಣದೊಡನವಳೂ ಮೃತಿಹೊಂದುವಂತಿದ್ದರಾ ಮಾತು ಬೇರೆ. ಜೀವಿ ಸಿದ್ದರೂ ಮೃತಳಂತಿರುವಂತಹ ಭೀಕರಾವಸ್ಥೆ ತೀರಾ ಶೋಚನೀಯ. ಆಗ ತಾನೇ ಮದುವೆಯಾಗಿದ್ದಿತು. ಮದುವೆಯಲ್ಲಿ ಹತ್ತೆಂಟು ಸಲ ಗಂಡನೆಂ ದರೆಂತಹನೆಂದು ನೋಡಿದ್ದಳು. ಒಂದೆರಡು ಸಲ ಕೈಮುಟ್ಟಿದ್ದಳು. ಅವನೇ ತನ್ನ ಗಂಡನೆಂದು ಹೆಸರೂ ಹೇಳಿದ್ದಳು. ಆಯಿತು. ಇಷ್ಟೇ ಗಂಡನ ಸುಖ. ಇದನ್ನುಳಿದು ಆ ಗಂಡನ ಸುಖ ಇನ್ನೇನು ತಾನೇ ಕಂಡಿದ್ದಳು? ಅದೆಷ್ಟು ಸಮಯ ಅವನ ಸಹವಾಸವಾಗಿದ್ದಿತು? ಅನಂತರವಾದ ಕಾಲಪ್ರವಾಹದ ಲ್ಲೊಂದು ಕ್ಷಣ ಮಾತ್ರ ಅಷ್ಟರ-ಆ ಅತ್ಯಲ್ಪವಾದ ಆ ಸಹವಾಸದ ಫಲವಾಗಿ ಸಾಯುವ ವರೆಗೂ ಸಾವನ್ನನುಭವಿಸಬೇಕಾಗಿ ಬಂದಿತು! ಗಂಡ ಜೀವಿ ಸಿದ್ದರೆ ಆ ಮಾತು ಬೇರೆ. ತನ್ನ ಸುಖ-ದುಃಖಗಳಲ್ಲ ಪಾಲುಗಾರನೊಬ್ಬನಿದ್ದು, ಅವನೊಡನೆ ಅವನ ಸುಖ-ದುಃಖಗಳಲ್ಲಿ ಪಾಲುಗಾರ್ತಿಯಾಗಿ ಬಾಳುವು ದೊಂದು ವಿಧ; ಆದರೆ ಗಂಡನೆಂದರೇನೆಂದು ತಿಳಿಯದಿದ್ದ, ವೈವಾಹಿಕ ಜೀವ ನದ ರೀತಿ-ನೀತಿಗಳರಿಯದ ಆ ಬಾಲಿಕೆ ಅಲ್ಪಾವಕಾಶದ ಮದುವೆಯ ಕಟು ತಮ ಫಲಗಳನ್ನು ಆಮರಣ ಪರಿಯಂತ ಭೋಗಿಸಬೇಕೆಂದರೇನು? ದೂರು ವುದಾರನ್ನು? ದುರುಳ ವಿಧಿಯನ್ನೋ? ಜಗತ್ತಿನಲ್ಲಿ ಶ್ರೇಷ್ಠವೆಂದು ಪರಿಗಣಿಸ ಲ್ಪಟ್ಟ ನಮ್ಮ ವಿವಾಹ ವಿಧಿಯನ್ನೋ? ವಿಧವೆಯರನ್ನೆಲ್ಲ ವಿಕೃತರನ್ನಾಗಿ ಮಾಡಿ ದುಷ್ಟರೀತಿಯಲ್ಲಿ ನಡೆಯಿಸಿಕೊಳ್ಳುವ ಕ್ರೂರ ಸಮಾಜವನ್ನೋ?

——

# ಭೀಕರ ಕಟ್ಟು

ಶೋಕ ಪ್ರದರ್ಶನದ ಆ ಅನಾಚಾರ ದಿನಾಲೂ ನೆರೆಯುತ್ತಲಿದ್ದಿತು; ಒಂದೊಂದು ದಿನ ಮುಂದಾದಂತೆ ಬಳೆಯುತ್ತಲಿದ್ದಿತು. ಆಪ್ತೇಷ್ಟರು, ನೆರೆ ಹೊರೆಯವರು, ಮಿತ್ರಪರಿಚಿತರು, ಊರವರು, ಪರವೂರವರು ದಿನದಿನ ನೆರೆಯುತ್ತಲಿದ್ದರು. ಅಳುವು ಆಕ್ರೋಶಗಳಿಂದ ಮನೆಗೆ ಮನೆಯೇ ಕುಸಿದಿರುವಂತಾಗಿದ್ದಿತು. ಶೋಕ, ದೈನ್ಯ, ದುಃಖಗಳೇ ಮನೆಮಾಡಿದ್ದವು. ವಡವಾಗ್ನಿಗಿಂತಲೂ ಮಿಗಿಲಾದ ಶೋಕಾಗ್ನಿ ಹೃದಯದಲ್ಲಿ ಉರಿಯುತ್ತಲಿದ್ದಿತು. ಅದನ್ನು ಇನ್ನೂ, ಮತ್ತೂ, ಹೊತ್ತಿಸುವಂತೆ ಈ ದುರ್ಘಟನೆಗಳು ಎಡೆಬಿಡದೆ ಸಾಗಿದ್ದವು.

ಎದೆಯಲ್ಲಿ ಒಂದೇಸಮನೆ ಪ್ರಜ್ವಲಿಸುತ್ತಲಿದ್ದಾ ಭೀಕರಾಗ್ನಿಯನ್ನು ಮರವಿನ ನೀರಿನಿಂದ ನಂದಿಸಲೆತ್ನಿಸುವಾಗಲೇ ಅದನ್ನು—ಆ ಭಯಂಕರ ದುರ್ಘಟನೆಯನ್ನು ಮತ್ತೆ ಮತ್ತೆ ನೆನಪಿಗೆ ತಂದುಕೊಟ್ಟು ಅದಿನ್ನೂ ನೂರ್ಮಡಿಯಾಗಿ ಉರಿಯುವಂತೆ ಮಾಡುತ್ತಲಿದ್ದರು. ಪ್ರತಿ ಕ್ಷಣ ಹೃದಯ ದಾಹ ಬೆಳೆಬೆಳೆದು ಶರೀರವನ್ನೇ ಸುಟ್ಟು ಹಾಕುತ್ತಲಿದ್ದಿತು. ಮೂರೇ ಮೂರು ದಿನಗಳಲ್ಲಿ ಭೀಮರಾಯರು ಜೀವಚ್ಛವವಾದರು. ಕೊಂಚವಾದರೂ ಶಾಂತಿ ಸಿಕ್ಕರೆ—ಸಿಕ್ಕುವುದು ಹೇಗೆ? ಅಂತರಾಗ್ನಿ ಭೀಕರಾಕಾರ ತಾಳಿ. ಉರಿಯುವಾಗಲೇ ಈ 'ಮಾತನಾಡಿಸಲು' ಬಂದವರು ಅದಕ್ಕಿನ್ನೂ ಪುಟ ಕೊಡುತ್ತಲೇ ಇದ್ದರು.

ಮನೆಗೆ ಬಂದವರನ್ನು ಮಾತನಾಡಿಸದಿರುವುದು ಶಿಷ್ಟಾಚಾರಕ್ಕೆ ತೀರಾ ಅಸಮ್ಮತ; ಆದರೆ ಮಾತನಾಡಿಸುವುದೆಂದರೆ ತಮ್ಮ ಎದೆಯುರಿಗೆ ಇನ್ನಿಷ್ಟು ಎಣ್ಣೆಯೆರೆಯುವದು ಹಲ್ಲಣವೇ ಹಾರುತ್ತಲಿದ್ದಿತು.

ಭೀಕರ ದಾಹ ಹೃದಯದಾಳದಲ್ಲಿ ಹುಗಿದು ಬಾಯ್ದೆಗೆಯುವಾಗಲೇ ಅದಿನ್ನೂ ನೂರ್ಮಡಿಯಾಗಿ ಹೊತ್ತುವದು. ಗಂಡಸರು ಬಂದಾಗ್ಗೆ ಅದೆಷ್ಟೋ ಕ್ಷೇಮ ಭಗವದ್ಗೀತೆ, ಶ್ರುತಿಸ್ಮೃತಿಗಳ ಉಲ್ಲೇಖದಿಂದ ಅಲ್ಪವಾದರೂ ಮನಃ ಶಾಂತವಾಗುತ್ತಲಿದ್ದಿತು. ಆದರೆ ಹೆಣ್ಣು ಹಿಂಡು ದಾಳಿ ಮಾಡಿದಾಗ—ಅಯ್ಯೋ ತೀರಾ ಅಸಹನೀಯ ಕೈಗಡತಂದ ಸಶ್ರೋ ಮಶ್ರೋ ಎಂಬಳುವ ಮನೆಯನ್ನೆ ತುಂಬುತ್ತಲಿದ್ದಿತು. ಅದೆಷ್ಟು ಆಕ್ರೋಶ! ಅದೆಂತಹ ನಟನೆ!! ಅವೇನು ಸೋಗು!!! ಭಾಪು! ಅಭಿಜಾತ ನಟರನ್ನೂ ಹಿಂದೂಡುವ ಸ್ತ್ರೀಸಮಾಜವೇ ಭಾಪು! ಈ ಮೂರು ದಿನಗಳಲ್ಲಿ ಭೀಮರಾಯರ ಮನೆ ಅಳುವಿನ

ಬೀಡಾಗಿ, ದುಃಖದ ಗೂಡಾಗಿ, ದೈನ್ಯದ ಎಡೆಯಾಗಿ ಅಸ್ಥಿಪಂಜರ ಮಾತ್ರ ಉಳಿದ ಭೀಮರಾಯರು ಸಾಯಲಾರದ ಹಕ್ಕಿಯಾಗಿದ್ದರು. ಇದೇ ನಮ್ಮ ಶಿಷ್ಟಾಚಾರ-ಶಿಷ್ಟಸಮ್ಮತ ಆಚಾರ!

ಗಂಡಸು:—ಪ್ರತ್ಯಕ್ಷವಾಗಿ ಅಂಥ ಭೀಕರಾವಸ್ಥೆಗೆ ಸಿಲುಕಿರದ ಭೀಮರಾಯನವಸ್ಥೆಯೇ ಹೀಗಾಗಿರುವಾಗ ಎಳೆಯ ಬಾಲಕಿ, ಜೀವನದ ಸುಖ-ದುಃಖಗಳ ಸೋಂಕು ಕೂಡಾ ಇಲ್ಲ, ಬಾಳಿನಹೊಸ್ತಿಲು ಮೆಟ್ಟುವಾಗಲೇ ಸೆಟ್ಟನುರುಳಿದ ಗಂಗೂನ ಅವಸ್ಥೆ ಅರಿಯುವುದು ಹೇಗೆ? ಕಲ್ಲು ಹೃದಯವಾಗಿದ್ದರೆ ಆ ಮಾತು ಬೇರೆ. ಹೂವಿಗಿಂತಲೂ ಮೃದುವಾಗಿದ್ದಿತವಳ ಎದೆ ಸಂಸ್ಕೃತಿಯವಳನ್ನಿನ್ನೂ ಕರಗಿಸಿದ್ದಿತು. ಆಗಲೆ ತನ್ನ ಹೊಣೆ ಅರಿತುಕೊಂಡವಳು. ತನ್ನ ಭಾವೀ ಜೀವನದ ಭೀಕರತೆ ಕಂಡುಕೊಂಡ ಅವಳಾ ದುರವಸ್ಥೆ ಯಾರು ತಾನೇ ಅರಿಯುವರು? ಆ ಬರಹೋಗುವವರಾಕ್ರೋಶ ಅವಳಿಗೆದಿಕ್ಕನ್ನೇ ತಪ್ಪಿಸಿದ್ದಿತು. 'ಮಾತನಾಡಿಸಲು' ಬಂದವರಾತವ್ಮ ದಿವ್ಯವಾಣಿಯಲ್ಲಿ, ಸಂತಯಿಸುವ ಭರದಲ್ಲಿ ಗಂಗೂನ ದೈವವನ್ನಷ್ಟೇ ಹಳಿದು ಸುಮ್ಮನಾಗದೇ ಎಲ್ಲ ಅನರ್ಥವನ್ನೂ ಅವಳ ತಲೆಯ ಮೇಲೆಯೇ ಬೀಳಿಸುತ್ತಿದ್ದರು. ಅವಳದೇ ಆ ತಪ್ಪು ಎಂದು ಸೂಚಿಸುತ್ತಿದ್ದರು. ಅಂಥ ಅವಳ ತಪ್ಪೆಂದರೆ ಅವಳ ಕಾಲಗುಣ. ತಂದೆ ತಾಯಿಗಳಿಗೆ ಸುಖಕೊಡಲಿಲ್ಲ. ಗಂಡನನ್ನು ಮರಣಕ್ಕೆ ಗುರಿಮಾಡಿದಳು. ಇನ್ನೆಷ್ಟು ಕರಿದಾದ ಕಾಲುಗುಣ ಬೇಕು? ಈ ಕರಿಗಾಲಿಗೆ ಕಾರಣಳವಳೇ ಅಲ್ಲದೆ ಇನ್ನಾರು? ಆದರಿಂತಹ ಟೀಕೆಗಳಿಂದ ತಾವು ಏನು ಮಾಡುತ್ತಲಿದ್ದರೆಂದವರರಿತಿದ್ದರೆ? ಭೀಮರಾಯರಂತಹ ಟೀಕೆಗಳನ್ನು ಉಪಾಯವಾಗಿ ನಿವಾರಿಸುತ್ತಲಿದ್ದರು; ಆದರೆ ಪಾರ್ವತೀಬಾಯಿ-ಹೆಣ್ಣು ಮಗಳು ಅನ್ಯರು ಬಳೆದ ಸಂಸ್ಕೃತಿಯಲ್ಲಿಯೇ ಬಳೆದಿದ್ದಳು. ಮನಸ್ಸೂ ಹಾಗೆಯೇ ರೂಪಗೊಂಡಿದ್ದಿತು. ಅವೇ ಭಾವನೆಗವಳೂ ಬಲಿಯಾಗಿದ್ದಳು. ಮೂಢ ಧರ್ಮಕ್ಕೆ ಮೂರ್ತಿಯಾಗಿದ್ದಳು. ಗಂಗೂನ ಕೆಟ್ಟ ಕಾಲಗುಣದರಿವು ಈ ಮೊದಲೇ ಆಗಿದ್ದಿತು. ತನಗೆ ಗಂಡುಮಗನಾಗದಿರಲು ಇನ್ನೇನು ಕಾರಣ? ಖೋಡಿ ಇಂಥ ಕೆಟ್ಟ ಹೆಣ್ಣು ಹುಟ್ಟಿದ್ದೇಕೆ? ಮದುವೆ ಮುಗಿಯದ ಮೊದಲೇ ಗಂಡನನ್ನು ಬಲಿಗೊಂಡಳು. ಮತ್ತಾರ ಆಹುತಿಯಿದೆಯೋ ಈ ರಕ್ಕಸಿಗೆ-ಮುಂತಾಗಿ ಚುಚ್ಚಿನುಡಿಯುವಳು ಅವಳ ಮನೋಭೂಮಿಕೆಯೇ ಹಾಗಾಗಿದ್ದಿತು ಬಂದ ಸಂಕಟಕ್ಕೊಂದು ಕಾರಣ

ಬೇಕಲ್ಲವೆ? ಸ್ವಂತದ ಮೇಲೆ ತೆಗೆದುಕೊಳ್ಳುವವರು ಯಾರು? ಅಳಿಯನಳಿದ ಕ್ಷೀಣಿಸುತ್ತಲಿದ್ದ. ಇದೆಲ್ಲಕ್ಕೂ ಕಾರಣಳು ಗಂಗೂನೇ ಅಲ್ಲವೆ? ಅವಳೇ ಸುಲಕ್ಷಣೆಯಾಗಿದ್ದರೆ—

ಅವರಾಡುತ್ತಲಿದ್ದ ಒಂದೊಂದೇ ಮಾತು ಗಂಗೂನ ಹೃದಯಕ್ಕೆ ಬಲವಾದ ಆಘಾತವನ್ನುಂಟು ಮಾಡುತ್ತಲಿದ್ದಿತು. ತನ್ನ ಕಾಲ್ಗುಣದ ಬಗ್ಗೆ ಆಕೆ ಪ್ರತಿ ಕ್ಷಣ ತನ್ನನ್ನೇ ತಾನು ಹಳಿದುಕೊಳ್ಳುತ್ತಲಿದ್ದಳು. ಕತ್ತಲೆಯಿಂದ ತುಂಬಿಹೋದ ಬಾಳು ಕಳೆಯುವುದು ಹೇಗೆ? ಎಂಬ ಕೊನೆಯಿಲ್ಲದ ಸಮಸ್ಯೆ ತಾಂಡವ ಮಾಡಿ ಹೃದಯವನ್ನೇ ಹಿಂಡಿ ಹಿಸುಕುತ್ತಲಿರುವಾಗ ತಾಯಿಯ, ಇನ್ನುಳಿದವರ ಮಾತುಗಳಿಂದ ಅಲ್ಲದ, ಸಲ್ಲದ-ಯೋಚನೆಗಳು ಅವಳನ್ನು ಮುತ್ತುತ್ತಲಿದ್ದುವು- ಉಳಿವು-ಅಳಿವುಗಳ ನಡುವೆ ಮನ ಹೊಯ್ದಾಡುತ್ತಲಿದ್ದಿತು. ತನಗೂ ದುಃಖದಾಯಕ, ಅನ್ಯರಿಗೂ ದುಃಖದಾಯಕವಾದ ತನ್ನ ಬಾಳಿಗಳಿವೇ ಒಳಿತೆಂಬ ಭಾವನೆ ಪ್ರಬಲವಾಗಲಾರಂಭಿಸಿತು. ಎಷ್ಟೋಸಲ ಬಾವಿಯತ್ತವೂ ಹೊರಟಿದ್ದಳು. ಆದರೆ ಪ್ರೇಮಳ ತಂದೆಯ ನೆನಪು ಮತ್ತೆ ಮರಳಿಸಿತ್ತು ತನಗೊದಗಿದ—ತಾನೇ ತಂದುಕೊಂಡ-ಆ ದುರ್ಮರಣದ ಪರಿಣಾಮ ತಂದೆಯ ಮೇಲೆ ಭೀಕರವಾದೀತೆಂದು ಭಯಗೊಂಡು ಮರಳುತ್ತಲಿದ್ದಳು. ಮತ್ತೆ ಅಳಿವಿನಾಶೆ ಪ್ರಬಲವಾಗಿ ಉಳಿವನ್ನು ಮೀರುತ್ತಲೇ ಇದ್ದಿತು. ಆವಾಗಲೂ ತಂದೆಯ ಪ್ರೇಮ ಮತ್ತೆ ಹಿಂದೆ ಸರಿಸುತ್ತಲಿದ್ದಿತು ತಂದೆಯ ಅವಳಿಗಪಾರ ಪ್ರೇಮ ತನ್ನ ಅನಂತವಾದ ದುಃಖ ಹಿಂದಿಟ್ಟು ತಂದೆಯ ಸಂತಯಿಕೆಯಲ್ಲಿ ತೊಡಗುತ್ತಲಿದ್ದಳು.

ಗಂಗೂನ ಈ ಅದ್ವಿತೀಯ ಎದೆಗಾರಿಕೆ-ತ್ಯಾಗಗಳು ಭೀಮರಾಯರನ್ನೂ ಮಂಕುಗೊಳಿಸುವುವು. ಅವರಿಂದವರಿಗಿನ್ನೂ ದುಃಖವೇ ಉಂಟಾಗುವುದು. ತಂದೆಯ ದುಃಖಬಳೆದಂತೆ ಗಂಗೂ ತನ್ನೆದೆ ಕಲ್ಲು ಮಾಡುವಳು. ಭೀಮರಾಯರ ದುಃಖ ಮತ್ತೂ ಬಳೆಯುವುದು. ಕೊಂಚ ಸಮಯ ಸಿಕ್ಕರೂ ಇಬ್ಬರಿಗೂ ಎಷ್ಟೋ ಹಿತವೆನಿಸಬಹುದಿತ್ತು, ಆದರೆ ಈ ಮಾತಾಡಿಸಲಿಕ್ಕೆ ಬರುವವರು ಅವರಿಗೆ ಬಿಡುವು ಕೊಟ್ಟರಲ್ಲವೆ? ಮುಂಜಾವಿನಿಂದ ಸಂಜೆಯವರೆಗೂ ಬರುವವರ ಗದ್ದಲವೇ ಗದ್ದಲ. ಬಂದವರಾದರೂ ಬೇಗ ಮರಳುವರೆ? ಅದೂ ಇಲ್ಲ. ಹೀಗೆ ಸತ್ತುಹೋದ ಆ ಒಂದು ವ್ಯಕ್ತಿಗಾಗಿ ಇನ್ನೆರಡು ಸಾವಿನ ದಾರಿ ಹಿಡಿಯಲಿದ್ದುವೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

"ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲದು." ಕಾಲಪುರುಷನಾರಿಗೋಸ್ಕರ ಗವೂ ಕಾಯುವುದಿಲ್ಲ. ಗಂಗೂನ ಗಂಡ ಸತ್ತು ನಾಲ್ಕುದಿನಗಳುರುಳಿದುವು. ಮನೆಯಲ್ಲಿನ ನಿತ್ಯದ ಕಾರ್ಯಕ್ರಮಗಳಲ್ಲಾವ ಬದಲೂ ಉಂಟಾಗಲಿಲ್ಲ. ತಂದೆಮಕ್ಕಳ ಗಾಯ ಮಾಯುವ ಬದಲು ಬರಹೋಗುವವರ ಗದ್ದಲದ ಮೂಲಕ ಇನ್ನೂ ಬಳಿಯುತ್ತಲೇ ಇದ್ದಿತು. ಭೀಮರಾಯರು ಕೂಳು ನಿದ್ರೆ ಗಳನ್ನೆಲ್ಲ ತೊರೆದಿದ್ದರು. ಅವರಿಗೆಂದೇ ಜೀವ ಹಿಡಿದ ಗಂಗೂನು ತನ್ನೆದೆ ಕಲ್ಲು ಮಾಡಿ ಆವಾಗಲೂ ತಂದೆಯ ಸಂತಯಿಕೆಯಲ್ಲಿಯೇ ತನ್ನ ಸರ್ವಸ್ವ ಕಾಣು ತ್ತಲಿದ್ದಳು. ಗಂಗೂನ ಬಲುಮೆಗಾಗಿ ಭೀಮರಾಯರು ಬಟ್ಟಲು ಹಾಲನ್ನೋ ತುತ್ತು ಅನ್ನವನ್ನೋ ಸೇವಿಸುತ್ತಲಿದ್ದರು. ಭೀಮರಾಯರ ಆಗ್ರಹದ ಮೂಲಕ ವಾಗಿಯೇ ಗಂಗೂ ಏನಾದರೂ ಅಲ್ಪ ಆಹಾರ ತಕ್ಕೊಳ್ಳುವಳು ತಾನು ಬಲವಂತ ಪಡಿಸಿದಾಗ ಏನನ್ನೂ ತಕ್ಕೊಳ್ಳದೇ, ಗಂಗೂನ ಬಲವಂತಕ್ಕೆ ಬಲಿ ಬೀಳುವದನ್ನು ಕಂಡು ಪಾರ್ವತಿಬಾಯಿಗೆ ಕೋಪವೆನಿಸುವುದು. ಆದರೂ ಬರಹೋಗುವವರ ವಿಚಾರಣೆಯಲ್ಲಿ ಬಿಡುವಿಲ್ಲದಾಗಲು ಸುಮ್ಮನಿರುತ್ತ ಲಿದ್ದಳು. ಆದರೂ ಒಮ್ಮೊಮ್ಮೆ 'ಇಂಥ ಮಾರಿ ಮಗಳನ್ನು ಹೆತ್ತು ಅದಾವ ಸುಖವನ್ನು ಕಂಡೆವು? ಇನ್ನೂ ಏನೇನಾಗಲಿದೆಯೋ ಆರು ಬಲ್ಲರು?' ಎಂದು ಗುಡುಗುವಳು. ಈ ವಾಗ್ಬಾಣ ಗಂಗೂನ ಮರ್ಮಕ್ಕೆ ತಗಲಿದಾಗ ಅವಳಿಗೆ ಬವಳಿ ಬರುವುದು. ಭೀಮರಾಯರೂ ಹತಾಶರಾಗುವರು; ಆದರೆ ನಿರುಪಾಯರು.

ಒಂದೊಂದೇ ದಿನ ಕಳೆದಂತೆ ಗಂಗೂ ಯಂತ್ರದಂತಾದಳು. ಅವಳ ವ್ಯಾಪಾರಗಳು ಯಾಂತ್ರಿಕವಾಗಿಯೇ ನಡೆಯುವುವು. ಎದೆಯು ಕಲ್ಲಿಗಿಂ ತಲೂ ಕಲ್ಲಾಗಿದ್ದಿತು. ಅಳುವೇ ಇಲ್ಲವೆಂದಲ್ಲಿ ಕಣ್ಣಲ್ಲಿ ನೀರೆಲ್ಲಿಂದ? ಯಾರಾ ದರೂ ಬಂದಾಗ ಪಾರ್ವತೀಬಾಯಿ ಅವರೊಡನೆ ರೋದಿಸುವಳು, ಶೋಕಿ ಸುವಳು, ಭೂಮಿ ಬಿರಿಯುವಂತೆ ಆಕ್ರೋಶ ಮಾಡುವಳು. ಪ್ರತ್ಯಕ್ಷ ಸಂಕ ಟಕ್ಕೆ ಗುರಿಯಾದ ಗಂಗೂ ಕೂಡಾ ಹಾಗೇ ಮಾಡಬೇಕೆಂದಪೇಕ್ಷಿಸುವುದು ಸ್ವಾಭಾವಿಕ; ಆದರೆ ಅವಳಲ್ಲಿ ಭಾವನೆಯೆಂಬುದುಳಿದಿದ್ದರಲ್ಲಲ್ಲವೆ? ಹೃದ ಯವೇ ಹೆಪ್ಪುಗಟ್ಟಿದ್ದಿತು. ಇದರಿಂದ ಪಾರ್ವತೀಬಾಯಿಗಾಗಲಿ, ಬಂದವರಿ ಗಾಗಲಿ ಗಂಗೂನ ಮೇಲೆ ಇನ್ನೂ ಕೋಪ ಹೆಚ್ಚು. ಅವರೆಲ್ಲ ಗಂಗೂನನ್ನು

ಆದೆಷ್ಟೋ ಟೀಕಿಸುವರು. ಕೊನೆಗೆ 'ಗಂಗೂನನ್ನು ಶುದ್ಧ ಮಾಡಿಯೋ ಬಿಡಿರಿ.' ಎಂದು ಸೂಚಿಸುವರು. ಪಾರ್ವತೀಬಾಯಿಯಂತಹ ಧರ್ಮ ನಿಷ್ಠಳಿಗೀ ಸೂಚನೆ ಅನಪೇಕ್ಷಿತವೇನೂ ಅನಿಸಲಿಲ್ಲ. ಒಮ್ಮೆಲೇ ಸಮ್ಮತಿ ಸುಚಳು. ಗಂಗೂನಿಗೀ ವಾರ್ತೆಯಿಂದ ಎಂತಹ ಆಘಾತವಾದೀತೆಂಬ ವಿಚಾರಕ್ಕವಕಾಶವೇ ಇರಲಿಲ್ಲ.

ಐದನೆಯ ದಿನವುದಿಸಿತು. ವಿಶೇಷವೇನಾದರೂ ಸಂಭವಿಸಬಹುದೆಂದಾರೂ ನಿರೀಕ್ಷಿಸಲಿಲ್ಲ; ಮತ್ತು ನಡೆಯಬೇಕಾದರೂ ಏನು? ಇನ್ನಾರಾದರೂ ಹೊಸಬರು ಮತ್ತೆ ಬರಬಹುದು. ಮತ್ತೆ ಅಳುವು ಆಕ್ರೋಶಗಳ ಇನ್ನೊಂದು ಪ್ರದರ್ಶನ ನಡೆಯುವುದು. ಇಷ್ಟೇ ತಾನೆ?

ಅಂದು ಭೀಮರಾಯರ ಆಪ್ತರಲ್ಲೊಬ್ಬನಾದ ಕೃಷ್ಣರಾಯ ಬಂದ. ಸುಶಿಕ್ಷಿತನಿದ್ದು ಮಾಮಲೇದಾರ ಅಧಿಕಾರದಲ್ಲಿದ್ದನ; ಆವರ ಸುವಿಚಾರಿ. ಪ್ರೇಮಳ ಸ್ವಭಾವದವ; ಭೀಮರಾಯರಲ್ಲಿ ಆಗಾಗ ಬರುತ್ತಲಿದ್ದನು. ಗಂಗು ಅವನಿಗೆ 'ಅಣ್ಣಾ' ಅನ್ನುತ್ತಲಿದ್ದಳು. ಅಣ್ಣನೆಂದೇ ಭಾವಿಸಿದ್ದಳು. ಗಂಗೂನ ಸುಸ್ವಭಾವ ಸದ್ಗುಣಗಳಿಗೆ ಆಕರ್ಷಿತನಾಗಿ ಗಂಗೂನನ್ನು ತನ್ನ ಒಡಹುಟ್ಟಿದ ತಂಗಿಯೆಂದೇ ತಿಳಿದಿದ್ದನು. ಭೀಮರಾಯರಿಗೆ ಕೃಷ್ಣರಾಯ ಬಂದುದನ್ನು ಕಂಡು ಅಂತಹ ಭೀಕರ ದುಃಖದಲ್ಲಿಯೂ ಕೊಂಚ ಹಗುರೆನಿಸಿತು. 'ಚಿಕ್ಕಪ್ಪಾ, ಮದುವೆಗೆ ಅದೆಷ್ಟು ಯತ್ನಿಸಿದರೂ ಬರಲಾಗಲಿಲ್ಲ; ಆದರೆ ಇದೇನನ್ನು ನೋಡಲು ಬಂದಿರುವೆ ನಾನು?' ಎಂದು ಕಾತರತೆಯಿಂದ ನುಡಿದನು. 'ಅಪ್ಪಾ, ಕೃಷ್ಣ' ಆಗ ಬರುವವರನೇಕರು; ಆದರೆ ಇಂತಹ ಸಂಕಟ ಕಾಲದಲ್ಲಿ ಬರುವವರಾದರೂ ಯಾರು? ನಿನ್ನಂತಹರಿಗಿದೇ ಯೋಗ್ಯವಾದ ಕಾಲ. ಹಿತಕರವಾದ ಎರಡು ಮಾತು ಹೇಳುವ ನಿಜವಾದ ಆಪ್ತನೆಂದರೆ ನೀನೇ.' ಎಂದು ತಿಳಿ ಮನದಿಂದ ಭೀಮರಾಯ ನುಡಿದರು. ಗಂಗು ತಂದೆಗೆಂದು ಹಾಲು ತೆಗೆದುಕೊಂಡು ಅದೇ ಒಳಬಂದವಳು. 'ಅಣ್ಣಾ.' ಎಂದು ಕೂಗಿ ಬಿದ್ದು ಬಿಟ್ಟಳು. ಇದುವರೆಗೆ ಕಟ್ಟೆ ಹಾಕಿದ ದುಃಖಸಮುದ್ರ ಕೋಡಿಯೊಡೆಯಿತು. ಇಬ್ಬರೂ ಗಾಬರಿಯಿಂದ ಗಂಗೂನನ್ನು ಹಿಡಿದೆತ್ತಿ ಆರೈಕೆಮಾಡಿದರು. ಒಡನೆಯೇ ಅನೇಕರು ನೆರೆದು ತಲೆಗೊಬ್ಬರಂತೆ ಮನಬಂದ ಮಾತುಗಳಾಡಹತ್ತಿದರು. ಈ ಕ್ಷುದ್ರ ಮನೋವೃತ್ತಿ ಕೃಷ್ಣರಾಯನನ್ನು ತೀರಾ ರೇಗಿಸಿತು. 'ಹೊರ ಹೊರಡಿರಿಲ್ಲಿಂದ.' ಎಂದು ಅಧಿಕಾರವಾಣಿಯಿಂದ ಕೂಗಿದನು. ಷರ

ಕಾರೀ ಅಮಲದಾರ, ಆಜ್ಞಾಪಿಸುವ ರೀತಿಯರಿತವ. ಅವನಾ ಆಜ್ಞಾ ಒಡನೆಯೇ ಅಕ್ಷರಶಃ ಪಾಲಿತವಾಯಿತು. ಪಾರ್ವತೀಬಾಯಿ ಸಹಿತವಾಗಿ ಎಲ್ಲರನ್ನೂ ಹೊರಕ್ಕಟ್ಟಿ, ಬಾಗಿಲು ಭದ್ರವಾಗಿ ಮುಚ್ಚಿ, ಗಂಗೂನ ಹಾಸಿಗ ಬಳಿ ಬಂದನು.

ಗಂಗೂನ ಆ ದುರವಸ್ಥೆ ಕೃಷ್ಣರಾಯನ ಎದೆಯನ್ನು ನೀರಾಗಿಸಿತು. ಸತ್ತ ಗಂಡನ ಬಗ್ಗೆ ಶೋಕಿಸುವದು ಸ್ವಾಭಾವಿಕ; ಆದರದಕ್ಕೊಂದು ಸೀಮೆಯಿಲ್ಲವೆ? ಅದೇ ಸ್ಥಿತಿ ಉಳಿಯಗೊಟ್ಟಲ್ಲಿ ಗಂಗೂನ ಅಂತವು ದೂರವಿರಲಿಲ್ಲವೆಂದರಿತು ನಡುಗಿದನು ಗಂಗೂನ ಅಂತವೇ ಭೀಮರಾಯರ ಹೃದ್ರೋಗ ಒಡನೆಯೇ ಕೃಷ್ಣರಾಯ ಭೀಮರಾಯರ ಕೈ ಹಿಡಿದು, 'ಚಿಕ್ಕಪ್ಪಾ,' ಪರಿಸ್ಥಿತಿಯೀ ಮಟ್ಟಕ್ಕಿಳಿದಿರಬಹುದೆಂದು ನನಗನಿಸಿರಲಿಲ್ಲ. ಹುಟ್ಟುವುದೂ, ಸಾಯುವುದೂ ಪ್ರಕೃತಿ ನಿಯಮವೆಂದು ನಾನು ನಿಮಗೆ ಹೇಳಬೇಕೆ? ನೀವೇ ಈ ಪರಿ ಮನಕ್ಕೆ ಹಚ್ಚಿಕೊಂಡರೆ ಉಳಿದವರ್‍ಪಾಡೇನು? ಭೀಮರಾಯರ ಮುಖದಿಂದ ಮಾತುಗಳೇ ಹೊರಡದಾದುವು. ಮೂರ್ತಿಮಂತ ದೈನ್ಯ ತಾಂಡವವಾಡುತ್ತಲಿದ್ದಿತು. ದೈನ್ಯದಿಂದ ಗಂಗೂನತ್ತ ಕಣ್ತಿರುವಿದ. ಅಷ್ಟರಿಂದಲೇ ಭೀಮರಾಯರಾಶಯ ಶಬ್ದಗಳಿಗಿಂತಲೂ ಹೆಚ್ಚಾಗಿ ಮನವರಿಕೆಯಾಯಿತು. 'ಗಂಗಕ್ಕಾ, ಗಂಗೂ, ಏನಿದು? ಸತ್ತವರೊಡನೆ ಯಾರಾದರೂ ಸಾಯುತ್ತಾರೆಯೆ? ಮತ್ತು ಹಾಗೆ ಸಾಯುವುದರಲ್ಲಿ ಆವುದಾದರೂ ಸಾರ್ಥಕತೆಯಿದೆಯೆ? ನೀನೇನು ತೀರಾ ಅಜ್ಞಳಲ್ಲ. ಚಿಕ್ಕಪ್ಪನತ್ತ ನೋಡು.' ಎಂದು ಕಳಕಳಿಯಿಂದ ನುಡಿದನು. 'ಅಣ್ಣಾ, ಸತ್ತಂತಿರುವುದಕ್ಕಿಂತಲೂ ಸತ್ತರೇನೇ ಒಳಿತಲ್ಲವೆ?' ಎಂದು ಎದೆಗರಗುವಂತೆ ನುಡಿದಳು. ಆ ಒಂದೇ ಒಂದು ವಾಕ್ಯದಲ್ಲಿ ಅದೆಷ್ಟು ಅರ್ಥವಡಗಿದ್ದಿತು? ಸಮಾಜ, ಮೂಢರೂಢಿ, ಶಿಷ್ಟರೆಂದು ಕರೆದುಕೊಳ್ಳುವವರ್‍ಆ ಶಿಷ್ಟಾಚಾರ ಎಲ್ಲವುಗಳ ಸತ್ಯಸ್ಮೃತಿ ಅಡಕವಾಗಿದ್ದಿತು. ಇಬ್ಬರ ಕಣ್ಣುಗಳೂ ನಿಚ್ಚಳವಾಗಿ ತೆರೆದುವು. ಕೃಷ್ಣರಾಯನೊಮ್ಮೆಲೇ 'ಗಂಗೂ ಹುಚ್ಚಿಯಂತಾಚರಿಸಬೇಡ. ಜೀವನದ ಪ್ರತಿ ಕ್ಷಣ ಪರ ಹಿತ, ಸಮಾಜದುದ್ಧಾರಕ್ಕೆ ಹಾಕು. ಅಪಾರವಾದ ಕಾರ್ಯ ಕೈಗೂಡಿಸಲು ಪರಮಾತ್ಮ ನಿನಗೊಂದಪೂರ್ವ ಸಂಧಿ ದೊರಕಿಸಿ ಕೊಟ್ಟಿರುವ. ಬಚ್ಚಲ ಒಲೆ, ಅಡುಗೆ, ಮಕ್ಕಳೇ ನಿನ್ನ ಕಾರ್ಯಕ್ಷೇತ್ರವಲ್ಲ. ನಿನ್ನಂತಹಳಿಗದು ಯೋಗ್ಯವಲ್ಲವೆಂದೇ ಪರಮೇಶ್ವನಾಬಂಧನ ಹರಿದೊಗೆದಿರುವ.

ಹುಚ್ಚಿಯಂತಾಚರಿಸಬೇಡ.' ಎಂದು ತಿಳಿಮನದಿಂದ ನುಡಿದನು. ಕೃಷ್ಣರಾಯನ ಮಾತುಗಳ ಪರಿಣಾಮವೇನಾಯಿತೋ? ಇರಲಿ. ಆದರೆ ನಿತ್ಯಕ್ರಮ ಗಡಿಯಾರದಂತೆ ಮತ್ತೆ ಮೊದಲುಗೊಂಡಿತು.

ಮಾತನಾಡಿಸುವವರ ಕೀಟಲೆ ಇನ್ನೂ ಬಳೆಯಿತು. ಒಲ್ಲದ ಮನಸ್ಸಿನಿಂದ ಬಂದವರನ್ನು ಕಾಣಬೇಕು. ವಿದ್ಧಹೃದಯನಾಗಿ ಮರಳಬೇಕು. ಹೃದಯ ತಂತಿ ಹರಿಯಲಿದ್ದಾಗ ಬೇರೊಂದಾಘಾತ ಸಹಿಸಬೇಕು. ಪ್ರತಿಪ್ರದರ್ಶನ ಇಷ್ಟಿಷ್ಟು ರಕ್ತ ಸುಟ್ಟು ದೇಹ ಕ್ಷಯಿಸುತ್ತಲಿದ್ದಿತು. ಕೃಷ್ಣರಾಯ ವಸ್ತುಸ್ಥಿತಿಯರಿತು ಬಹಳವಾಗಿ ಕೋಪಿಸಿದ. ಈ ನಾಟಕಕ್ಕೊಂದು ತಡೆಯೊಡ್ಡದಿದ್ದರೆ ಮುಂದಿನ ಭೀಕರ ಪರಿಣಾಮ ತಡೆಯಿಲ್ಲದಾಗುವದೆಂದು ಮನದಂದು, 'ಚಿಕ್ಕಮ್ಮಾ, ಏನಿದು ಈ ನಿಮ್ಮ ನಾಟಕ?' ಎಂದು ರೋಷದಿಂದ ಕೇಳಿದ. ಕೃಷ್ಣರಾಯನ ಪ್ರಶ್ನೆ ಪಾರ್ವತೀಬಾಯಿಯನ್ನು ಕೊಂಚ ನಡುಗಿಸಿತು. ಒಡನೆಯೇ ಸುಧಾರಿಸಿಕೊಂಡು 'ಏನೋ ಕೃಷ್ಣು, ಲೋಕಾರೂಢಿಪ್ರಕಾರ ಮಾತಾಡಿಸ್ಲಿಕ್ಕೆ ಬರ್ತಾರ. ಬಂದವ್ರ ಸಂಗ್ತೀ ಮಾತಾಡ್ದಿದ್ರೆ ಜನರೇನಂದಾರು?' 'ಅಹುದು ಈ ಶಿಷ್ಟಾಚಾರ ನಿಮಗೆ ಆಟ ಆಗಿದ್ದರೂ ಉಳಿದವರಿಗೆ ಪ್ರಾಣಸಂಕಟ ಆಗುವದು ನಿನಗೆ ಗೊತ್ತೆ?' ಎಂದು ರುಕ್ಷವಾಗಿ ಕೇಳಿದ. 'ಇದೇನೋ ಕೃಷ್ಣು? ನೀಯೇನ ಹೇಳ್ತೀದಪ್ಪಾ? ಆಟೇನು, ಪ್ರಾಣಸಂಕಟೇನು? ಈಗ ಉಳ್ದಿದ್ದಾದ್ರೂ ಏನು?' ಎಂದು ಅಳುತ್ತ ಕೇಳಿದಳು. 'ಚಿಕ್ಕಮ್ಮಾ, ಈಗಾದ ಅನರ್ಥ ಸಾಕಾಗಿಲ್ಲವೆ? ಇಲ್ಲಿ ನೋಡು, ನಿಮ್ಮ ಈ ನಾಟಕದಿಂದ ಚಿಕ್ಕಪ್ಪನ ಸ್ಥಿತಿಯೇನಾಗಿದೆ? ಗಂಗೂನ ಅವಸ್ಥೆಯೇನಾಗಿದೆ?' ಗಂಗೂನ ಹೆಸರು ಪಾರ್ವತೀಬಾಯಿಯನ್ನು ರೇಗಿಸಿತು. 'ಆ ಮಾರಿಯಿಂದಲೇ ನಮಗೀ ಸ್ಥಿತಿ?' ಎಂದು ದ್ವೇಷದಿಂದ ನುಡಿದಳು. ಕೃಷ್ಣು ಚಕಿತನಾದ. 'ಚಿಕ್ಕಮ್ಮಾ, ಇಂಥ ಮಾತು ನಿನ್ನ ಬಾಯಲ್ಲಿ ಬರಬೇಕೆ? ನೀನು ಹೆತ್ತ ತಾಯಿಯಲ್ಲವೆ? ತಾಯಿಯ ಕರುಳು ಹರಿಯಿತೆ? ತಾಯಿಯೆದೆ ಕಲ್ಲಾಯಿತೆ? ಚಿಕ್ಕಮ್ಮಾ, ಕಾಲು ಬೀಳುತ್ತೇನೆ; ಇಂಥ ಮಾತು ಇನ್ನೆಂದೂ ಆಡಬೇಡ. ತಾಯ್ತನ-ಪರಿಶುದ್ಧವಾದ ಪವಿತ್ರವಾದ ತಾಯ್ತನಕ್ಕೆ ಕುಂದು ತರಬೇಡ. ಅದೂ ಇರಲಿ. ಭೀಮರಾಯರಾದರೂ ಸುರಕ್ಷಿತವಾಗುಳಿಯಬೇಕೆಂದು ನಿನ್ನ ಆಶೆಯಿದೆಯೋ?' ಪಾರ್ವತಿಬಾಯಿ ಮೆಟ್ಟಿಬಿದ್ದಳು. 'ಹಾಂ! ಕೃಷ್ಣು, ಹಾಗೆಂದಾದರೂ ನಾನಂದೇನೆ?' 'ಚಿಕ್ಕಮ್ಮಾ, ಬಾಯಿಯಿಂ

ದನ್ನದಿದ್ದರೂ ಕ್ರೌರ್ಯದಿಂದಾಚರಿಸುತ್ತಲಿರುವೆ. ಏನು ಮಾಡುತ್ತಲಿರುವೆ ನೆಂದರಿಯದೇ ಮಾಡುತ್ತಲಿರುವೆ. ಇದೇ ರೀತಿ ಇನ್ನು ಮೂರು-ನಾಲ್ಕು ದಿನ ನಡೆದರೆ ಭೀಮರಾಯರ ಸ್ಥಿತಿ ಕೈಮೀರಬಹುದು.' ಪಾರ್ವತೀ ಬಾಯಿಗೀಮಾತು ಮರ್ಮಕ್ಕೆ ನಾಟಿತು. ಗರ್ಭಗಲಿತಳಾದಳು. ನಿಂತ ಲ್ಲಿಯೇ ಕುಸಿ ಕುತಳು.' ಕೃಷ್ಣು, ಹಾಗೆಲ್ಲ ಅಮಂಗಲ ಮಾತಾಡಬೇಡಪ್ಪಾ. ನನ್ನದೇನು ತಪ್ಪಾಯಿತೆಂಬದು ಹೇಳು. ಮಾಂಗಲ್ಯ ಕಳೆಯಬೇಕೆಂದು ಯಾವ ಮುತ್ತೈದೆ ಅಂದಾಳು?' ದೀನಳಾಗಿ ನುಡಿದಳು. 'ಚಿಕ್ಕಮ್ಮಾ, ನಿನಗೆ ನಿನ್ನ ಮಾಂಗಲ್ಯ ಮಾತ್ರ ಬೇಕಾಗಿದೆ. ಮಾಂಗಲ್ಯಕ್ಕಾಗಿ, ಕುಂಕು ಮಕ್ಕಾಗಿ ಗಂಡ ಬೇಕು. ನಿಮ್ಮ ಎಲ್ಲ ಆಶೆ-ಸಹಾನುಭೂತಿಗಳು ಬರೀ ಸೌಭಾಗ್ಯಕ್ಕೆ, ಆ ವ್ಯಕ್ತಿಗಲ್ಲ. ಧಿಕ್ಕಾರ ನಿಮ್ಮ ಹೀನವೃತ್ತಿಗೆ' ಕೃಷ್ಣನ ನಿರ್ಭರ್ತ್ಸನೆಯ ಮಾತು ಕೇಳಿ ಪಾರ್ವತೀಬಾಯಿ ಮಂಕಳೇ ಆದಳು. 'ಅಲ್ಲೋ ಕೃಷ್ಣು, ಸೌಭಾಗ್ಯ ಮತ್ತು ಪತಿ ಬೇರೆ ಬೇರೆಯೇನು?' ಅಹುದ ಹುದು, ನಾನು ಹೇಳಿದುದೂ ಇದೇ. ಪತಿಯಾಗಿರುವನೆಂದೇ ಆ ವ್ಯಕ್ತಿಯುಳಿ ಯಬೇಕೆನ್ನುವಿರಿ. ಸೌಭಾಗ್ಯವವನನ್ನವಲಂಬಿಸಿರದಿದ್ದರೆ ನೀವಾ ವ್ಯಕ್ತಿಯತ್ತ ಇಣಕುತ್ತಿರಲಿಲ್ಲ ಕೂಡಾ. ಚಿಕ್ಕಮ್ಮಾ, ಬರೀ ಮಾಂಗಲ್ಯದಿಂದೇನಾದೀತು? ಕ್ರೂರ ವೃತ್ತಿಯಿಂದ ಮುತ್ತೈದೆಯಾಗಿ ಸತ್ತರೂ ಮೋಕ್ಷ ಸಿಕ್ಕದು. ಆದರಾ ವ್ಯಕ್ತಿಯ ಬಗ್ಗೆ ದಯೆಯಿರಬೇಕು. ದಯೆಯಿಲ್ಲದ ಆ ನಿಮ್ಮ ಧರ್ಮ ವೆಲ್ಲ ವ್ಯರ್ಥ.'

'ಕೃಷ್ಣು, ಸುಮ್ಮನೆ ಯಾಕೆ ಹಳೀತಿ? ನಾವೆಲ್ಲ ಹಳೇ ಕಾಲದವರು, ಹೋಗಲಿ. ಈಗೇನನ್ನುತ್ತೀ?'

'ಇನ್ನೇನಿಲ್ಲ. ನಿಮ್ಮ ಈ ದುಃಖಪ್ರದರ್ಶನದ ನಾಟಕ ನಿಲ್ಲಿಸಬೇಕು. ಆಗಲೇ ಬೇಕೆಂದಲ್ಲಿ ಹೊರಪಡಸಾಲೆಯಲ್ಲಿ ನಡೆಯಲಿ. ಚಿಕ್ಕಪ್ಪನಾಗಲಿ, ಗಂಗೂನಾಗಲಿ ಅಲ್ಲಿಗೆ ಬರಕೂಡದು. ಯಾರಾದರೂ ಬರಲೇಬೇಕಿದ್ದರೆ ನಾನು ಬರುವೆ. ಚಿಕ್ಕಮ್ಮಾ ನಾನಿನ್ನೊಮ್ಮೆ ಹೇಳುವೆ 'ನಿನಗೆ ನಿನ್ನ ಸೌಭಾಗ್ಯ ವುಳಿಯಬೇಕೆಂದಿದ್ದರೆ ನಾನು ಹೇಳಿದಂತೆ ಮಾಡು. ಇಲ್ಲವಾದರೆ———'

'ಬೇಡಪ್ಪಾ ನಿನ್ನ ಮುಂದಿನ ಆ ಅಭದ್ರ ನುಡಿ ಆಡಬೇಡ. ನಿನಗೆ ಬೇಕಾದಂತೆ ಮಾಡು.'

ಅಂದಿನಿಂದ ಆ ಶೋಕಪ್ರದರ್ಶನದ ಸಭೆ ನೆರೆಯುವುದು ನಿಂತಿತು. ತಂದೆ-ಮಗಳಿಬ್ಬರಿಗೂ ಎಷ್ಟೋ ಮಟ್ಟಿಗೆ ಹಗುರೆನಿಸಿತು. ತಮ್ಮಷ್ಟಕ್ಕೇ ಕುಳಿತು ಎದೆ ಅಲ್ಪವಾದರೂ ಹಗುರುಮಾಡಿಕೊಳ್ಳಲನುವಾಯಿತು; ಆದರೆ ಜನತೆಯಲ್ಲಿ ತೀರಾ ವಿರುದ್ಧವಾದ ಪರಿಣಾಮವಾಯಿತು. ಬರಿಯ ವಿಚಿತ್ರವೆನಿಸಿತಷ್ಟೇ ಅಲ್ಲ, ಅನಾಚಾರವೂ ಎನ್ನಿಸಿತು. ಪ್ರಚಾರ, ಟೀಕೆ-ಟಿಪ್ಪಣೆಗಳೂ ನಡೆದವು. ಪಾರ್ವತೀಬಾಯಿಯೆದುರು ಆಡಿಯೂ ತೋರಿಸಿದರು. ಪಾರ್ವತೀಬಾಯಿಗೂ ನಿಜವೆನಿಸಿತು; ಆದರೆ ಅಸಹಾಯಳಾಗಿದ್ದಳು. ಗಂಡನ ಪ್ರಾಣದ ಹೆದರಿಕೆಯೂ ಇದ್ದಿತು. ಆದರದಕ್ಕಿಂತಲೂ ಹೆಚ್ಚಾದುದು ಕೃಷ್ಣರಾಯನ ಭಯ. ಅವನು ಹಟವಾದಿಯೆಂದರಿತಿದ್ದಳು. 'ತಮ್ಮ ಮನೆಯಲ್ಲಿ ಅವನದೇನು?' ಎಂಬ ಯೋಚನೆಯಿದ್ದರೂ ಆಗಿನ ಮಟ್ಟಿಗಾದರೂ ಅದಕ್ಕವಕಾರವಿರಲಿಲ್ಲ. ಮುಂದಿನ ಮಹತ್ಕಾರ್ಯ (?) ಸಾಗಿಸಬೇಕಾಗಿದ್ದಿತಲ್ಲವೆ' ಅದೇನೋ ಪೂರ್ವ ಜನ್ಮದ ಪಾಪದ ಫಲವಾಗಿ ತಮಗೂ ಆ ಕರಿಗಾಲಿನ ಗಂಗೂನಿಗೂ ಅಂತಹ ವಿಪತ್ತು ಬಂದಿದ್ದಿತು; ಆದರೆ ಅವಳನ್ನು ಶುದ್ಧ ಮಾಡದೆ ಬಿಟ್ಟಿದ್ದಾದರೆ—ಇನ್ನೂ ಅದೆಂತಹ ಪಾಪ ಘಟಿಸುವದೋ, ಅಪರ ಭೀಕರ ಪರಿಣಾಮವೇನಾದೀತೋ? ಎಂಬ ಭಯವಿದ್ದಿತು. ಅಂತಹ ಮಹತ್ಕಾರ್ಯಕ್ಕೆ ಭೀಮರಾಯರು ವಿರೋಧಿಸುವದಿಲ್ಲವೆಂದವಳರಿತಿದ್ದಳು; ಆದರೆ ಆ ಕೃಷ್ಣು? ಯಾರಿಗೆ ಗೊತ್ತು? ಅದಕ್ಕೂ ಅಡ್ಡಿಯೊಡ್ಡಿದರೆ? ಏಳು ತಲೆಗಳಿಂದ ತಮ್ಮ ಕುಲ ನರಕದಲ್ಲಿ ಬೀಳಲಿಲಿಕ್ಕಿಲ್ಲವೆ? ಮುಂತಾದ ಯೋಚನೆಗಳಿಂದ ಪಾರ್ವತೀಬಾಯಿ ಎಲ್ಲ ಟೀಕೆ-ಟಿಪ್ಪಣೆಗಳನ್ನೂ ಸಹಿಸಿದಳು.

ಬೀಮರಾಯರೂ ಸಮಾಧಾನಗೊಂಡರು. ಶಾಂತವಿಚಾರಕ್ಕಾಸ್ಪದ ದೊರೆಯುತ್ತಲೇ ಆದ ಅನರ್ಥದ ಬೆಲೆಯೂ ಕಡಿಮೆಯೆನಿಸತೊಡಗಿತು. ಮನೆಯಲ್ಲಿ ಇನ್ನಾರೂ ಮಕ್ಕಳಿರಲಿಲ್ಲ. ವಿಶೇಷ ಪ್ರಾಪ್ತಿಯಿದ್ದಿತು. ಅದೆಲ್ಲಕ್ಕೂ ಗಂಗೂನೇ ಒಡತಿ. ಧರ್ಮಕಾರ್ಯಗಳಲ್ಲಿ ಮನಸ್ಸು ತೊಡಗಿಸಿದರಾಯಿತು. ಬೇಕಾದ ಸುಖ-ಶಾಂತಿಗಳು ತಾವೇ ಲಭಿಸುತ್ತವೆ. ದೇವರ ಪೂಜೆಯಲ್ಲಿ ಮನ ತೊಡಗಿಸಿದರೆ ಸಾರ್ಥಕತೆಯೂ ಆಗುವದು. ಮುಂ, ತಾಗಿ ಯೋಚಿಸುತ್ತ ಅವರೂ ಅದೆಷ್ಟೋ ಶಾಂತರಾದರು.

ಗಂಗೂನ ವಿಚಾರವಾದರೂ ಇನ್ನೇನಿರಲಿಲ್ಲ. ತನ್ನ ಹಣೇಬರೆಹ ತಾನೇ ಕಂಡುಕೊಂಡಿದ್ದಳು. ಅನ್ಯ ವಿಧವೆಯರ ಬಾಳು ತನಗೂ ಪ್ರಾಪ್ತವಾಗಿದ್ದಿ

ತೆಂದರಿತಿದ್ದಳು. ಎಂದಾದರೊಂದು ದಿನ ಹೀಗೆಯೇ ಸಾಯುವುದೆಂದು ಕೊಂಡು, ಇರುವಷ್ಟು ದಿನವಾದರೂ ತಂದೆಗಾಗಿ ಜೀವಿಸಬೇಕೆಂದಳು. ಆತ್ಮಹತ್ಯೆಯಿಂದಾಗಬಹುದಾದ ಪಿಶಾಚಿಯ ಜೀವನಕ್ಕಿಂತಲೂ ವಿಧವೆಯ ಬಾಳೇ ಒಳಿತೆಂದು ಜೀವಿಸಿರಲು ಮನ ತಿರುಗಿಸಿದಳು.

ಹತ್ತನೆಯ ದಿನ ಉದಿಸಿತು. ಪಾರ್ವತೀಬಾಯಿಯ ಚಟುವಟಿಕೆಗಳಿಗಾರಂಭವೂ ಆಯಿತು. ಧರ್ಮನಿಷ್ಠ ಮನೆತನ. ರಾಮಶಾಸ್ತ್ರಿಗಳಂತಹ ಕರ್ಮನಿಷ್ಠರೇ ಪುರೋಹಿತರು. ಊರ ಪತಿವ್ರತೆಯರುಪದೇಶ. ಗಂಗೂನ ಶುದ್ಧೀಕರಣ ನಿಶ್ಚಿತವಾಯಿತು. ಭೀಮರಾಯರ ಸಮ್ಮತಿಯೂ ದೊರೆತಿತು. 'ಇಂದಿಲ್ಲ ನಾಳೆಯಾದರೂ ಆಗಲೇಬೇಕಲ್ಲವೆ? ಆದಷ್ಟು ಬೇಗನೇ ಆಗಿ ಬಿಟ್ಟರೆ, ಮನ ಅತ್ತಿತ್ತ ಹೊಯ್ದಾಡದಿರುವಾಗಲೇ ಧರ್ಮಕಾರ್ಯಗಳಲ್ಲಿ ತೊಡಗಿಸಿದರೊಳಿತಲ್ಲವೆ? ಆ ಕೇಶಪಾಶವಿರುವವರೆಗೂ ಧರ್ಮಕಾರ್ಯಗಳಿಗವಕಾಶವಿಲ್ಲ. ಹಿಂದಿನ ಪಾಪದ ಫಲವನ್ನನುಭವಿಸುತ್ತ ಧರ್ಮಕಾರ್ಯಗಳಲ್ಲಿ ತೊಡಗಿದ್ದರೆ ಮುಂದಾದರೂ ಸುಖ ದೊರೆತೀತಲ್ಲವೆ?' ಎಂಬವೇ ಭೀಮರಾಯರ ವಿಚಾರಗಳು 'ಆದರೂ ಅವಳು ವಿಕಾರ ಹೊಂದುವಳಲ್ಲ?' ಅಂಥ ವಿಕೃತರೂಪ ನೋಡಲು ಮನವೊಮ್ಮೆಲೇ ಸಿದ್ಧವಾಗಲಿಲ್ಲ; ಮತ್ತು ತಮ್ಮ ಮಾತು ನಡೆಯುದೆಂದಿದ್ದರೂ 'ಕೆಲ ದಿನ ಹೋಗಲಿ,' ಎಂದೊಂದು ಮಾತನ್ನಾಡಿದರು. ಪಾರ್ವತೀಬಾಯಿ ಒಮ್ಮೆಲೇ ಹೆಡೆ ತುಳಿದ ನಾಗರ ಹಾವಿನಂತಾದಳು. 'ಏನು, ಧರ್ಮವಿಲ್ಲ-ಕರ್ಮವಿಲ್ಲ ಅಂಥವರು ಏನ್ಮಾಡಿದ್ರೂ ನಡೆದೀತು? ನಾವು ನಮ್ಮ ಮನೆಯಲ್ಲಿ ಹೀಗೇ ಇಟ್ಟುಕೊಂಡು ಕುಳಿತರೆ ಜನರು ಬಾಯಲ್ಲಿ—' ಮುಂತಾಗಿ ಆಕ್ರೋಶ ಮಾಡಿದಳು.

'ಸುಮ್ಮನೇ ಬಾಯಿಬಿಡಬೇಡ. ಚಿಕ್ಕವಳು—'

'ಸಣ್ಣವಳಾಗಲಿಕ್ಕೇನು ಧಾಡಿ? ಆಚೇ ಮನಿ ರಂಗು ಹತ್ತು ವರ್ಷ ದಾಕಿ ಇರ್ಲಿಲ್ಲ? ನೀವs ಆಕೀನ್ನ ಶುದ್ಧ ಮಾಡ್ಲಿಕ್ಕೆ ಹೇಳ್ಳಿಲ್ಲs? ಈಗ ನಿಮ್ಮುತ್ತು ಬಂತು ಅಂತ ಹೀಂಗ ಏನು? ಅದೇನಿಲ್ಲ. ಈ ಕೆಲಸ ಆಗ್ದಿದ್ರ ನಾ ಮನ್ಯಾಗs ಇರೂದಿಲ್ಲ.—' 'ನನಗೂ ತಿಳಿಯುತ್ತಿದೆ; ಆದರೆ ಈ ಪೆಟ್ಟು ಸಹಿಸುವದು ಗಂಗೂನಿಂದಾದೀತೇ?'

'ಸತ್ರ ಸಾಯ್ಲಿ. ಅಂಥಾ ಚಲೋ ಗಂಡನ್ನಿನೀಗಿಇದ್ದಾರs ಮಾಡೂದೇನು?'

ಮುಂತಾಗಿ ಚರ್ಚೆಯಾಗಿ ಶುದ್ಧೀಕರಣ ನಿಶ್ಚಿತವಾಯಿತು.

# ಪ್ರಾಣದಾತ—ತಂದೆ

ಗಂಗೂನನ್ನು ಶುದ್ಧಮಾಡುವ ವಿಷಯ ಪಸರಿಸಿತು. ಅನೇಕರಲ್ಲಿ ಅನೇಕಬಗೆಯ ಭಾವನೆಗಳನ್ನುಂಟು ಮಾಡಿತು. ಊರಿನ ವಿಧವಾಸಮಾಜಕ್ಕೆ ಸಮಾಧಾನವೇ ಆಯಿತು. ಇನ್ನೊಬ್ಬ 'ಮೆಂಬರ' ದೊರೆತಳೆಂದು. ವೇಣೂ ತಾಯಿ, ಭಾಗಕ್ಕ ಮುಂತಾದವರಿಗೆ ತೀರಾ ಹರುಷವಾಯಿತು. ತಮ್ಮ ಮಾತು ನಡೆಯಿತೆಂದು ಪಾರ್ವತೀಬಾಯಿಯನ್ನು ಸತೀ ಸಾವಿತ್ರಿಯೆಂದೋ, ಧರ್ಮಮೂರ್ತಿಯೆಂದೋ ಹೊಗಳಿದರು. ಹಲವರಿಗೆ ಚಿಕ್ಕವಳೆಂದು ಕನಿಕರವೆನಿಸಿದರೆ ಕೆಲವರಿಗೆ ಧರ್ಮರಕ್ಷಣೆಯಾಯಿತೆಂದು ಹರುಷವೆನಿಸಿತು. 'ಆಗಲೇಬೇಕಾದ ವಿಧಿ'ಯೆಂಬ ಬಗ್ಗೆ ಎಲ್ಲರಲ್ಲಿಯೂ ಒಮ್ಮತವಿದ್ದಿತು. ಕಾಲದ ವಿಷಯವಾಗಿ ಸ್ವಲ್ಪ ಭಿನ್ನಾಭಿಪ್ರಾಯವಿದ್ದಿತು. ಅಷ್ಟೇ.

ಕೃಷ್ಣರಾಯನಿಗೇ ಮಾತು ಒಪ್ಪಿತವಾಗಲಿಲ್ಲ ಅಡ್ಡಿಮಾಡಲೆತ್ನಿಸಿದ. ಆ ಎಲ್ಲರೆದುರು ಆತನೊಬ್ಬನೇ. ಅನೇಕ ರೂಢಿಗಳನ್ನು ತಪ್ಪು ಒಪ್ಪುಗಳ ವಿಚಾರವಿಲ್ಲದೇ ಮಾಡುತ್ತೇವೆ. ಎಷ್ಟೋ ಸಲ ತಪ್ಪೆಂದು ತಿಳಿದರೂ ತಡೆಯುವ ಶಕ್ತಿಯಿಲ್ಲದೆ ಪ್ರವಾಹ ಪತಿತರಂತೆ ಸುಮ್ಮನೇ ಆಚರಿಸುತ್ತೇವೆ. 'ರೂಢಿಶ್ಶಾಸ್ತ್ರಾದ್ಬಲೀಯಸೀ' ಎಂಬದೇ ನಮ್ಮ ವೇದವಾಕ್ಯ. ಆ ಆ ರೂಢಿಗಳು ಬಹಳ ರೂಢವಾಗಿರುವಾಗ ಕಲಿತವರೂ, ಅಧಿಕಾರಿಗಳೂ ಅದಕ್ಕೆ ಬಲಿ ಬೀಳುವಾಗ ಸಮಾಜವೆಲ್ಲವೂ ಕಣ್ಮುಚ್ಚಿ ಕುರುಡರ ಬಳ್ಳಿಯಂತೆ ಕತ್ತಲೆಯಲ್ಲಿ ಕೊಳೆಯುತ್ತಲಿರುವಾಗ—ಕೃಷ್ಣರಾಯನೂ ಪ್ರವಾಹ ಪತಿತನಾದ. ಭೀಮರಾಯರ ಮನ ಅಂಥ ವಿಚಾರಗಳಿಗೆ ಸಮ್ಮತಿಸಲಾರದೆಂದು ಮನಗಂಡ ಮೂಲಕ ಅಂಥ ಆ ಭೀಕರ ಕಾರ್ಯದಲ್ಲಿ ಕೈಹಾಕಲಾರದ ತನ್ನ ಸಹಾಯತೆಗೆ ತಾನೇ ತನ್ನ ಕೈಕಟ್ಟಿಕೊಂಡ.

ಪಾರ್ವತೀಬಾಯಿಗಂತೂ ಅದೊಂದು ಹಬ್ಬವಾಗಿದ್ದಿತೆಂದರೆ ನಂಬಲಿಕ್ಕಿಲ್ಲ. ಆದರದೇ ವಸ್ತುಸ್ಥಿತಿ. ರೂಢಿಗನುಸರಿಸಿ ಬಂದ ಧರ್ಮಕಾರ್ಯಗಳನ್ನು ಆಚರಿಸುವುದರಲ್ಲಿದೆ. 'ಏಕೆ?' ಎಂದು ಕೇಳಕೂಡದು. ಹಿರಿಯರದನ್ನೆಲ್ಲ ಯೋಚನೆಯೇ ಹಾಗೆ ನಿಯಮ ಮಾಡಿರುವಾಗ, ಕೇಳುವ ಅಧಿಕಾರವಾರದು? ಪುಣ್ಯಸಂಪಾದನೆಯೇ ಪ್ರೀತಿಯುಸಿರಿನ ಹವ್ಯಾಸ-ಪುಣ್ಯ-

ಧರ್ಮಗಳು ದೃಷ್ಟಿಯಲ್ಲಿ ವ್ಯಕ್ತಿಗೊಂದು ಸ್ಥಾನವೇ ಇಲ್ಲ; ವ್ಯಕ್ತಿವ ತ್ವಕ್ಕೆ ಬೆಲೆ ಯಿಲ್ಲ ಹೃದಯಕ್ಕೂ ಅವಕಾಶವಿಲ್ಲ. ದಯಾ-ದಾಕ್ಷಿಣ್ಯಗಳ ಸುಳುವೂ ಇಲ್ಲ. ನೇಕ ವ್ಯಕ್ತಿಗಳನ್ನು ಬಲಿಗೊಟ್ಟದ್ದರೂ ರೂಢಿಯಿಂದ ಬಂದ ಧರ್ಮದ ಆಚಾರಣೆಯಾಗಲೇಬೇಕೆಂಬುದೇ ಅವರ ಹಟ. ಹೀಗೆ ಅವರ ಮನೋಭೂಮಿಕೆಯಿರುವಾಗ ಪಾರ್ವತೀಬಾಯಿಯಂತಹರಿಗೆ ಇಂಥಹ ಸಮಯದಲ್ಲಿಯೂ ಹರುಷವಾಯಿತೆಂದರ ಆಚ್ಚರಿಯೇನು?

ನಾಳೆಯೇ ಶುದ್ಧೀಕರಣ. ಪಾರ್ವತಿಬಾಯಿಯವರ ಸಿದ್ಧತೆಯಲ್ಲಿಯೇ ತೊಡಗಿದಳು. ಕೆಂಪು ಬಟ್ಟೆ ತರಿಸಿದುದಾಯಿತು. ರಾಮಶಾಸ್ತ್ರಿಗಳನ್ನು ಕರೆಯಿಸಿ ವಿಧಿಸಿಯಮಗಳನ್ನು ಕೇಳಿಟ್ಟುಕೊಂಡಳು. ಮತ್ತೇನು ಬೇಕಾಗಿದ್ದಿತೋ ಅದೆಲ್ಲವನ್ನು ಅಣಿಮಾಡಿದಳು. ಭೀಮರಾಯರೊಂದು ಯಂತ್ರವಾಗಿದ್ದರು. ಪಾರ್ವತೀಬಾಯಿಯ ಮಾತುಗಳಿಗೆಲ್ಲ ಮರುಮಾತಿಲ್ಲದೇ ಸಮ್ಮತಿಸುತ್ತಲಿದ್ದರು. ಹೃದಯ ಒಡೆದಿದ್ದಿತು. 'ಗಂಗೂನ ಬಾಳುವೆ ಮಣ್ಣು ಗೂಡಿತು. ಅದೀಗ ವಿಧಿಲಿಖಿತ. ಅದನ್ನು ಮೀರುವ ಸಮರ್ಥನಾರು? ಧರ್ಮಾಚರಣೆಯಲ್ಲಿಯೇ ಮನಃಶಾಂತಿ ಕಂಡುಕೊಳ್ಳದೇ ಅನ್ಯಮಾರ್ಗವಿಲ್ಲ. ಶುದ್ಧವಾಗದ ಹೊರತು ಧರ್ಮಾಚರಣಕ್ಕೆಡೆಯಿಲ್ಲ." ಹೀಗೆ ಒಂದನ್ನೊಂದ ವಲಂಬಿಸಿದ ವಿಚಾರಗಳು ಅವರ ಒಡೆದು ಹೋದ ಹೃದಯವನ್ನೊಂದು ಗೂಡಿಸಿದ್ದವು; ಕರಗಿ ನೀರಾದ ಎದೆಯನ್ನು ಕಲ್ಲಾಗಿಸಿದ್ದವು. ಭೀಕರವಾದ ಆ ಹತ್ಯಾಕಾಂಡಕ್ಕೆ ಅವರಿಗೆ ತಿಳಿಯದಂತೆ ಅವರನ್ನು ಸಿದ್ಧಗೊಳಿಸಿದ್ದವು. ದಯೆಯೇ ಧರ್ಮದ ಮೂಲವೆಂದು ಹಲವರೆನ್ನಬಹುದು; ಆದರೆ ಧರ್ಮದಲ್ಲಿ ದಯೆಗವಕಾಶವಿಲ್ಲವೆಂಬುದೇ ಸತ್ಯ. ಕಟು ಸತ್ಯ. ಅವರು ತಮ್ಮ ಅಂತಃಕರಣ ಕಲ್ಲಾಗಿಸಿ, ನಡೆಯುವದನ್ನೆಲ್ಲ ನೋಡುತ್ತಲಿದ್ದರು. ಜೀವವಿದ್ದೂ ಜಡವಾಗಿದ್ದರು.

ಕೃಷ್ಣರಾಯನಿಗಂತೂ ವಿಪರೀತ ಕೋಪ. ಅದೂ ತನ್ನ ಮೇಲೆಯೇ. ಸುಶಿಕ್ಷಿತ, ಸುಸಂಸ್ಕೃತ, ಅಧಿಕಾರಪದದಲ್ಲಿರುವವ. ಆದರೂ ಅಸಹಾಯ. ಪ್ರತ್ಯಕ್ಷವಾಗಿಯೇ ಮಹದನ್ಯಾಯ ನಡೆಯುತ್ತಲಿದೆ. ಪ್ರತಿಭಟಿಸುವ ಶಕ್ತಿಯಿಲ್ಲ. ಕಣ್ಣುಗಳಿಂದ ಪ್ರತಿಕೃತಿ ಕಾಣುತ್ತಲಿದ್ದರೂ ಕುರುಡ. ಮೈಯ್ಯಲ್ಲಿ ಬಲವಿದೆ. ಬೇಕಾದ ಅನುಕೂಲತೆಯಿದೆ. ಅಧಿಕಾರವಿದೆ. ನಡೆದುದು ಅನ್ಯಾಯವೆಂಬ ಅರಿವಿದೆ. ಹೀಗಿದ್ದರೂ ಅಸಹಾಯ. ತನ್ನ ದುರ್ಬಲತೆಗಿದ

ಕ್ಕಿಂತಲೂ ಮಿಗಿಲಾದ ಪ್ರಮಾಣವೇನು ಬೇಕು? ತನ್ನನ್ನೇ ತಾನು ಹಳಿದು ಕೊಂಡ. ಒಮ್ಮೆಯಲ್ಲ, ಸಾವಿರಸಲ. ಇಂತಹ ಜನರ ನಡುವೆ, ಇಂತಹ ಪರಿಸ್ಥಿತಿಯಲ್ಲಿ ಅಲ್ಲುಳಿಯದೇ ಹೊರಟು ಹೋಗಬೇಕೆಂದ. ಕಾಲುಗಳು ಕಿತ್ತಲಿಲ್ಲ. ದುರ್ಬಲನಾಗಿ ನಡೆದನ್ಯಾಯ ನೋಡುತ್ತಲೇ ಕೂತಿರಬೇಕಾಗಿ ಬಂದುದಕ್ಕಿನ್ನೂ ಹತಾಶನಾದ. ಉಪಾಯವೊಂದನ್ನು ಕಾಣಲೆತ್ನಿಸಿದ. ಸಿಕ್ಕದಾಯಿತು. ವಿಚಾರ ಮಾಡಿ-ಮಾಡಿ ತಲೆ ಕೆಟ್ಟಿತು. ಕೊನೆಗೆ ಉಪಾಯಗಾಣದೆ 'ದೈವ'ದಲ್ಲಿ ಅಲ್ಪವಾದರೂ ವಿಶ್ವಾಸವಿಲ್ಲದ ಅವನು ಗಂಗೂನ ದೈವದಲ್ಲಿದ್ದಂತಾಗಲಿ! ಎಂದು ಕೈಊರಬೇಕಾಯಿತು. ಊರಿದ. ಕಣ್ಣಿದ್ದೂ ಕುರುಡ. ನಾಲಿಗೆಯಿದ್ದೂ ಮೂಕ. ಬುದ್ಧಿಯಿದ್ದೂ ಮಂಕ. ಇದಲ್ಲವೆ ಮಾನವನ ದೈನ್ಯಾವಸ್ಥೆ! ನಿತ್ಯವೂ ಗಂಗೂನನ್ನು ಸಂತಯಿಸುವ ಅವನು ಅಂದು ಗಂಗೂನ ಮೊಗ ನೋಡಲು ಕೂಡಾ ಶಕ್ತನಾಗಲಿಲ್ಲ. ಏನೆಂದು ಸಂತಯಿಸುವದು! ಯಾವ ಮಾತುಗಳಿಂದ ಅವಳಲ್ಲಿ ಧೈರ್ಯ ತುಂಬಬೇಕು! ಅದಾವ ಆಶೆಗಳನ್ನು ತೋರಿಸಬೇಕು. ಛಾಪು! ರೂಢಿಯೇ, ಛಾಪು! ಕಣ್ಣಿದ್ದವ ಕುರುಡ. ಮಾತರಿತವ ಮೂಕ. ಮತಿವಂತ ಮಂಕ. ಬಲಶಾಲಿ ಹೇಡಿ. ನಿನ್ನೆದುರು ಯಾರ ಆಟವೂ ನಡೆಯುವಂತಿಲ್ಲ. ತನ್ನ ಹೇಡಿತನವನ್ನೊಪ್ಪಿಕೊಳ್ಳದ ಹೊರತು ಅನ್ಯ ಮಾರ್ಗವೇ ಇರಲಿಲ್ಲ. ಗಂಗೂಗೊಂದು ಒಳ್ಳೇ ಮಾರ್ಗ ತೋರಿಸಬೇಕೆಂದು ಅದೆಷ್ಟೋ ಯತ್ನಿಸಿದ. ಮಾರ್ಗಗಳೂ ಅನೇಕವಾಗಿವೆ. ಆದರೇನು?—

ಸ್ವತಃ ಗಂಗೂನಾದರೂ ಅಂಥದೊಂದು ಆಶೆಯನ್ನು ಅಪೇಕ್ಷಿಸಿದ್ದಳೇ? ತನ್ನನ್ನಾ ವಿಪತ್ತಿನಿಂದ ಪಾರುಗಾಣಿಸುವ ಯಾರನ್ನಾದರೂ ನಿರೀಕ್ಷಿಸಿದ್ದಳೇ? ಇಲ್ಲ. ಅಂತಹ ಕಲ್ಪನೆ ಕೂಡ ಅವಳಿಗಿರಲಿಲ್ಲ ಇರುವದಾದರೂ ಹೇಗೆ? ಸುತ್ತಲೂ ಅಭೇದ್ಯವಾದ ಕೋಟೆ ಕಟ್ಟಿದೆ. ಬರೀ ಶರೀರ ಮಾತ್ರವಲ್ಲ, ಮನಸ್ಸು ಬುದ್ಧಿಗಳೆಲ್ಲ ಬಂಧಿಸಲ್ಪಟ್ಟ ಮೂಲಕ ಆ ಆಶೆ ಅವಳಲ್ಲಿ ಮೂಡುವದಾದರೂ ಹೇಗೆ? ಅಂದು ಒಂದು ಹನಿ ನೀರನ್ನೂ ಮುಟ್ಟಲಿಲ್ಲ. ನಿತ್ಯ ಆಹಾರ ತಕ್ಕೊಳ್ಳಲು ಬಲವಂತಪಡಿಸುವ ಭೀಮರಾಯರೂ ಅತ್ತ ಸುಳಿಯದಾದರು. ಆದವಳಿಗೆ ಬೇಕೂ ಇರಲಿಲ್ಲ; ಮತ್ತು ಅವಳಾ ಯೋಗಕ್ಷೇಮ ನೋಡುವಷ್ಟು ಅವಕಾಶವಾಗಲಿ ಮನಃಸ್ಥಿತಿಯಾಗಲಿ ಪಾರ್ವತೀಬಾಯಿಯಲ್ಲಿ ಅಪೇಕ್ಷಿಸುಸುವದೆಂದರೆ, ಉಕಿನಲ್ಲಿ ಎಣ್ಣೆ ಬಯಸಿದಂತೆಯೇ. ಉಪವಾಸ ಬೀಳು

ವದೇ ಹಣೇ ಬರೆಹಕ್ಕೆ ಹತ್ತಿರುವಾಗ, ಒಂದು ದಿನ ಅನ್ನ-ನೀರಿಲ್ಲದಿದ್ದರೇನಾದೀತು? ಧರ್ಮಕಾರ್ಯ ಸರಿಯಾಗಿ ಪೂರಯಿಸುವದರಲ್ಲಿಯೇ ಕೃತಾರ್ಥತೆಯಿಲ್ಲವೆ?

ಅವರವರನ್ನು ಅವರವರ ವಿಚಾರಗಳಲ್ಲಿ ಮುಳುಗಿಸಿ ಅಂದಿನ ಆ ಸೂರ್ಯನೂ ಮುಳುಗಿದನು. ಆ ಆ ಕೋಣೆಗಳಲ್ಲಿ ದೀಪ ಹೊತ್ತಿಸಿ ಬೆಳಕನ್ನುಂಟುಮಾಡಿದುದಾಯಿತು. ಗಂಗೂ ಮುದುಡಿಕೊಂಡು ಬಿದ್ದ ಹಿತ್ತಲ ಕೋಣೆಯಲ್ಲಿ ಮಾತ್ರ ಕತ್ತಲೆಯೇ ಇದ್ದಿತು. ಒಳಗೆ ಅಲ್ಪವಾದರೂ ಬೆಳಕಿದ್ದರಲ್ಲವೆ ಹೊರಗಿನ ಬೆಳಕಿನಿಚ್ಛೆ? ಒಳಗೂ ಭೀಕರಾಂಧಃಕಾರ. ಅದರ ಪ್ರತಿಬಿಂಬ ಹೊರಗೆ. ಅಂತಹ ಆ ಕಾಳ ಕತ್ತಲೆಯಲ್ಲಿ ತಾನೊಂದು ಭೂತ. ತನ್ನ ಅದುವರೆಗಿನ ಅನೇಕ ನೆನಹು ಅವಳ ಮನಸ್ಸಿನಲ್ಲಿ ಕತ್ತಲೆಯಲ್ಲಿಯೇ ಸ್ಪಷ್ಟವಾಗಿ ಮೂಡತೊಡಗಿದವು. ಬಾಲ್ಯ, ಶಾಲೆಯ ಜೀವನ, ಗೆಳತಿಯರು, ಆಟ-ನೋಟ, ಹೂ ಮುಡಿದುಕೊಳ್ಳುವದು—ತನ್ನ ಸುಂದರ ಕೇಶಪಾಶ. ಹಿಂದೆ ಬೆನ್ನಿನ ಕೆಳಗೆ ಇಳಿಬೀಳುತ್ತಲಿದ್ದ ಕಪ್ಪನ್ನ ಕೇಶರಾಶಿ. ಒಂದು ಕ್ಷಣ ಹರವಿದ ಕೂದಲು ಒಂದುಗೂಡಿಸಿ ಕೈಗೆ ತೆಗೆದುಕೊಂಡಳು. ಬೆಳಗು ಬರುತ್ತಲೇ ಆ ಸುಂದರವಾದ ಹೆಳಲು—ಅಯ್ಯೋ! ಬೆಳಗೇ ಆಗದಿದ್ದರೆ?—ಆದರೆ ಹಾಗೆಂದಾದರೂ ಆಗುವದೆ?—ಇಲ್ಲ-ಇಲ್ಲ. ಬೆಳಗು ಬರಲೇಬೇಕು—ಏನಿದು? ನ್ಯಾಯಾನ್ಯಾಯಗಳ ವಿಚಾರವೇಕೆ? ಈ ಕೂದಲು ಏಕೆ ಹೋಗಬೇಕು?—ಅನೇಕ ವಿಚಾರಗಳ ತಾಂಡವದಿಂದ ಗಂಗೂ ತೀರಾ ಸಂತ್ರಸ್ತಳಾದಳು. ಅನೇಕ ಭೀಕರ ನೋಟಗಳನ್ನು ನೋಡಲಾರದೆ ಕಂದೆರೆದಳು. ಬೆದರಿದ ಕಣ್ಗಳಿಂದ ಸುತ್ತು-ಮುತ್ತು ನೋಡಿದಳು. ಯಾರೋ ದೀಪವಿರಿಸಿದ್ದರು. ಆ ದೀಪದ ಮುಂದ ಪ್ರಕಾಶದಲ್ಲಿ ಅವಳ ಕಣ್ಣು ಎದುರಿನ ಕನ್ನಡಿಯ ಮೇಲೆ ಬಿದ್ದಿತು. ಅದರಲ್ಲೊಂದು ಭೀಕರ, ಅಕ್ರಾಳ, ವಿಕ್ರಾಳ ಆಕೃತಿ ಕಂಡು ಬೆಚ್ಚಿದಳು. ರಕ್ತದಲ್ಲಿ ನೆನೆದ ಒಂದು ಕೆಂಬಟ್ಟೆಯುಟ್ಟಿದ್ದಿತು. ತಲೆ, ಕೈ, ಕೊರಳುಗಳೆಲ್ಲ ಬೋಳಾಗಿದ್ದುವು. ಮೊಗದಲ್ಲಿ ಬೂದಿ. ದೈನ್ಯದ ಮೂರ್ತಿಯೇ ಅದಾಗಿದ್ದಿತು. ಭೀತಿ-ಕನಿಕರಗಳೆರಡೂ ಒಮ್ಮೆಲೇ ಅವಳಲ್ಲುಂಟಾದುವು. ಒಡನೆಯೇ ಗಂಗೂ, 'ನೀನಾರು?' ಎಂದು ಕೇಳಿದಳು. ಒಡನೆಯೇ ಆ ಭೀಕರ ರೂಪ ವಿಕಟವಾಗಿ ನಗುತ್ತ ಕೈಗಳನ್ನು ತಿರುವುತ್ತ 'ನಾನಾರು?—ನಾನು ಯಾರು?-ನಿನಗೆ ಗೊತ್ತಿಲ್ಲವೆ?

ನಾನಾರೆಂದು ನೀನು ತಿಳಿಯೆಯಾ?–ನನ್ನನ್ನು ಕೇಳುವೆಯಾ? ನಾನು ಇನ್ನಾರು? ನೀನೇ. ನೀನೇ ನಾನು; ನಾನೇ ನೀನು.' ಆ ಭೀಕರಾಕೃತಿ ಮಾಯವಾಯಿತು.

ಗಂಗೂನಿಗೆ ತನ್ನ ಮರುದಿನದ ಆ ದುರವಸ್ಥೆ ಕಣ್ಣಿಗೆ ಕಟ್ಟಿತು. ಕೈಯಲ್ಲಿ ಬಳೆ ಹೋದುವು. ಕೊರಳ ಮಾಂಗಲ್ಯ ಮಾಯವಾಯಿತು. ಆ ನಾಪಿತ ಕೂದಲು ಹಿಡಿದು ಎಳೆದು, ಕಯ್ಯಲ್ಲಿ ಕತ್ತರಿ ತೆಗೆದುಕೊಂಡು—ಗಂಗೂ ಒಮ್ಮೆಲೆ ಚಿಟ್ಟನೇ ಚೀರಿದಳು.

ಗಂಗೂನ ಕೂಗು ಎಲ್ಲರನ್ನೂ ಎಚ್ಚರಿಸಿತು. ಭೀಮರಾಯ, ಕೃಷ್ಣರಾಯ, ಪಾರ್ವತೀಬಾಯಿ ಎಲ್ಲರೂ ಅಲ್ಲಿಗೆ ಬಂದರು. 'ಏನ?' 'ಏಕೆ' ಮುಂತಾಗಿ ಕೇಳಲಾರಂಭಿಸಿದರು. ವಸ್ತುಸ್ಥಿತಿಯರಿವು ಬಂದು ಗಂಗೂನಿಗೆ ಅಂತಹ ಆ ಸ್ಥಿತಿಯಲ್ಲಿಯೂ ನಾಚಿಕೆಯೆನಿಸಿತು. ಹೃದಯ ಹಂಬಲವೇಸಿದ್ದರೂ ಅದನ್ನು ಬಚ್ಚಿಟ್ಟು ಶಕ್ಯವಿದ್ದಮಟ್ಟಿಗೆ ಸ್ಥಿರಳಾಗಿ 'ಏನೂ ಇಲ್ಲ.' ಎಂದಳು. ಧ್ವನಿಯಲ್ಲೊಂದು ವಿಚಿತ್ರ ಬಗೆ ತೀರಾ ಸೂಕ್ಷ್ಮವಾಗಿ ವ್ಯಕ್ತವಾಗುತ್ತಲಿದ್ದಿತು. ಮೊಗದಲ್ಲಿ ಸ್ಮಶಾನಶಾಂತಿ ತುಂಬಿದ್ದಿತು. ಧ್ವನಿಯಲ್ಲಿ ಅಲ್ಪವಾದರೂ ಕಂಪವಿರಲಿಲ್ಲ. ತೀರಾ ಶಾಂತಸ್ವರದಲ್ಲಿ ವಿಶೇಷವೇನೂ ಸಂಭವಿಸಲಿಲ್ಲವೆನ್ನುವಂತೆ 'ಕೆಟ್ಟಕನಸು ಬಿದ್ದಿತು. ಮುದುವೆಯಾದವರು ಬಂದು 'ಇನ್ನೂ ಜೀವದಿಂದಿರಬೇಕೆನ್ನುವೆಯಾ? ಏಳು. ನಡೆ. ನನ್ನ ಸಂಗಡ ಬಾ.' ಮುಂತಾಗಿ ಹೇಳಿ, ಕೈಹಿಡಿದೆಳೆಯ ಹತ್ತಿದರು. ಭಯಗೊಂಡೆ.' ಎಂಬ ಕಟ್ಟುಕತೆಯೊಂದನ್ನು ಹೇಳಿದಳು. ಭೀಮರಾಯ ಪಾರ್ವತೀಬಾಯಿ ಇಬ್ಬರಿಗೂ ಅಸ್ವಾಭಾವಿಕವೇನೂ ಎನ್ನಿಸಲಿಲ್ಲ. ಭೀಮರಾಯರು ಗಂಗೂನಿಗೆ ತಮ್ಮಕೋಣೆಗೆ ಬರಹೇಳಿದರು. ಪಾರ್ವತೀಬಾಯಿ ಅಲ್ಲಿಯೇ ಮಲಗುತ್ತೇನೆಂದು ಹೇಳಿದಳು. ಇಬ್ಬರಿಗೂ 'ಬೇಡ. ಇಲ್ಲೇನಿದೆ? ಬರೀ ಒಂದು ಕನಸ್ಸು. ಇಲ್ಲೇನೂ ಭೂತ ಬಂದಿಲ್ಲ.' ಎಂಬ ಅತ್ಯಂತ ಶಾಂತವಾದ ಸ್ವರದಲ್ಲಿ ಉತ್ತರವಿತ್ತಳು.

ಗಂಗೂನ ಆ ಶಾಂತಸ್ವರದಿಂದ ಪಾರ್ವತೀಬಾಯಿಗೊಳ್ಳೇ ಸಮಾಧಾನವಾಯಿತು. ಮರುದಿನದ ಧರ್ಮಕಾರ್ಯ ನಿರ್ವಿಘ್ನವಾಗಿ ಪಾರುಗಾಣುವುದೆಂದು ನಂಬಿ ನಿಶ್ಚಿಂತಳಾದಳು. ಇನ್ನೇನೂ ಮಾತಾಡದೇ ಹೊರಟು ಹೋದಳು. ಮಗಳು ವಿವೇಕಿಯೂ ವಿಚಾರಿಯೂ ಇದ್ದುದ

ರಿಂದ ಅಷ್ಟು ಬೇಗನೇ ಪರಿಸ್ಥಿತಿಯನ್ನರಿತುಕೊಂಡು ಮನಸ್ಸು ಶಾಂತವಾಗಿರಿಸಿಕೊಂಡ ಬಗ್ಗೆ ಮಗಳನ್ನು ಮನದಲ್ಲಿಯೇ ಹೊಗಳಿದರು. ಗಂಡನೇ ಸತ್ತ ಮೇಲೆ ಒಮ್ಮಿಲ್ಲೊಮ್ಮೆ ಬರಲೇಬೇಕಾದುದು. ಅಂದಲ್ಲಿ ಹೆದರುವುದೇಕೆ? ಮುಂದೂಡುವುದಕ್ಕಿಂತ ವಿವೇಕಿಯಾಗಿ ಆಗಲೇ ಅದನ್ನು ಪೂರಯಿಸುವುದೋಳಿತಲ್ಲವೆ? ತಮ್ಮ ಈ ವಿಚಾರಗಳನ್ನು ಬಾಯಿಬಿಟ್ಟು ಹೇಳದಿದ್ದರೂ ತಮಗೆ ತಕ್ಕ ಮಗಳಾಗಿ ಹಾಗೆ ನಡೆದುಕೊಂಡ ಬಗ್ಗೆ ಸಮಾಧಾನವಾಗಿ ಭೀಮರಾಯರೂ ಹೊರಟರು.

ಅವರಿಬ್ಬರೊಡನೆ ಕೃಷ್ಣರಾಯನೂ ಹೊರಟ. ಆದರವನ ಮನಃಸ್ಥಿತಿ ಬೇರೆಯಾಗಿದ್ದಿತು. ಭೀಕರ ಬಿರುಗಾಳಿಯೊಂದು ಬೀಸತೊಡಗಿತು. ಗಂಗೂನ ಧ್ವನಿಯಲ್ಲಿ ವ್ಯಕ್ತವಾದ ವಿಲಕ್ಷಣ ಧೈರ್ಯಕ್ಕೆ ಅರ್ಥವೇನು? ಅವಳು ತೋರಿಸಿದ ಶಾಂತತೆ ನಿಜವಾದ **ಶಾಂತಿಯೆ**? ಅವಳು ಹೇಳಿದ ಕನಸು ನಿಜನಾವಾಗಿಯೇ ಕನಸೇ?—ಉತ್ತರ **ಸಿಕ್ಕ**ಲಿಲ್ಲ. ಆದರೂ ಮನಸ್ಸು ಮೇಲೆ ಮೇಲೆ ಕಂಡ ಆ ಭಾವನೆಗಳೆಲ್ಲ ಮೇಲಿನವೇ ಎಂದು ಹೇಳಿತು ಇಂತಹ ಭೀಕರ ಪರಿಸ್ಥಿಯಲ್ಲಿ, ದುಸ್ಸಹನೀಯ ದು:ಖಾಗ್ನಿಯಲ್ಲಿ ರೂಢಿ ರಾಕ್ಷಸನ ಅತ್ಯಾಚಾರದ ನಡುವೆ ಗಂಗೂ ನಿಜವಾಗಿಯೂ ಶಾಂತಳಾಗಿರುವಳೆ? ಶಕ್ಯಹಾದರೂ ಇದೆಯೆ? ಸರ್ವಸಾಮಾನ್ಯ ವ್ಯಕ್ತಿಗಂತೂ ತೀರಾ ಅಶಕ್ಯ. ಮತ್ತು ಇಷ್ಟರಲ್ಲಿ ಗಂಗೂ ಅಸಾಮಾನ್ಯ ವ್ಯಕ್ತಿಯಂತೂ ಆಗಿರಲಾರಳು. ಅವಳಲ್ಲಿಯೂ ಯೋಗ್ಯತೆಯಿದೆ. ಗುಣಗಳಿವೆ. ವ್ಯಕ್ತಿಮತ್ವವಿದೆ; ಆದರೆ ಇದಕ್ಕೊಂದು ವಿಕಾಸ ಬೇಡವೆ? ಸರಿಯಾದ ವಿಕಾಸ ಸಿಕ್ಕಿದಾದರೆ ಗಂಗೂ ಎಂತಹ ವ್ಯಕ್ತಿಯಾದಾಳು? ತಂದೆ-ತಾಯಿಗಳೇ ಇವರು—ಅಲ್ಲ, ಶತ್ರುಗಳು. ಭಯಂಕರ ಶತ್ರುಗಳು. ಇದೆಲ್ಲಕ್ಕೂ ಪ್ರತೀಕಾರ ಮಾಡಬೇಕೆಂದಿರುವಳೆ, ಗಂಗೂ? ಇಲ್ಲವಾದರಾ ತಾಳ್ಮೆಗರ್ಥವಿಲ್ಲ. ಎಲ್ಲರನ್ನೂ ಹೊರ ಹಾಕಿದುದಕ್ಕೆ ಆಧಾರವಿಲ್ಲ. ಹಾಗೇನಾದರೊಂದು ನಿರ್ದರವೇ ಗಂಗೂನದಿರಬೇಕು. ಸದ್ಯದ ಪರಿಸ್ಥಿತಿಯಲ್ಲಿ ಅಂತಹ ಪ್ರತೀಕಾರಕ್ಕೆ ಅವಳಿಗಿರುವ ಮಾರ್ಗಗಳಾವು? ಮನೆಯಿಂದ ಓಡಿಹೋಗುವುದು. ಆದರಿದು ಗಂಗೂನಿಂದ ಸಾಧ್ಯವೇ? ಮಾನಾಪಮಾನಗಳಿದ್ದ ಗಂಗೂನಂತಹ ಸ್ಥಿತಿಯಲ್ಲಿರುವ ಯಾವ ಹೆಣ್ಣುಮಗಳಿಂದ ತಾನೇ ಈ ಮಾರ್ಗ ಹಿಡಿಯಲಾದೀತು? ತನಗೇ ತನ್ನ ಮನೆತನಕ್ಕೆ ಹತ್ತುವ ಕಲಂಕವೆಂತಹದು? ಧೀರಳಾದವಳು ಕಾಲಾಂ

ತರದಲ್ಲಿದನ್ನೆಲ್ಲ ತೊಡೆದುಹಾಕಬಹುದು. ಆದರಾ ಧೈರ್ಯ ಗಂಗೂನಂತಹ ಭಯಂಕರ, ವಿಚಿತ್ರ ಪರಿಸ್ಥಿತಿಯಲ್ಲಿದ್ದ ಹೆಣ್ಣುಮಗಳಿಂದ ಸಾಧ್ಯವಾಗ ಲಾರದು. ತೀರಾ ಅಸಾಧ್ಯವೆಂದು ಹೇಳಲಾಗದಿದ್ದರೂ ಸರ್ವಸಾಮಾನ್ಯವಾಗಿ ಶಕ್ಯವಿಲ್ಲವೆಂದೇ ಹೇಳಬೇಕು. ಹಾಗಾದರೆ ಗಂಗೂನ ನಿಶ್ಚಯವಿನ್ನೇನಿರ ಬೇಕು?-ಆತ್ಮಹತ್ಯೆ—ಕೃಷ್ಣರಾಯನ ಮೈ ನಡುಗಿತು. ಆ ಆತ್ಮಹತ್ಯೆಯ ಭಯಂಕರ ಕಲ್ಪನೆ ಕೃಷ್ಣರಾಯನಂತಹನನ್ನೂ ನಡುಗಿಸಿತು. ಪರಿಸ್ಥಿತಿಯೇ ಹಾಗಿದ್ದಿತು. ರಾತ್ರಿಯ ಸಮಯ; ಅಸಹಾಯ ಬಾಲೆ. ಮರುದಿನದ ಆ ಹತ್ಯಾಕಾಂಡ. ಈ ವಿಚಾರಗಳೇ ಭಯಕ್ಕೆ ಸಾಕಷ್ಟಿರುವಾಗ, ಆತ್ಮಹತ್ಯೆಯ ವಿಚಾರ ಯಾರನ್ನು ನಡುಗಿಸಲಾರದು? ವಿಚಾರಚಕ್ರ ಮತ್ತೆ ತಿರುಗಲಾ ರಂಭಿಸಿತು. 'ಆತ್ಮಹತ್ಯೆಗೆ ಅವಳಲ್ಲಿದ್ದ ಸಾಧನಗಳಾವು?' ಕೃಷ್ಣರಾಯನು ತನ್ನ ಅಧಿಕಾರದಲ್ಲಿ ತನಗೆ ಬಂದ ಅಂಥ ಅನೇಕ ಸಂಗತಿಗಳನ್ನು ಮನ ಸ್ಸಿಗೆ ತಂದುಕೊಂಡನು. ಹಗ್ಗ, ಕುಡುಗೋಲು, ಬೆಂಕಿ ಮುಂತಾದ ಅನೇಕ ಸಂಗತಿಗಳಿಂದ ಅವನ ಮನಸ್ಸು ಬಾವಿಯ ವರೆಗೆ ಹಾರಿತು. ಒಮ್ಮೆಲೆ ದಿಗ್ಗನೆದ್ದು ಕುಳಿತ. ಹಿತ್ತಲ ಬಾಗಿಲಿನ ಬಳಿಯ ಬಾವಿ ಅವ ನೆದುರು ಭೀಕರಾಕಾರ ತಾಳಿ ಕುಣಿಯಹತ್ತಿತು. ಇದೇ ಸಮಯಕ್ಕೆ ಹಿತ್ತಲ ಬಾಗಿಲು ತೆರೆದ ಸದ್ದಾಯಿತು. ಒಮ್ಮೆಲೇ 'ಚಿಕ್ಕಪ್ಪಾ, ಘಾತ ವಾಯಿತು!' ಎಂದು ಕೂಗುತ್ತಲೇ ಎದ್ದೋಡಿದನು. 'ಏನು? ಏನು?' ಎಂದು ಗಾಬರಿಯಾಗಿ ನುಡಿಯುತ್ತ ಭೀಮರಾಯರೂ ದಡಬಡನೇ ಎದ್ದೋ ಡಿದರು. ಹೊರಓಡುತ್ತಲೇ 'ಗಂಗೂ ಬಾವೀ ಬಿದ್ದಳು.' ಎಂದು ಕೂಗಿ ಹಿತ್ತಲ ಕೋಣೆಯ ಬಾಗಿಲು ದಬ್ಬಿದ. ಒಳಗಿನಿಂದ ಚಿಲಕ ಹಾಕಿದ್ದಿತು. 'ಆಯಿತು. ಚಿಕ್ಕಪ್ಪಾ, ಗಂಗೂ ಕೈಬಿಟ್ಟಳು." ಎಂದು ತೀರಾ ಹತಾಶನಾಗಿ ಆರ್ತಸ್ವರ ದಿಂದ ಕೂಗಿ ಸುತ್ತುಹಾಕಿ ಬಾವಿಗೆ ಬಂದನು. ಹಿತ್ತಲ ಬಾಗಿಲು ತೆರೆದಿ ದ್ದಿತು. 'ಚಿಕ್ಕಪ್ಪಾ, ಬೇಗ ಹಗ್ಗಾ ದೀಪಾ ತನ್ನಿರಿ.' ಎಂದು ಬಾವಿಯಲ್ಲಿ ಹಾರಲನುವಾದ. 'ನಿಲ್ಲು, ಕೃಷ್ಣು ಒಳಗಿದ್ದರೆ—' 'ಹುಚ್ಚು ನಿಮ್ಮದು; ನಿಮ್ಮ ಹುಚ್ಚೇ ಬಂಗಾರದಂತಹ ಬಾಲಿಕೆಯನ್ನು ಕೊಂದಿತು. ನೀವು ಗಂಗೂನ ಖೂನು ಮಾಡಿದಿರಿ.' ಎಂದು ತ್ವೇಷದಿಂದ ನುಡಿದು, ಬಾವಿಯಲ್ಲಿ ಜಿಗಿದ.

'ಧಡಂ.' ಎಂಬ ಆ ಭೀಕರ ಸಪ್ಪಳ ಭೀಮರಾಯರ ಹೃದಯಕ್ಕೇನೇ ಕುಳಿತಿತು. ಅವರ ಹೃದಯವೆಲ್ಲ ಅಲ್ಲೋಲಕಲ್ಲೋಲವಾಯಿತು. ಒಮ್ಮೆಲೇ

'ಅಯ್ಯೋ! ಬನ್ನಿ. ಘಾತವಾಯಿತು." ಎಂದು ಕೂಗುತ್ತಲೇ ಕುಳಿತರು. ಅನೇಕರು ನೆರೆದರು. 'ಏನು? ಏನು?' ಎಂದು ಕೇಳಿದರು. 'ಅಯ್ಯೋ! ಹಗ್ಗ ದೀಪ—ಬೇಗ-ಬೇಗ, ಎರಡು ಹತ್ಯೆಗಳಾಗುವುವು' ಎಂದು ಆಕ್ರೋಶ ಮಾಡುತ್ತ ಕೂಗಿದರು.

ಹಗ್ಗ-ದೀಪಗಳು ಬಂದವು. ಕಂದೀಲು ಕಟ್ಟಿ ಬಾವಿಯಲ್ಲಿ ಬಿಟ್ಟರು. ನೀರಿನಲ್ಲಿ ಚಲನ-ವಲನ ಕಂಡು ಪುರುಷನೊಬ್ಬ ಮೇಲ್ಬಂದ. ಕಯ್ಯಲ್ಲಿ ಶರೀರವೊಂದಿದ್ದಿತು. ಆಗಲೇ ಒಬ್ಬಿಬ್ಬರಿಳಿದರು. ಕೃಷ್ಣರಾಯ ಗಂಗೂನ ಚೇತನಾರಹಿತ ಶರೀರದೊಂದಿಗೆ ಮೇಲ್ಬಂದ.

ಪಾರ್ವತಿಬಾಯಿ ಮತ್ತು ನೆರೆಹೊರೆಯ ಹೆಣ್ಣುಮಕ್ಕಳೂ ಕಲೆತಿದ್ದರು. ಮೊದಮೊದಲು ಎಲ್ಲರೂ ಹೌಹಾರಿದರು. ಏನಾಯಿತೆಂಬದೇ ತಿಳಿಯ ಲಿಲ್ಲ. ಗಾಬರಿಯಿಂದ ಯಾರೂ ಮಾತನ್ನೇ ಆಡಿರಲಿಲ್ಲ. ಕೃಷ್ಣರಾಯ ಮೇಲ್ಬಂದ ಕೂಡಲೇ ಎಲ್ಲರಿಗೂ ಆಶ್ಚರ್ಯವಾಯಿತು. ಅವನ ಕಯ್ಯ ಲ್ಲಿನ ಶರೀರ ಗಂಗೂನದೆಂದು ತಿಳಿದಾಗ ಪರಿಸ್ಥಿತಿ ಬದಲಾಯಿತು. ಅಂತಹ ಆ ಸ್ಥಿತಿಯಲ್ಲಿಯೂ 'ಯಾರು, ಗಂಗೂನೇ? ಸತ್ತರೆ ಸಾಯಲಿ. ಪೀಡೆ ಕಡೆ ಯಿತು.' ಎಂದು ಪಾರ್ವತಿಬಾಯಿ ನುಡಿಯುತ್ತಲೇ, ಕೃಷ್ಣರಾಯ ಹೆಡೆ ತುಳಿದ ಹಾವಿನಂತಾದ. ಸ್ವತ್ವ ಜಾಗ್ರತವಾಯಿತು. ದ್ವೇಷ ಮೀರಿತು. 'ಚಿಕ್ಕಮ್ಮಾ' ಎಂದು ಭೀಕರವಾಗಿ ಕೂಗಿದ. ಚಿಕ್ಕಮ್ಮ ಒಮ್ಮೆಲೇ ಬೆಚ್ಚಿ ಬಿದ್ದಳು. 'ಬಾಯಿ ಮುಚ್ಚು ಸಾಕು. ನಿನ್ನ ವಿದ್ವತ್ತೆ ತೋರಿಸಬೇಡ. ಹೂಂ, ಬೇಗ ಬೆಂಕೀ ಮಾಡು. ಗಂಗೂನ ಬಟ್ಟೆ ಬದಲಿಸು.' ಎಂದು ಅಧಿ ಕಾರೀ ವಾಣಿಯಲ್ಲಿ ಆಜ್ಞೆ ಮಾಡಿದ. ಆ ಧ್ವನಿಯು ಬಿಗುವೇ ಹಾಗಿದ್ದಿತು. ಮರು ಮಾತಿಲ್ಲದೇ ಚಿಕ್ಕಮ್ಮ ಆಜ್ಞೆಪಾಲನೆಗೆ ಮುಂದಾದಳು. ನೆರೆಯ ಹೆಣ್ಮಕ್ಕಳ ಸಹಾಯದಿಂದ ಗಂಗೂನನ್ನು ಒಳಗೊಯ್ದು ಬಟ್ಟೆ ಬದಲಿಸಿದರು. ಅಷ್ಟರಲ್ಲಿ ಕೃಷ್ಣರಾಯನೂ ಬಟ್ಟೆ ಬದಲಿಸಿ ಅಲ್ಲಿಗೆ ಬಂದನು. ಪ್ರಥಮೋ ಪಚಾರವರಿತ ಅವನು ಬೇಗನೇ ಗಂಗೂನನ್ನು ಎಚ್ಚರಿಸಿದನು. ಗಂಗೂ ಕಣ್ದೆರೆದು ಸುತ್ತಲೂ ಭೀತಿಯಿಂದ ನೋಡಿ: 'ಅಯ್ಯೋ ದೇವರೇ. ಸಾವು ಕೂಡಾ ಈ ಅನಾಥೆಗೆ ಬೇಡವಾಯಿತೆ?' ಎಂದು ದೀನವಾಣಿಯಿಂದ ಕೂಗಿ ಕಣ್ಮುಚ್ಚಿದಳು.

ಗಂಗೂನ ಆ ಶಬ್ದಗಳು ಕೃಷ್ಣರಾಯನ ಹೃದಯಕ್ಕೆ ಶಲ್ಯದಂತೆ ಚುಚ್ಚಿದವು. ಗಂಗೂನಿಗೆ ಶುದ್ಧಿ ಬಂದಿತೆಂದು ಮನವರಿಕೆಯಾಗಿ ಕೃಷ್ಣರಾಯ 'ಚಿಕ್ಕಪ್ಪನೆಲ್ಲಿ?' ಎಂದು ತಿರುಗಿದ. ಅದುವರೆಗೆ ಭೀಮರಾಯರತ್ತ ಯಾರ ಲಕ್ಷ್ಯವೂ ಹೋಗಿರಲಿಲ್ಲ. ಕೃಷ್ಣರಾಯ ಗಾಬರಿಯಾದ.

ಭೀಮರಾಯರು ಕೃಷ್ಣರಾಯನೊಡನೆಯೇ ಬಂದಿದ್ದರು. ಗಂಗೂ-ಕೃಷ್ಣರಾಯರಿಬ್ಬರೂ ತೀರಿದರೆಂದೇ ತಿಳಿದು ತೀರ ಗಾಬರಿಯಾಗಿದ್ದರು. ಕೃಷ್ಣರಾಯ ಮೇಲೆ ಬರಲು ಒಂದು ಭಾರ ಇಳಿಯಿತು. ಕೃಷ್ಣರಾಯ ಹೊತ್ತು ತಂದ ಗಂಗೂ ನಿಶ್ಚೇತನಳಾದುದರಿಂದ ಗಂಗೂ ಸತ್ತಳೆಂದೇ ಭಾವಿಸಿದರು. 'ಗಂಗೂನ ಕೊಲೆಮಾಡಿದೆ' ಎಂಬ ಕೃಷ್ಣರಾಯನ ಮಾತು ಬಾಣದಂತೆ ಅವರ ಹೃದಯಕ್ಕೆ ನಾಟಿತು. ಅವಳು ಸತ್ತಳೆಂದರಿತ ಮೇಲಂತೂ ಅವರ ಮನಃಸ್ಥಿತಿ ಊಹೆಗೂ ಮೀರಿತು. ಸಹಿಸಲಾರದ ದುಃಖ ಅವರ ಹೃದಯ ಹಿಂಡಿತು. ಕಣ್ಣೀರು ಧಾರೆಗಟ್ಟಿತು. ಆ ಶೋಚನೀಯಾವಸ್ಥೆಯಲ್ಲಿ ಎಚ್ಚರಿಲ್ಲದೇ ಕುಳಿತುಬಿಟ್ಟರು. ರಾತ್ರಿಯ ತಂಗಾಳಿ ಎಚ್ಚರು ತಂದಿತು. ಎಚ್ಚರಿನೊಡನೆಯೇ ಆ ಭಯಂಕರ ದುಃಖವೂ ಬಂದಿತು. 'ಗಂಗೂ' 'ಗಂಗೂ' ಎಂದು ದೀನವಾಣಿಯಿಂದ ಕೂಗತೊಡಗಿದರು. 'ಇನ್ನೆಲ್ಲಿಯ ಗಂಗೂ? ಆ ನನ್ನ ಮುದ್ದು ಮಗು ಗಂಗೂನನ್ನು ನಾನೇ ಕೊಲೆ ಮಾಡಿ 'ಗಂಗೂ' ಎಂದರೆ ಇನ್ನೆಲ್ಲಿ ಬರುವುಳು? ನಾನು ಮಹಾ ಪಾಪಿ, ನೀಚ. ಹೆತ್ತ ಮಗಳನ್ನೇ ಕೊಲೆ ಮಾಡಿದ ಕೊಲೆಗಾರ. ಅಂತಹ ಸುಸ್ವಭಾವೀ ಮಗಳನ್ನು ಹೆತ್ತುದೇ ನನ್ನ ಭಾಗ್ಯ; ಆದರೆ ನಾನು ನಿರ್ಭಾಗ್ಯ. ಸಂಕಟ ಕಾಲದಲ್ಲಿಯೇ ಅವಳ ಕೈ ಬಿಟ್ಟ ಪಾಪಿ—ದೇವಾ, ನನಗೆಂತಹ ಶಿಕ್ಷೆ ವಿಧಿಸಲಿರುವೆ? ಆಗದು-ಆಗದು, ಇಂತಹ ಈ ಭೀಕರ ವೇದನೆ ಸಹಿಸಲು ನನ್ನಿಂದ ತ್ರಿಕಾಲಕ್ಕೂ ಆಗದು. ಗಂಗೂ, ನನ್ನ ಮುದ್ದುಮಗು ಗಂಗು, ನಿನ್ನನ್ನು ಇದೇ ಈ ಕೈಗಳಿಂದ ಕೊಂದು ಹಾಕಿದ ಈ ಪಾಪಿಯನ್ನು ಕ್ಷಮಿಸುವೆಯಾ? ಇಲ್ಲ, ಕ್ಷಮೆಗೆ ನಾನು ಅರ್ಹನಲ್ಲವೇ ಅಲ್ಲ.' ಮುಂತಾಗಿ ಬಡಬಡಿಸುತ್ತ ವೇದನೆ ತೀರಾ ಅಸಹನೀಯವಾಗಲು ಮೇಲಕ್ಕೆದ್ದರು. 'ಗಂಗೂ, ಪಾಪಕ್ಕೆ ನನ್ನ ಈ ಭಯಂಕರ ಪಾಪಕ್ಕೆ ಇದೇ ಪ್ರಾಯಶ್ಚಿತ್ತ. ನಿನಗಾದ ಗತಿಯೇ ನನಗೂ' ಎಂದು ಭಾವಿ ಧುಮುಕಲೇಳುವುದಕ್ಕೂ ಕೃಷ್ಣರಾಯ ಬರುವದಕ್ಕೂ ಕೂಡಿತು. ವಸ್ತುಸ್ಥಿತಿ ಲಕ್ಷ್ಯಕ್ಕೆಬರಲು 'ಹಾಂ, ಚಿಕ್ಕಪ್ಪಾ, ಗಂಗೂನ

ಜೀವದ ಆಶೆ ಇದ್ದರೆ ಇಂಥ ಅವಿಚಾರ ಮಾಡಬೇಡ,' ಎಂದು ಕೂಗುತ್ತಲೇ ಮುಂಬಂದ.

ಭೀಮರಾಯ ಒಂದು ಹೆಜ್ಜೆ ಹಿಂದಕ್ಕಿಟ್ಟು 'ಗಂಗೂ, ಜೀವಿಸಿರುವಳೆ?' ಎಂದು ಹೃದಯ ಕರಗುವಂತೆ ಕೇಳಿದ. ಭೀಮರಾಯರಿಗಾದ ಆ ಪಶ್ಚಾತ್ತಾಪಕ್ಕೆ ಬೇರೆ ಪ್ರಮಾಣವೇ ಬೇಕಿರಲಿಲ್ಲ. 'ಅಹುದು, ಚಿಕ್ಕಪ್ಪಾ, ಸದ್ಯಕ್ಕಂತೂ ಜೀವಿಸಿರುವಳು. ಮುಂದಿನ ಜೀವನವೂ ನಿನ್ನನ್ನೇ ಅವಲಂಬಿಸಿದೆ.' ಎಂದು ಭಾವಪೂರ್ಣವಾಗಿ ನುಡಿದನು.

'ಕೃಷ್ಣು, ಉಳಿದಿದ್ದರೆ ಸಾಕು. ನನ್ನ ಜೀವವಿತ್ತಾದರೂ ಅವಳನ್ನಿನ್ನು ಉಳಿಸಿಕೊಳ್ಳುವೆ.' ಎಂದು ಆನಂದಿತನಾಗಿ ನುಡಿದನು.

ಗಂಗೂ ಎಚ್ಚತ್ತಿದ್ದಳು; ಆದರೆ ಅಸಹ್ಯ ವೇದನೆ ಮುಖದಲ್ಲಿ ಮೂಡಿದ್ದಿತು. 'ಅಣ್ಣಾ, ನನ್ನನ್ನೇತಕ್ಕೆ ಉಳಿಸಿದೆ?' ಎಂದು ಕರುಳು ಕೊರೆಯುವಂತೆ ಕೇಳಿದಳು. ಆ ಮಾತಿನಾಘಾತ ಭೀಮರಾಯರ ಹೃದಯವನ್ನು ಅತೀವವಾಗಿ ನೋಯಿಸಿತು. ಅವರು ನಿಜವಾಗಿಯೂ ಅಳಹತ್ತಿದರು. ನಡುಗುವ ದನಿಯಿಂದ 'ಗಂಗೂ, ಗಂಗಕ್ಕಾ, ನಿನ್ನನ್ನೇ ಕೊಲೆ ಮಾಡಿದ ಘಾತಕಿ ನಾನು. ಮಹಾ ಪಾಪಿ. ಈ ಕೈಗಳಿಂದಲೇ ಸಾಕಿ, ಸಲಹಿ, ಗೋಣು ಮುರಿದ ಮಹಾ ನೀಚ; ಆದರೆ ಕೃಷ್ಣಣ್ಣ, ಶ್ರೀಕೃಷ್ಣನಂತೆ ಕಾಯ್ದು ನಿನ್ನನ್ನುಳಿಸಿದ. ಹಾಗೆಯೇ ನನ್ನನ್ನೂ ಉಳಿಸಿದ. ಕೃಷ್ಣಣ್ಣಾ, ನೀನಿಲ್ಲದಿದ್ದರೆ ಗಂಗೂನೂ ಸಾಯುತ್ತಲಿದ್ದಳು. ಅವಳ ಹಿಂದಿನಿಂದ ನಾನೂ ಹೋಗುತ್ತಲಿದ್ದೆನು. ಇಬ್ಬರನ್ನೂ ಉಳಿಸಿದೆ. ನನ್ನ ಬಂಗಾರಕ್ಕಿಂತಲೂ ಮಿಗಿಲಾದ ಗಂಗೂನ ಜೀವ ಉಳಿಸಿದೆ.' ಎಂದು ಕೃತಜ್ಞತೆಯಿಂದ ನುಡಿದನು.

'ಚಿಕ್ಕಪ್ಪಾ' ಇಷ್ಟರಿಂದ ಇನ್ನೂ ಪೂರ್ಣ ಉಳಿಸಿದಂತಾಗಲಿಲ್ಲ. ನನ್ನನ್ನೇಕೆ ಉಳಿಸಿದೆಯೆಂದು ಆಕೆ ವಿಷಾದದಿಂದ ಎಚ್ಚರಾದೊಡನೆ ಕೇಳಿದಳು. ಅಂತಹ ಆ ವಿಷಾದವಿರುವ ವರೆಗೂ ಅವಳುಳಿದಂತಾಗಲಿಲ್ಲ. ನಿನ್ನ ಕರ್ತವ್ಯ ಕಡೆಗಾಣಿಸಿದಂತೂ ಆಗಲಿಲ್ಲ.'

'ಕೃಷ್ಣು, ಇನ್ನು ಕರ್ತವ್ಯ ನನ್ನದೇನೂ ಉಳಿದಿಲ್ಲ. ಗಂಗೂನ ಪ್ರಾಣ ಉಳಿಸಿದ ನೀನೇ ಈ ಕರ್ತವ್ಯ ಪೂರಯಿಸು. ನಾವಿನ್ನೂ ಮೂಢ ಕಲ್ಪನೆ, ಕುರುಡು ನಂಬಿಗೆಯವರು. ನನಗದಾವ ದಾರಿಯೂ ತೋರದಿದೆ.

ಈ ದುರ್ಘಟನೆಯಿಂದ ನಾನು ಕರ್ತವ್ಯಚ್ಯುತನಾದೆ. ಮಗಳನ್ನೂ ಕಳೆದು ಕೊಂಡೆ. ಈಗ ಗಂಗೂ ನಿನ್ನ ಮಗಳು. ನಾನು ಜನ್ಮವಿತ್ತ ತಂದೆಯಾದರೂ ಪ್ರಾಣ ಉಳಿಸಲು ಸಮರ್ಥನಾಗಲಿಲ್ಲ. ನಾನು ನನ್ನ ಅಧಿಕಾರ ಕಳೆದುಕೊಂಡಿರುವೆ. ನೀನವಳ ಪ್ರಾಣ-ನಿನ್ನ ಪ್ರಾಣವನ್ನೇ ಸಂಕಟದಲ್ಲಿ ನೂಕಿ ಕಾಪಾಡಿ ಆ ಅಧಿಕಾರ ನೀನು-ಪಡೆದಿರುವೆ. ನಿನಗೆ ಹೇಗೆ ಬೇಕೋ ಹಾಗೆ ಮಾಡು.'

'ನಿಜವಷ್ಟೆ?' 'ಸಂಪೂರ್ಣ ನಿಜ' 'ಹಾಗಾದರೆ ನಾಳೆ ನಡೆದಿರುವ ಈ ಅವಿಚಾರ ಈಗಲೇ ನಿಲ್ಲಬೇಕು.'

ಇದುವರೆಗೆ ಪಾರ್ವತೀಬಾಯಿ ಸುಮ್ಮನೆ ನೋಡುತ್ತ ನಿಂತಿದ್ದಳು; ಆದರೆ ಧರ್ಮಕಾರ್ಯಕ್ಕೆ ವಿಘ್ನವೊದಗಲು ಕೋಪಿಸಿದಳು.

'ಏನು, ಧರ್ಮದಲ್ಲಿ ಹೇಳಿದಂತೆ ನಡೆದರೆ ಅವಿಚಾರವೆ? ನಾವೇನು ಅನ್ಯಾಯ ಮಾಡುತ್ತೇವೊ?'

'ಚಿಕ್ಕಮ್ಮಾ, ನಿಮಗೆ ಹೃದಯವಿಲ್ಲ. ಪಾಪ-ಪುಣ್ಯ ಎಂದು ಒಂದೂ ನಿಮಗೆ ತಿಳಿಯದಂತೆ ಯೋಚಿಸಿ ಬಲುಮೆ ಮಾಡುತ್ತೀರಿ. ಅತ್ಯಾಚಾರ ಮಾಡುತ್ತಿರುವಿರಿ. ಇಂತಹ ಈ ಸುಂದರ ಮಗುವನ್ನು ಮರಣಕ್ಕೆ ಗುರಿ ಮಾಡುತ್ತಲಿದ್ದಿರಿ.'

'ನಾವೇನು ಮಾಡಿದೆವು?'

'ಇನ್ನೇನು? ಈ ಎಲ್ಲ ಅನರ್ಥಕ್ಕೆ ಕಾರಣರು ನೀವೇ. ಈಗ ಹೆಚ್ಚು ವಾದಿಸುವ ಸ್ಥಿತಿಯಲ್ಲಿಲ್ಲ. ನಾನೀಗ ನನಗೆ ಬೇಕಾದಂತೆ ಮಾಡುವೆ. ಚಿಕ್ಕಪ್ಪನೂ ಸಮ್ಮತಿಸಿರುವ. ನೀವೇನಾದರೂ ಅಡ್ಡಿಮಾಡಬೇಕೆಂದರೆ ಖೂನಿಯ ಆರೋಪದಿಂದ ನಿಮ್ಮನ್ನು ಪೋಲೀಸರಿಗೊಪ್ಪಿಸುವೆ. ಇದುವರೆಗೆ ಈ ಅನ್ಯಾಯ ನಾನು ನೋಡುತ್ತ ಕುಳಿತದ್ದೇ ತಪ್ಪಾಯಿತು. ನನಗೆ ಅದೆಷ್ಟೊ ಪಶ್ಚಾತ್ತಾಪವಾಗಿದೆ. ಇನ್ನಾರನ್ನೂ ಕೇಳುವುದಿಲ್ಲ. ಈಗ ನನಗೆ ಅಡ್ಡಿ ಮಾಡಲು ಒಬ್ಬರೂ ಮುಂದೆ ಬರಲಾಗದು. ನಿಮಗೆ ನಿಜವಾದ ಧರ್ಮವೆಂದರೇನೆಂಬುದರ ಅರಿವೇ ಇಲ್ಲ. ಧರ್ಮದ ಹೆಸರಿನಲ್ಲಿ ಅಧರ್ಮ ಆಚರಿಸುತ್ತೀರಿ. ಪುಣ್ಯದ ಹೆಸರಿನಲ್ಲಿ ಪಾಪ ಗಳಿಸುತ್ತೀರಿ. ಧರ್ಮದ ಹೆಸರಿನಲ್ಲಿ ಈ ಕಠೋರ-ಕ್ರೂರ- ದುರ್ವರ್ತನೆ ಮಾಡುವುದು ದೇವರಿಗೂ ಒಪ್ಪಲಾರದು. ದಯೆಯೇ ಧರ್ಮದ ಮೂಲವೆಂದು ಶಾಸ್ತ್ರಗಳೆಲ್ಲ ಸಾರುತ್ತಲಿರಲು, ನಿಮ್ಮಲ್ಲಿ

ದಯೆಯ ಅಂಶವಾದರೂ ಇದೆಯೇ? ನಿಜವಾಗಿಯೂ ರಾಕ್ಷಸರು ನೀವು—'

ಕೃಷ್ಣರಾಯನ ಮುಖದಿಂದ ಮಾತುಗಳು ಗುಂಡಿನ ಮಳೆಯಂತೆ ಸಿಡಿಯುತ್ತಲಿದ್ದವು. ಒಂದೊಂದೇ ಭೀಮರಾಯನನ್ನು ದೈನ್ಯದ ಕೀಳು ಸ್ಥಿತಿಗಿಳಿಸಿದರೆ, ಅವೇ ಪಾರ್ವತೀಬಾಯಿಯನ್ನು ತೀರಾ ರೊಚ್ಚಿಗೆಬ್ಬಿಸುತ್ತಲಿದ್ದವು. ಆದರೆ ಪೋಲೀಸರ ಭಯ ಅವಳನ್ನು ಸುಮ್ಮನಿರಿಸಿತು.

---

# ರಾಜ ಮಾರ್ಗ.

ಎಂತಹ ರಾತ್ರಿಯದು! ಇರುಳು ಜೀವಿಗಳಿಗೆ ವಿಶ್ರಾಂತಿದೊರಕಿಸಲೆಂದಿದ್ದರೆ ಭೀಮರಾಯರ ಮನೆಯಲ್ಲದು ಭೀಕರ ಅಶಾಂತಿಯನ್ನು ಕೊಟ್ಟು ವಿಶ್ರಾಂತಿಯನ್ನೇ ಮರೆಸಿತು. ಅವರವರು ತಮ್ಮ ತಮ್ಮ ಕಲ್ಪನೆಗಳಂತೆ ಗಂಗೂನ ಶುದ್ಧೀಕರಣಕ್ಕಾಗಿ ಸಿದ್ಧರಾಗಿದ್ದರು; ಮತ್ತು ನಮ್ಮ ಸಮಾಜದಲ್ಲದೇನೂ ಅಂಥ ವಿಶೇಷವಾದ ಸಂಗತಿಯಲ್ಲ, ಇಂತಹ ಈ ಸುಧಾರಣಾ ಶಿಖರಕ್ಕೆತಲುಪಿದ ಇಪ್ಪತ್ತನೆಯ ಶತಮಾನದಲ್ಲೂ ಈ ಪ್ರಕಾರ್ಯನಡೆದೇ ನಡೆಯುತ್ತದೆ. ಕೆಲವರಿಗೆ ಧರ್ಮವೆನಿಸಿದರೆ, ಹಲವರಿಗೆ ಅಧರ್ಮವೆನಿಸುತ್ತದೆ. ಹೀಗಿದ್ದರೂ ಮಾನವನು ವಿಧಿಯ ಕಯ್ಯಲ್ಲೊಂದು ಸೂತ್ರದ ಗೊಂಬೆಯೆಂಬದು ಮಾತ್ರ ತೀರಾ ನಿಜ. ಪಾರ್ವತೀಬಾಯಿಯ ಯೋಜನೆ ಮೂರ್ತಸ್ವರೂಪಕ್ಕಿಳಿದಿದ್ದಿತು. ಭೀಮರಾಯರೂ ಹೇಗಾದರೂ ಸಮ್ಮತಿಸಿದ್ದರು. ಊರವರ ಉತ್ತೇಜನವೇ ಇದ್ದಿತು. ಕೃಷ್ಣರಾಯ ಆಕ್ಷೇಪಿಸಬೇಕೆಂದರೆ ಅಶಕ್ಯವಾಯಿತು. ಸ್ವತಃ ಗಂಗೂ? ಅವಳನ್ನು ಕೇಳುವವರು ಯಾರು? ಆದರೆ ಅದೇನೋ ಗಂಗೂನ ಮನದಲ್ಲೊಂದು ಬಿರುಗಾಳಿಯೆದ್ದಿತು. ತದ್ದ್ವಾರಾ ಗಂಗೂ ಭಾವೀ ಹಾರುವುದು, ಕೃಷ್ಣರಾಯನಿಗೆ ಆ ಬಗ್ಗೆ ಪೂರ್ವಸೂಚನೆ ದೊರೆಯುವುದು, ಭೀಮರಾಯರು ಗರ್ಭಗಳಿತರಾಗುವುದು, ಹೀಗೆ ನಡೆಯಲಿದ್ದ ಆ ಕಾರ್ಯ ನಿಲ್ಲುವುದು, ಮೊದಲು ಒಂದೇ ಒಂದು ಮಾತು ಕೂಡಾ ಆಡಲಾರದ ಕೃಷ್ಣರಾಯ ಗರ್ಜಿಸುವುದು ಇದೆಲ್ಲ ದೈವೀ ಸೂತ್ರವಲ್ಲದಿನ್ನೇನು?

ಅಂತೂ ಆ ಭೀಕರ ರಾತ್ರಿಯೊಮ್ಮೆ ಕೊನೆಗಂಡಿತು. ಆ ಆ ವ್ಯಕ್ತಿಗಳ ಜೀವನ ದಿಶೆಯನ್ನೇ ಬದಲಿಸಿತು.

ಗಂಗೂನಿಗೆ ಚಿತ್ತಭ್ರಮೆಯಾದಂತಾಗಿದ್ದಿತು. ತಾನು ಮಾಡಿದುದು
ತಪ್ಪೆಂದೊಮ್ಮೆ ಎಣಿಸಿವರೆ ಒಪ್ಪೆಂದೂ ಒಮ್ಮೊಮ್ಮೆ ಗಣಿಸುವಳು ಏನಾದರೂ
ಸತ್ತಿದ್ದರೇ ಒಳಿತೆಂದು ಸಾವಿರ ಸಲ ಯೋಚಿಸಿದಳು. ಏಕೆಂದರೆ ಅಂಥ ಆ ಭೀಕರ
ಅತ್ಯಾಚಾರ ಸದ್ಯಕ್ಕೇನೋ ನಿಂತಿತು; ಆದರೆ ಕೊನೆಯವರೆಗೆ ನಿಲ್ಲಲಾರದು.
ಎಂದಿಲ್ಲೊಮ್ಮೆ ಆಗಲೇಬೇಕು. ಆಗುವುದು. ಒಂದು ವೇಳೆ ಆಗಲಿಲ್ಲವೆಂದು
ತಿಳಿದರೂ ಆ ಊರಲ್ಲಿ ಉಳಿಯುವುದು ಹೇಗೆ? ಜನರಿಗೆ ಮುಖ ತೋರುವು
ದೆಂತು? ಮಡಿವಂತಳಾದ ತಾಯಿಯು ಅವಳನ್ನು ಮನೆಗೆಲಸದಲ್ಲಿ ಕೈ ಹಾಕಗೊಡು
ವುದಶಕ್ಯ. ಅಷ್ಟೇ ಅಲ್ಲ. ತಾಯಿಯ ಮನಕ್ಕೆ ತೀರಾ ವಿರೋಧವಾಗಿ ನಡೆದದ್ದ
ರಿಂದ ಅಲ್ಪವಾದರೂ ಸಹಾನುಭೂತಿ ಅವಳಿಂದ ಸಿಕ್ಕುವಂತಿರಲಿಲ್ಲ. ತನ್ನ ಬಾಳಿ
ನಿಂದ ತನಗೂ ಹಿತವಿಲ್ಲ ಪ್ರೇಮಳ ತಂದೆಗಿನ್ನೂ ದಃಖವೇ—ಮುಂತಾದ
ಯೋಚನೆಗಳನೇಕ ಬರುತ್ತಲಿದ್ದವು. ಎಷ್ಟೋಸಲ 'ಶುದ್ಧ'ಳಾಗಿದ್ದರೆ ಹಿತವಾ
ಗುತ್ತಿತ್ತೇನೋ ಎಂಬ ಶಂಕೆಯೂ ಬರುತ್ತಲಿದ್ದಿತು; ಆದರೆ ಆ ಭಯಂಕರ
ನೋಟ ಅವಳೆದೆಯನ್ನು ಬಲವಾಗಿ ನಡುಗಿಸುತ್ತಲಿದ್ದಿತು. ವಿಚಾರವೊಂದೂ
ಸೂಚಿಸದಂತಾಗಲಿಲ್ಲ ಭಾವೀ ಹಾರಲು ಬುದ್ಧಿಯನ್ನಿತ್ತ ಆ ಮೇಲೆ ಉಳಿಸಿದ
ದೇವರೇ ಮುಂದಿನ ಯೋಚನೆ ಮಾಡುವನೆಂದು ಮನಸ್ಸನ್ನು ಶಾಂತಗೊಳಿಸ
ಲೆತ್ನಿಸುತ್ತಿಲಿದ್ದಳು; ಆದರೆ ಮತ್ತೆ ಮತ್ತೆ ವಿಚಾರಚಕ್ರ ಅವಳನ್ನು ಮುತ್ತು
ತ್ತಲೇ ಇದ್ದಿತು.

ಶುದ್ಧೀಕರಣ ನಿಂತರೂ ತನ್ನ ಕಾರ್ಯ ಪೂರ್ಣವಾಗಲಿಲ್ಲವೆಂದು
ಕೃಷ್ಣರಾಯನರಿತನು. ಅವಳನ್ನು ಬಾವಿಯಿಂದುಳಿಸಿದುದು ಅವಳನ್ನು
ನಿತ್ಯಮರಣದುಃಖಕ್ಕೆ ಗುರಿಮಾಡಲೆಂದೇ, ಎಂದು ಒಂದೇ ದಿನದಲ್ಲಿ ಅರಿತನು.
ಪಾರ್ವತಿಬಾಯಿ ತೀರಾ ಕಠೋರಳಾದಳು. ಅವಳ ಮನೋಭಾವ ಪ್ರತಿ
ಮಾತಿನಲ್ಲೂ ವ್ಯಕ್ತವಾಗುತ್ತಲಿದ್ದಿತು. ಮೊದಲೇ ತಿಳಿದಿದ್ದ ಕೃಷ್ಣರಾಯ
ಇನ್ನೂ ಗಾಬರಿಯಾದ. 'ಮುಂದೇನು?' ಎಂಬ ಪ್ರಶ್ನೆ ಬಿಡಲಾರದಾಯಿತು.
ಅವನಂತಹ ವಿಚಾರವಂತ ಸುಸಂಸ್ಕೃತನಿಗೆ ದಾರಿಗಳೆನಿತೋ ಕಾಣುವುದು
ಸ್ವಾಭಾವಿಕ. ಆದರದು ಪರಿಸ್ಥಿತಿಗೆ ಯೋಗ್ಯವಾಗಿರಬೇಕಲ್ಲವೆ? ಗಂಗೂನಲ್ಲಿ
ಸುಪ್ತವಾಗಿದ್ದ ಗುಣಗಳಿಗೆ ಯೋಗ್ಯವಿಕಾಸ ಸಿಕ್ಕಬೇಕೆಂಬುದೇ ಅವನ ಪ್ರಬ
ಲೇಚ್ಛೆಯಾಗಿದ್ದಿತು. ಅನ್ಯ ವಿಧವೆಯರಂತೆ ಪರದಾಸ್ಯದಲ್ಲಿ ಗಂಗೂ ಕೊಳೆತಿರ
ಬೇಕೆಂಬದವನಿಗೆ ಸಹನವಾಗಲಿಲ್ಲ. ಎಂತಹದೇ ಆಗಲಿ, ತನ್ನದೆಂಬದೊಂದು

ಮನೆಯಿದ್ದರೆ ಆ ಮಾತು ಬೇರೆ. ಅವರಾ ಮನೆಯೋ ಇರಲಿಲ್ಲ. ಇದ್ದುದೇ ತನ್ನ ಮನೆಯೆನ್ನಬೇಕೆಂದರೆ ಆ ಮನೆಯವರ ಮನದಂತೆ ವರ್ತಿಸಬೇಕು. ಹಾಗೆಂದಲ್ಲಿ ಇದ್ದೂ ಸತ್ತುದಕ್ಕಿಂತಲೂ ಕೀಳು. ಅಂತಹ ಪರಿಸ್ಥಿತಿಯಲ್ಲಿ ಭೀಮರಾಯರಿಗೇನಾದರೂ ಕೇಳಬೇಕೆಂದರೆ ಅವರ ಪರಿಸ್ಥಿತಿ ತೀರಾ ವಿಚಿತ್ರವಾಗಿದ್ದಿತು. ಅಂದಿನಿರುಳಿನ ಘಟನೆ ಅವರ ಮನಸ್ಸನ್ನು ಬಹಳವಾಗಿ ಚುಚ್ಚಿ ಗಾಯಗೊಳಿಸಿದ್ದಿತು. ಮನೆಯಲ್ಲಿ ಆ ಪ್ರಕ್ಷುಬ್ಧ ವಾತಾವರಣದ ಕಲ್ಪನೆ ಅವರಿಗಿದ್ದಿತೋ ಇಲ್ಲವೋ ಎನ್ನುವುದೂ ತಿಳಿಯುವಂತಿರಲಿಲ್ಲ. ಇನ್ನೂ ಸೂಕ್ಷ್ಮವಾಗಿ ನಿರೀಕ್ಷಿಸಿದಲ್ಲಿ ಪಾರ್ವತೀಬಾಯಿ ಅಲ್ಪಾವಕಾಶದ ನಂತರವಾದರೂ ಈ ಧಾರ್ಮಿಕ ವಿಧಿ ಪೂರಯಿಸಬೇಕೆಂಬ ನಿಶ್ಚಯದಿಂದಲೇ ಇದ್ದಳೆಂಬದು ಸ್ಪಷ್ಟವಾಗಿ ಕಾಣುತ್ತಲಿದ್ದಿತು.

ಪಾರ್ವತೀಬಾಯಿಯ ಈ ಯೋಚನೆ ಅವಳಷ್ಟಕ್ಕೆ ಸರಿಯಾಗಿದ್ದಿತೆಂದು ಕೃಷ್ಣರಾಯನರಿಯದಿರಲಿಲ್ಲ. ವಿಧವೆಯಾದ ಮೇಲೆ ಆಗಲೇಬೇಕಾದ ಸಂಸ್ಕಾರವಷ್ಟೆ? ಹಾಗಿದ್ದಲ್ಲಿ ಅದಕ್ಕವಕಾಶವೇಕೆ?-ಬೇಗ ಆದಲ್ಲಿಯೋ ಒಳಿತಲ್ಲವೆ? ಮುಂದಿನ ಜೀವನ ಧರ್ಮಕಾರ್ಯಕ್ಕೆ ಹಾಕುವದೇ ವಿಹಿತವಲ್ಲವೆ? ಇನ್ನು ಧರ್ಮಾಧರ್ಮಗಳ ಒಳಗುಟ್ಟನ್ನರಿವ ಶಕ್ತಿ-ಸಂಸ್ಕಾರಗಳವಳಲ್ಲಿರಲಿಲ್ಲ. ಅವಳ ಹುಟ್ಟಿನೊಡನೆ ಬಂದ ಧರ್ಮಪ್ರೇರಣೆಯೇ ಅವಳಿಗೆ ಕರ್ತವ್ಯವಾಗಿದ್ದಿತು. ಅಂತಹ ಕರ್ತವ್ಯಬುದ್ಧಿ ಗಂಗೂನ ದುರ್ದೈವವಳಲ್ಲಿ ಮೊದಲೇ ವಿರೋಧ ಭಾವ ಹುಟ್ಟಿಸಿದ್ದಿತು. ಆ ಮೇಲೆ ಅವಳ ಆಚರಣೆ ಇನ್ನೂ ರೋಷವನ್ನೇ ಜನಿಸಿತು. ಮಾತೃಭಾವ ಮರೆಯಾಯಿತು. ಕರ್ತವ್ಯಬುದ್ಧಿ ಜಾಗೃತವಾಯಿತು. ಧರ್ಮ ಹೇಳಿದುದು, ರೂಢಿಯಿಂದ ಬಂದುದು, ಶಾಸ್ತ್ರಗಳು ಉಪದೇಶಿಸಿದುದು—ಅದೇ ಅವಳ ಕರ್ತವ್ಯ—

ಇಂತಹ ಈ ವಿಚಿತ್ರ ಸನ್ನಿವೇಶದಲ್ಲಿ ಕೃಷ್ಣರಾಯ ಗಂಗೂನಿಗೆಂದು ರಾಜಮಾರ್ಗವೊಂದನ್ನು ಶೋಧಿಸಲೆತ್ನಿಸಿದ. ಕಂಡೂ ಹಿಡಿದ. ಆದರದು ಅವನಿಗೆ ರಾಜಮಾರ್ಗ. ಉಳಿದವರಿಗೆ ಕಗ್ಗಾಡಿನ ಕಾಲು ದಾರಿ. ಕಂಟಕಗಳಿಂದ ತುಂಬಿದುದು. ಅಂತಹ ಅಡ್ಡದಾರಿಯಲ್ಲಿ ಅಡಿಯಿಡಲೂ ಅಂಜುತ್ತಲಿದ್ದ ಅವರು ಅವನ ಆ ದಾರಿಯನ್ನೊಪ್ಪುವರೆ? ಪಾರ್ವತಿಬಾಯಿಯಿಂದ ಸಮ್ಮತಿ ಸಿಕ್ಕುವ ಆಶೆ ಅಸಂಭವವೇ. ಹೆಣ್ಣು ಶಾಲೆಗೆ ಹೋಗುವದು, ಭಿನ್ನಭಿನ್ನ ಜಾತಿ, ಮತ, ಪಂಥಗಳವರೊಡನೆ ಕಲೆಯುವುದು, ಕಲಿಯುವದು—

ಧರ್ಮಕ್ಕೆ ತೀರ ವಿರುದ್ಧ. ಅದೂ ಗಂಡ ಸತ್ತ ಹರೆಯದ ಹೆಣ್ಣು ಮಗಳು ಗಂಗೂ. ಮನೆಯ ಹೊರಗೆ ಕಾಲಿಕ್ಕುವುದೇ ತಪ್ಪಾಗಿರುವಾಗ ಶಾಲೆಗೆ ಹೋಗಿ ಕಲಿಯುವದೆಂದರೇನು?--ಅಬ್ರಹ್ಮಣ್ಯಂ- ಶಾಂತಂ ಪಾಪಂ.

ಭೀಮರಾಯರಂತಹ ಸ್ವಭಾವದವರಿರಲಿಲ್ಲ. ಒಂದು ವೇಳೆ ಕೃಷ್ಣ ರಾಯನ ಈ ವಿಚಾರಕ್ಕೆ ಸಮ್ಮತಿಸಬಹುದಿತ್ತು. ಇದಕ್ಕೂ ಮೊದಲಾಗಿದ್ದರೆ ಶಕ್ಯವಿರಲಿಲ್ಲ; ಆದರೆ ಗಂಗೂನ ಆ ಭೀಕರ ಮನಃಸ್ಥಿತಿಯ ನಂತರ ಮೇಲೆ ಗಂಗೂನ ಮನಕ್ಕೆ ಹಿತವೆನಿಸಬಹುದಾದ ಯಾವ ವಿಚಾರಕ್ಕೂ ಒಪ್ಪಬಹು ದಿತ್ತು; ಆದರೆ ಮನಃಪೂರ್ವಕ ಒಪ್ಪಬಹುದೆ? ಸಂಶಯಾಸ್ಪದವಾಗಿದ್ದಿತು. ಇನ್ನು ಸ್ವತಃ ಗಂಗೂ? ಅವಳ ಒಪ್ಪಿಗೆಯೇನೋ ಅತ್ಯವಶ್ಯವಾಗಿದ್ದಿತು. ಆದ ರವಳ ಸಮ್ಮತಿ ದೊರೆಕಿಸುವ ವೇಳೆಯಿದಾಗಿರಲಿಲ್ಲ. ಅದಕ್ಕನುಗುಣವಾದ ಯೋಗ್ಯ ಪರಿಸ್ಥಿತಿ ಮೊದಲು ನಿರ್ಮಿಸಬೇಕು. ಅವಳಲ್ಲಿ ಕರ್ತವ್ಯಬುದ್ಧಿ ಜಾಗ್ರತಗೊಳಿಸಬೇಕು. ಆ ಮೇಲೆ ಅವಳಿಗೆ ತನ್ನ ಅರಿವು ಆಗಿ, ತಾನೇ ಯೋಗ್ಯ ದಾರೀ ಕೈಕೊಳ್ಳದಿರಳೆಂಬ ವಿಶ್ವಾಸವಿದ್ದಿತು. ಅಂತೆಯೇ ಎಲ್ಲ ರಿಗೂ—ಭೀಮರಾಯ, ಗಂಗೂ ಇಬ್ಬರಿಗೂ ಸಮ್ಮತವಾಗುವ ದಾರಿಯೊಂ ದನ್ನು ಅನುಸರಿಸುವ ನಿಶ್ಚಯ ಮಾಡಿದ.

'ಚಿಕ್ಕಪ್ಪ, ನಾಳೆಗೆ ನಾನು ಹೊರಡುವೆ.' 'ಇನ್ನೆರಡು ದಿನವಿರಲಾರೆಯಾ?'

'ಇಲ್ಲ ಚಿಕ್ಕಪ್ಪಾ, ರಜೆ ಸಿಕ್ಕುವದಿಲ್ಲ. ಈ ಎಂಟು ಹತ್ತು ದಿನ ರಜೆ ಸಿಕ್ಕಬೇಕಾದರೇನೇ ಸಾಕುಬೇಕಾಯಿತು ಈಗಿನ ಈ ಸ್ವಾತಂತ್ರ್ಯದ ಸಮಯದಲ್ಲಿ ನಮಗೆ ಕೆಲಸ ಬಹಳವಾಗಿದೆ. ನಾವದನ್ನು ವೇಳೆಗೆ ಸರಿಯಾಗಿ ಮಾಡಲೇಬೇಕು. ಇಂದೇ ಮತ್ತೆ ಪತ್ರ ಬಂದಿದೆ. ಮದುವೆಗೆ ಈ ತೊಂದರೆಯ ಮೂಲಕವಾಗಿಯೇ ಬರಲಾಗಲಿಲ್ಲ. ಆದರೆ, ಆದರೆ ಇಂತಹ ಸ್ಥಿತಿಯಲ್ಲಿ ಬರಬೇಕಾಯಿತು. ದುರ್ದೈವ.'

'ಕೃಷ್ಣು, ಮದುವೆಗೆ ಬಂದು ಮಾಡಬಹುದಾದ ಕಾರ್ಯದ ಸಾವಿರ ಪಟ್ಟು ಕಾರ್ಯ ಈಗ ಮಾಡಿದೆ. ಎರಡು ಜೀವಗಳನ್ನುಳಿಸಿದೆ.'

'ಚಿಕ್ಕಪ್ಪ, ಅಳಿವು-ಉಳಿವುಗಳು ಪರಮಾತ್ಮನಾಧೀನವಲ್ಲದೇ ಮನುಷ್ಯ ನೇನು ಮಾಡಬಲ್ಲನು?'

'ಹಾಗೂ ಇರಬಹುದು; ಆದರೆ ನಿಮಿತ್ತಕ್ಕಾದರೂ ಮುಂದೆ ಬಂದವ ನೀನೇ ಅಲ್ಲವೆ? ನೀನಿಲ್ಲವಾಗಿದ್ದರೆ, ಗಂಗೂ? ನನ್ನ ಮುದ್ದು ಮಗಳು ಗಂಗೂ?

ಆದರೆ ಕೃಷ್ಣ, ಏನು ದೈವವಿದು ನಮ್ಮ ಗಂಗೂನದು! ಎಂತಹ ಮಧುರವಾದ ಸ್ವಭಾವ! ಎಷ್ಟು ಸದ್ಗುಣಗಳು!! ಏನವಳ ಒಳ್ಳೇ ನಡತೆ? ಮನುಷ್ಯ ಮಾತ್ರರೆಲ್ಲರ ಸದ್ಗುಣ-ಸದಾಚಾರಗಳನ್ನೆಲ್ಲ ಒಂದುಗೂಡಿಸಿದ ಆ ಬ್ರಹ್ಮ ಅವಳ ಹಣೆಯಲ್ಲಿ ಇಂತಹ ದುಷ್ಟ ಬರೆಹ ಬರೆದುದೇಕೆ? ಅವಳಾ ಸದ್ಗುಣಗಳು, ಸದ್ವರ್ತನೆ, ಸದಾಚಾರಗಳು ವ್ಯರ್ಥವೇ ಆಗಬೇಕೆಂದವನ ಇಚ್ಛೆಯೆ? ಇದೇ ದೇವರ ಮನೆಯ ನ್ಯಾಯವೆ? ಅಯ್ಯೋ! ನಾನೀಗ ಮೂಢನಾಗಿರುವೆ'

'ಚಿಕ್ಕಪ್ಪ, ಮನುಷ್ಯಯತ್ನಕ್ಕೆ ಮೀರಿದ ಸಂಗತಿಗಳಲ್ಲಿ ಯಾರೇನು ಮಾಡುವವರು? ದೈವಸಂಕಲ್ಪ ಮನುಷ್ಯನನ್ನು ಮೀರಿದುದಲ್ಲವೆ?'

'ಅಹುದು ಕೃಷ್ಣಣ್ಣ, ನಾನಿದನ್ನು ಬಲ್ಲೆ; ಆದರೆ ನನ್ನ ಎದೆ ಬೆಂದಿದೆ. ಹೃದಯ ಹರಿದಿದೆ. ಕರುಳು ಕೊರಗಿದೆ. ಮುಂದಿನ ಮಾರ್ಗವೇ ತಿಳಿಯುದಿದೆ.'

'ಚಿಕ್ಕಪ್ಪಾ, ನಿನ್ನಂತಹ ಪ್ರೇಮಳ ತಂದೆಗೆ ಹಾಗಾಗುವದು ಸಹಜವಿದೆ; ಆದರೆ ನೀನೇ ಹೀಗೆ ಮನ ಹರಿಬಿಟ್ಟರೆ ಉಳಿದವರ ಪಾಡೇನು? ಉಳಿದವರಿಗೆ ಸಮಾಧಾನ ಹೇಳುವವರು ನೀನೇ ಅಲ್ಲವೆ?'

'ಬರಿಯ ನನ್ನ ಮಟ್ಟಿಗೆ ನಾನು ಯತ್ನಿಸಬಹುದು. ಇಂತಹ ಭೀಕರ ಬೆಂಕಿಯಿಂದ ಕೂಡಾ ಮನಸ್ಸು ಶಾಂತವಾಗಿರಿಸಲು ಯತ್ನಿಸಬಹುದು; ಆದರೆ ಗಂಗೂ ಏನೂ ಅರಿಯದ ಅಜ್ಞ ಬಾಲಿಕೆ. ಸಂಸಾರದ ಶಕೆ, ಬೆಂಕಿ, ಚಳಿಗಾಳಿ ತಿಳಿಯದ ಸಣ್ಣ ಮಗು. ಸಂಸಾರದ ಹೊಸ್ತಿಲಲ್ಲಿ ಕಾಲಿಡುವಾಗಲೇ ಆ ಆನಂದಕ್ಕಾತುರವಾದ ಹೃದಯ ಭೀಕರಾಗ್ನಿಯಲ್ಲಿ ಬೆಂದು ಹೋಯಿತು. ಅವಳನ್ನು ಸಂತಯಿಸುವ ಬಗೆಯೆ ೀನು? ಅವಳ ಮುಖ ನೋಡಲು ಕೂಡಾ ನಾನು ಶಕ್ತನಾಗಿಲ್ಲ. ಅವಳ ಮನ ಶಾಂತಗೊಳಿಸಬಹುದಾದ ಒಂದೇ ಒಂದು ಶಬ್ದ ನನ್ನಲ್ಲಿಲ್ಲ. ಹೃದಯ ಹಾತೊರೆಯುತ್ತಲಿದ್ದರೂ ಮುಖ ಮೂಕವಾಗಿದೆ.'

'ಚಿಕ್ಕಪ್ಪಾ, ನನ್ನ ವಿಚಾರವೆಂದರೆ ಇಂತಹ ಭೀಕರ ಪ್ರಸಂಗಗಳಲ್ಲಿ ಕೊಂಚ ಮರವು ಹಿತಕರವಾದೀತೆಂದು ತೋರುತ್ತಿದೆ.'

'ನಾನು ಹಾಗೆಯೇ ಎಷ್ಟೋ ಸಲ ಯೋಚಿಸಿರುವೆ. ಆದರಾ ಮರವು ಅವಳಿಗೆ ದೊರಕುವದು ಹೇಗೆ?'

'ಅಹುದು. ಅದಕ್ಕೇನೇ ನನ್ನದೊಂದು ಯೋಚನೆಯಿದೆ. ಅದು ಒಪ್ಪಿತವಾದರೆ'

'ಹೇಳು. ಕೃಷ್ಣಣ್ಣಾ, ನಿನ್ನ ಸೂಚನೆಯೆಂದೂ ಅವ್ಯವಹಾರ್ಯವಿರಲಾರದೆಂದು ನಾನು ಬಲ್ಲೆ. ನನ್ನ ಬುದ್ಧಿಗೆ ಗೆದ್ದಲು ಹಿಡಿದಿದೆ. ಈ ಸಮಯದಲ್ಲಿ ಸರಿಯಾದ ದಾರೀ ನೀನೇ ತೋರಿಸಬೇಕು'

'ನನಗೆ ಸರಿಗಂಡ ದಾರಿಯನ್ನಂತೂ ತೋರಿಸುವದು ನನ್ನ ಕರ್ತವ್ಯ. ನಿನಗೂ ಸರಿಗಂಡರೆ ಒಳಿತೇ ಆಯಿತು. ನನ್ನ ಸೂಚನೆಯಿಷ್ಟೆ, ಗಂಗು ಇಲ್ಲಿಯೇ ಉಳಿದರೆ, ಈ ವಿಷಯದ ಮರವು ತೀರಾ ಅಶಕ್ಯ. ನೆರೆಹೊರೆಯವರು ಬಂದವರು-ಹೋದವರು ಇನ್ನಿತರರು ಈ ವಿಷಯವನ್ನೆತ್ತದಿರರು. ಆದ್ದರಿಂದ ನನ್ನೊಡನೆ ಕೆಲ ದಿನ ಕಳಿಸು; ಶಹರದಲ್ಲಿ ಈ ವಿಷಯದತ್ತ ಯಾರೂ ಲಕ್ಷ್ಯವನ್ನೇ ಕೊಡುವದಿಲ್ಲ; ಮತ್ತು ನನ್ನ ಮನೆಯಲ್ಲಿರುವ ಮೂಲಕ ಎದುರಿಗಾದರೂ ಯಾರೂ ದೂರಲಾರರು; ಹಾಗು ಅಂತಹ ವಿಶಾಲವಾದ ಸಾಗರದಲ್ಲಿ ಇಂಥ ಸನ್ನಿವೇಶ ಅಪರಿಚಿತವೂ ಅಲ್ಲ. ನನ್ನ ಹೆಂಡತಿ ಮಕ್ಕಳೊಡನೆ ಕಲೆತಿರುವದರಿಂದ ಮರೆಯುವ ಸಂಭವವಿಲ್ಲದಿಲ್ಲ.'

'ಅಹುದು ಕೃಷ್ಣಣ್ಣಾ, ನಿನ್ನ ಯೋಚನೆ ತೀರಾ ಸರಿಯಾಗಿದೆ. ನನಗೂ ಈ ಯೋಚನೆ ಬಾರದಿಲ್ಲ, ಆದರೇ?—ಆದರೇಽಽ—ಊಂ. ಹುಂ. ಅದೇನಿಲ್ಲ. ನಮ್ಮ ಮೂಢತನ, ಮೂರ್ಖತನಗಳಿನ್ನು ಸಾಕು. ಗಂಗೂ ಹೇಗೇ ಆದರೂ ಸುರಕ್ಷಿತವಾಗುಳಿದರೆ ಸಾಕು. ಮುಂದಿನದು ಮುಂದೆ. ಯಾರೇನಾದರೂ ಅನ್ನಲಿ; ನೀನವಳನ್ನು ಕರೆದೊಯ್ಯುವುದೇ ಯೋಗ್ಯ."

'ಚಿಕ್ಕಮ್ಮ ಆಕ್ಷೇಪಿಸಬಹುದು.'

'ಅಹುದು. ನಾನು ಮೊದಲು ಅನುಮಾನಿಸುತಿದ್ದುದಕ್ಕೇ. ಅದೂ ಒಂದು ಕಾರಣ; ಆದರೆ ಆ ಆಕ್ಷೇಪಣೆಗೆ ನಾನು ನನ್ನ ಮಗಳನ್ನು ಬಲಿಗೊಡಲು ಸಿದ್ಧನಿಲ್ಲ. ಇದೀಗ ನನ್ನ ದೃಢ ನಿಶ್ಚಯ. ನೀನವಳನ್ನು ಕರೆದೊಯ್ಯದ ಹೊರತು ಅವಳು ಜೀವಿಸಿರಲಾರಳು.'

ಅಂತೂ ಗಂಗೂ ಕೃಷ್ಣರಾಯರೊಡನೆ ಹೊರಡುವುದು ನಿಶ್ಚಿಂತವಾದಂತಾಯಿತು. ಪಾರ್ವತೀಬಾಯಿಯನ್ನು ವಿಚಾರಿಸುವ ಗೊಡವೆಗೆ ಯಾರೂ ಹೋಗಲಿಲ್ಲ. ಅವಳಿಂದ ಸಮ್ಮತಿ ಸಿಕ್ಕುವ ಆಶೆಯಿದ್ದರಲ್ಲವೆ? ಮತ್ತು ಪಾರ್ವತೀಬಾಯಿಯಾದರೂ ಆಕ್ಷೇಪಿಸುವ ವಿಚಾರವನ್ನೇ ಮಾಡಲಿಲ್ಲ. ಅವಳಿಗೆಷ್ಟೋ ಕೋಪ ಬಂದಿತು; ಆದರೆ ತನ್ನ ಮಾತು ನಡೆಯದೆಂದರಿತು

ಮೂಕಳಾಗಬೇಕಾಯಿತು. ಆದರೂ ಅನೇಕ ವಿಧವಾಗಿ ತನ್ನ ಸಿಟ್ಟನ್ನವಳು ವ್ಯಕ್ತಮಾಡದಿರಲಿಲ್ಲ. ಅವಳ ಆ ಭಾವವನ್ನೆಲ್ಲರೂ ಅರಿತರು. ಭೀಮರಾಯರದನ್ನು ಸಂಪೂರ್ಣವಾಗಿ ಕಡೆಗಣಿಸಿದರು. ಕೃಷ್ಣರಾಯನತ್ತ ತನ್ನ ಲಕ್ಷ್ಯವನ್ನೇ ಕೊಡಲಿಲ್ಲ. ಗಂಗೂನಿಗೆ ಮಾತ್ರ ಬಹಳ ವ್ಯಥೆಯೆನಿಸಿತು. ಹೆತ್ತ ತಾಯಿಗೆ ದುಃಖಕೊಡಬಾರದೆಂಬ ಯೋಚನೆಯೂ ಒಂದು ಕ್ಷಣ ಅವಳ ಮನದಲ್ಲಿ ಬಂದಿತು; ಆದರೆ ಆ ಶುದ್ಧೀಕರಣ—ಆ ಭೀಕರ ನೋಟವವಳನ್ನು ಗಾಬರಿಗೊಳಿಸಿತು. ಆ ಬಂದೇ ಒಂದು ನೋಟ ಅವಳ ಎಲ್ಲ ವಿಚಾರಗಳನ್ನು ತೊಳೆದು ಬಿಟ್ಟಿತು. ಉಳಿಯುವುದೆಂದರೆ ಆ ಅತ್ಯಾಚಾರಕ್ಕೆ ಬಲಿಬೀಳಲೇಬೇಕೆಂಬ ನಂಬುಗೆ ಅವಳನ್ನು ಹೊರಡಲಣಿಗೊಳಿಸಿತು. ಹೊರಟಳು. ಅನ್ಯ ವಿಘ್ನಗಳೇನೂ ಉಂಟಾಗದೇ ಪ್ರಯಾಣ ನೆರವೇರಿತು.

ಉಗಿಬಂಡಿಯಲ್ಲಿ ಎರಡನೆಯ ವರ್ಗದ ಡಬ್ಬಿಯೊಂದರಲ್ಲಿ ಕುಳಿತಿದ್ದರು. ಅವರಿಬ್ಬರನ್ನುಳಿದು ಅನ್ಯ ಪ್ರವಾಸಿಗರಾರೂ ಇರಲಿಲ್ಲ. ಕೊಂಚ ಸಮಯ ಇಬ್ಬರೂ ಮೂಕರಾಗಿಯೇ ಉಳಿದಿದ್ದಳು; ಆದರೆ ಗಂಗೂನಿಂದ ಬಹಳ ವೇಳೆ ತಡೆಯಲಾಗಲಿಲ್ಲ. ಬಿಕ್ಕಿ ಬಿಕ್ಕಿಸಿ ಅಳಹತ್ತಿದಳು. ತನ್ನ ದುಃಖ ಹಗುರು ಮಾಡಿಕೊಳ್ಳುವ ಯೋಗ್ಯ ಅವಕಾಶ ಅವಳಿಗದುವರೆಗೂ ದೊರೆತಿರಲಿಲ್ಲ. ಗಂಡಸತ್ತಸುದ್ದಿಬಂದಾಗ ಒಮ್ಮೆಲೇ ದಿಙ್ಮೂಢಳಾದಳು; ಆದರೆ ಭೀಮರಾಯರು ತೀರಾ ದುಃಖಿತರಾದುದನ್ನರಿತು ತನ್ನ ಎದೆ ಕಲ್ಲು ಮಾಡಿ ಪ್ರೇಮಳ ಪಿತೃವಿನ ಸಾಂತ್ವನಕ್ಕಣಿಯಾದಳು ದಿನಾಲೂ ಶೋಕಪ್ರದರ್ಶನದ ಸಭೆಯ ಆ ನಾಟಕದಲ್ಲವಳಿಗವಕಾಶವೆಲ್ಲಿ? ಆಗ ಅನ್ಯರ ಕಪಟ ದುಃಖ ಕೇಳುವುದೇ ಅಸಹ್ಯವಾಗಿರುವಾಗ ತನ್ನ ಅಳುವನ್ನು ಕೇಳುವವರಾದರೂ ಯಾರು? ಮುಂದೆ ಆ ಶುದ್ಧಮಾಡುವ ಸಿದ್ಧತೆ. ಅವಳ ಹೃದಯ ಹಗುರಾಗುವುದರ ಬದಲು ಜಡವಾಗುತ್ತ ಬಂದು ಕೊನೆಗವಳನ್ನು ಆತ್ಮಾಹುತಿಗೆ ಸಿದ್ಧಗೊಳಿಸಿತು. ಒಂದು ಅನರ್ಥದೊಡನೆ ಅನೇಕ ಅನರ್ಥಗಳು ಸಂಭವಿಸುತ್ತ ಹೊದುದರಿಂದ ಅವಳಿಗೆ ಅಳುವುದಕ್ಕವಕಾಶವೇ ಸಿಕ್ಕಿರಲಿಲ್ಲ; ಮತ್ತು ಅಂತಹ ಪ್ರೇಮಳ ವ್ಯಕ್ತಿಯೂ ದೊರೆತಿರಲಿಲ್ಲ. ಒಡಹುಟ್ಟಿದ ಅಣ್ಣನಿಗಿಂತಲೂ ಮಿಗಿಲಾದ ಕೃಷ್ಣರಾಯನಲ್ಲಿಯೇ ಕುಳಿತಿದ್ದ. ಪ್ರಾಣವನ್ನುಳಿಸಿದುದಲ್ಲದೇ ಆ ಭೀಕರ ಶುದ್ಧೀಕರಣವನ್ನೂ ತಡೆದಿದ್ದನು. ಅಂತೆಯೇ ಗಂಗೂನ ದುಃಖ ಕಡಲು ಉಕ್ಕೇರಿ ಬಂದಿತು.

ಕೃಷ್ಣರಾಯನವಳ ಮನವನ್ನರಿತಿದ್ದನು. ಹತ್ತೆಂಟು ನಿಮಿಷ ಸುಮ್ಮನೆ ಕುಳಿತನು. ಅವಳಾ ಕಡು ದುಃಖ ಕೊಂಚ ಕಡಿಮೆಯಾಗಲು ಅವಳ ಸಾಂತ್ವನಕ್ಕೆ ತೊಡಗಿದನು.

'ಗಂಗೂ, ಗಂಗಕ್ಕಾ, ದುಃಖಿಸಬೇಡವ್ಮಾ.'

'ಅಣ್ಣಾ—ಅಣ್ಣಾ, ದುಃಖಿಸಬೇಡವೆಂದರೆ ಇನ್ನೇನು ಮಾಡಲಿ? ನನ್ನ ಜೀವನದಲ್ಲಿ ಉಳಿದುದಾದರೂ ಏನು?'

'ಗಂಗೂ, ಹತಾಶಳಾಗಬೇಡ. ಏನುಳಿದಿದೆಯೆಂದು ತಿಳಿಯುವುದಷ್ಟು ಸುಲಭವಲ್ಲ. ಇನ್ನೇನಿಲ್ಲವಾದರೂ ಆಯುಷ್ಯವಾದರೂ ಉಳಿದಿದೆಯಲ್ಲವೆ?'

'ಅಹುದು. ಉಳಿದಿದೆ, ನೀನುಳಿಯಿಸಿದೆಯೆಂದು ಉಳಿದಿದೆ. ಅಣ್ಣಾ, ನೀನೇತಕ್ಕುಳಿಯಿಸಿದೆ?'

'ಗಂಗಕ್ಕಾ, ಉಳಿಯಿಸಲು ನಾನಾರು? ಅದು ಪರಮಾತ್ಮನಿಚ್ಛೆ. ನೀನುಳಿಯಬೇಕೆಂದೇ ಅವನಿಚ್ಛೆಯಿದ್ದಮೂಲಕವೇ ನನಗೆ ಹಾಗೆ ಸಂಶಯ ಬಂದಿತು. ನಿನ್ನನ್ನುಳಿಯಿಸಲೂ ಪ್ರೇರಣೆಯಾಯಿತು. ಅಳಿವು-ಉಳಿವುಗಳೆರಡೂ ಆತನಾಧೀನವೇ ಅಲ್ಲವೆ?'

'ಆ ಪರಮಾತ್ಮನಿಗಾದರೂ ಕರುಣೆಯಿಲ್ಲವೆ? ಇಂಥ ವ್ಯರ್ಥವಾದ ಜೀವನ ಉಳಿಸುವದರಿಂದ ಅವನಿಗೇನು ಪ್ರಯೋಜನ?'

'ಮಗು, ಆ ಪರಮಾತ್ಮನ ಯೋಜನೆಯರಿವ ಸಾಮರ್ಥ್ಯ ನಮ್ಮದೆ? ಆತನ ಗೊತ್ತು-ಗುರಿಗಳಳಿವುದು ನಮ್ಮ ಅಳವೆ? ಆತನ ಇಚ್ಛೆ ಅವನಿಗೇ ಅರಿಕೆ. ಆದರೂ ಜೀವನ ವ್ಯರ್ಥವೆಂದೇಕೆ ಬಗೆಯುವೆ?'

'ಇನ್ನೇನಿದೆ? ಪರಾವಲಂಬನದಲ್ಲಿಯೇ ಜೀವ ನೂಕಬೇಕು. ಅನ್ಯರ ಸೇವೆಯನ್ನೇ ಆಶ್ರಯಿಸಬೇಕು. ತುತ್ತು ಅನ್ನಕ್ಕಾದರೂ ಅನ್ಯರ ಮುಖ ನೋಡಬೇಕು.'

'ಗಂಗೂ, ಯಾರೊಬ್ಬರ ಸೇವೆ ಯಾವಾಗಲೂ ಇದ್ದೇ ಇದೆಯಲ್ಲವೇ?'

'ಆದರೂ ತನ್ನದೆಂಬೊಂದು ಭಾವವಿದೆಯಲ್ಲವೆ?'

'ತನ್ನದೆಂದು ಬಗೆದರೆ ಜಗತ್ತೇ ತನ್ನದಾಗುವದಿಲ್ಲವೆ?'

'ಅನ್ಯರದು ತನ್ನದು ಹೇಗಾದೀತು?'

'ಮೊದಲಿನಿಂದಲೂ ಅದು ತನ್ನದಾಗಿದ್ದಿತೆ?'

'ಆದರೂ ಅದೊಂದು ಬಂಧನವಿದೆಯಷ್ಟೇ? ಆ ಬಂಧನದಿಂದ ತನ್ನದಿರಲಿಲ್ಲವಾದರೂ ತನ್ನದಾಗಿದ್ದಿತು.'

'ಅಂತಹದೊಂದು ಬಂಧನ ಎಲ್ಲಿಯೂ ಹಾಕಿಕೊಳ್ಳಬಹುದು. ಅದು ಅನ್ಯರು ಹಾಕಿದ್ದು, ಇದು ತಾನೇ ಹಾಕಿಕೊಳ್ಳುವುದು. ಅದು ಧರ್ಮದ ಹೆಸರಿನಲ್ಲಿ. ಇದು ಕರ್ತವ್ಯದ ಪ್ರೇರಣೆಯಲ್ಲಿ. ಗಂಗಕ್ಕಾ, ಸಂಸಾರವಲ್ಲಿ-ಅಡುಗೆ, ಊಟ, ಮಕ್ಕಳು, ಮರಿಗಳಲ್ಲಿ ವೇಳೆ ಕಳೆವುದು ಜೀವನದ ಸಾರ್ಥಕತೆಯೆ? ಜನ್ಮ ಸಾಫಲ್ಯವಷ್ಟರಲ್ಲಿಯೇ ಇದೆಯೆ?'

'ನನ್ನಂತಹ ಸ್ತ್ರೀಯ ಜನ್ಮ ಸಾರ್ಥಕ್ಯವದರಲ್ಲಿಯೇ ಸರಿ. ಸ್ತ್ರೀಯಳಿಗೆ, ಅದರಲ್ಲಿಯೂ ನನ್ನಂತಹಳಿಗೆ ಸಾಫಲ್ಯವಿನ್ನೆಲ್ಲಿದೆ?'

'ಏಕಿಲ್ಲ?. ಇದೆ. ಎಲ್ಲೆಡೆಯಲ್ಲಿಯೂ ಇದೆ. ಕಂಡುಕೊಂಡರೆ ಮಾತ್ರ ಸಿಕ್ಕುವುದು. ಇದು ವರೆಗೆ ನೀನು ಬೆಳೆದ ಸಂಸ್ಕೃತಿಯಲ್ಲಿ ನಿನ್ನದೃಷ್ಟಿಯಷ್ಟರಲ್ಲಿಯೇ ಉಳಿದಿದೆ. ಅದಾದರೂ ತಪ್ಪೆಂದು ಹೇಳುವ ಸಾಹಸ ನಾನು ಮಾಡುವದಿಲ್ಲ. ಅದರಲ್ಲಿ ಸಾಫಲ್ಯವಿದೆ. ಇಲ್ಲವೆನ್ನುವುದಿಲ್ಲ; ಆದರೆ ಇನ್ನೆಲ್ಲಿಯೂ ಇಲ್ಲವೆನ್ನುವುದು ಮಾತ್ರ ತಪ್ಪು. ದೀನರ, ದಲಿತರ, ದುಃಖಿತರ ನೋವು-ಸಂಕಟಗಳನ್ನು ಅಲ್ಪವಾದರೂ ಕಡಿಮೆಮಾಡಲೆತ್ನಿಸಿದರೆ ಆಗದೆ?—ಜಗತ್ತಿನಲ್ಲಿ, ಅದರಲ್ಲಿಯೂ ನಮ್ಮೀ ದರಿದ್ರ ಭಾರತದಲ್ಲಿ ಪ್ರತಿ ವ್ಯಕ್ತಿಗೂ ಕೈಕೊಳ್ಳಬರುವಂತಹ ಕಾರ್ಯ ಅದೆಷ್ಟೋ ಇದೆ. ಭಾರತದುನ್ನತಿಗಾಗಿ ಯಾರು ಎಷ್ಟು ದುಡಿದರೂ ಕಡಿಮೆಯೇ ಹಾಗೆ ದುಡಿಯುವುದು-ಯತ್ನಿಸುವುದು ಪ್ರತಿಯೊಬ್ಬರ ಕರ್ತವ್ಯವೇ ಆಗಿದೆ. ಅದಕ್ಕಾಗಿ ಎಷ್ಟೋ ತ್ಯಾಗ ಮಾಡಬೇಕಾಗುವುದು ನಿಜವಾದ ಆನಂದ ಭೋಗಕ್ಕಿಂತಲೂ ತ್ಯಾಗದಲ್ಲಿದೆಯೆಂಬುದನ್ನನುಭವಿಸಿಯೇ ಅರಿಯಬೇಕು.'

'ಅಣ್ಣಾ, ನಿಜವಿದೆ. ಅನೇಕ ಮಹಿಳೆಯರ ಚರಿತ್ರೆಯನ್ನು ಓದಿದ್ದೇನೆ. ಹೆಸರು ಕೇಳಿದ್ದೇನೆ; ಆದರೆ ನನ್ನಂತಹ ಅಶಿಕ್ಷಿತ ಅನಾಥ ಸ್ತ್ರೀಯಳಿಂದ ಏನು ತಾನೇ ಸಾಧ್ಯ? ಅಂತಹ ಆದಾವ ಯೋಗ್ಯತೆ ನನ್ನಲ್ಲಿದೆ?'

'ಏಕಿಲ್ಲ? ಬೇಕಾದಷ್ಟಿದೆ. ಎಲ್ಲ ಮುಟ್ಟಿದವರೂ ಮಾಡಬಹುದಾದ ಕಾರ್ಯವಿದೆ. ಒಂದು ವೇಳೆ ಇಲ್ಲವೆಂದೆನಿಸಿದರೆ ಗಳಿಸಬಹುದು.'

'ಅಹುದು. ಆದರಾ ಸಮಯವೀಗ ಕಳೆದು ಹೋಯಿತು. ಮನೆಬಿಟ್ಟು ಹೊರಡುವುದೇ ಅಶಕ್ಯವಾಗಿರುವಾಗ ಯೋಗ್ಯತೆ ಗಳಿಸುವುದೆಂದರೇನು?'

'ಗಂಗಕ್ಕಾ, ಇದೀಗ ನಿನ್ನ ಕಲ್ಪನೆ ತಪ್ಪಿದೆ. ಅದಕ್ಕೆ ಪರಿಸ್ಥಿತಿಯೇ ಕಾರಣವಲ್ಲದೇ ನೀನಲ್ಲ; ಆದರೆ ನಿನಗಿಂತಲೂ ಕೀಳು ಪರಿಸ್ಥಿತಿಯಲ್ಲಿ ಹೇಗೋ ದಿನ ನೂಕುವವರೆಷ್ಟೋ ಜನರಿದ್ದಾರೆ. ಪ್ರಕೃತಿಯಿಂದ, ಬುದ್ಧಿಯಿಂದ ತೀರಾ ನಿಕೃಷ್ಟ ಪರಿಸ್ಥಿತಿಯಲ್ಲಿರುವ ಲಕ್ಷಾವಧಿ ಜನರನ್ನು ನೀನು ಕಾಣಬಹುದು. ಅವರಲ್ಲನೇಕರಿಲ್ಲದಿದ್ದರೂ ಕೆಲವರಾದರೂ ಸಮಾಜ-ದೇಶಗಳ ಸೇವೆಯಲ್ಲಿ ಜೀವನ ಸಾಫಲ್ಯಕಾಣುತ್ತಲಿದ್ದಾರೆ. ಗಂಗೂ, ಈಗಿನ ನಿನ್ನ ಅವಸ್ಥೆ ಪರಮಾತ್ಮನಿಚ್ಛೆಯೇ ಎಂದು ನಂಬಲಾಕ್ಷೇಪಣೆಯೇನು? ದೈವವೆಂದು ಹಲವರೆನ್ನಬಹುದು. ಆದರೂ ನಮ್ಮ ಸುಖ-ದುಃಖಗಳು ಪರಮಾತ್ಮ ಪ್ರೇರಿತವೆಂದು ದೊಡ್ಡವರು ಹೇಳುತ್ತಾರೆ. ಆದರಲ್ಲಿ ನಂಬುಗೆಯಿಡುವುದರಲ್ಲಿ ಹಾನಿಯೇನೂ ಇಲ್ಲ. ಇದೀಗ ಪರಮೇಶ್ವರನ ಇಚ್ಛೆಯಾಗಿದ್ದರೆ ಅದಕ್ಕೊಂದುದ್ದೇಶವಿಲ್ಲದೇ ಇರಲಾರದು. ಆ ಉದ್ದೇಶವಾವುದೆಂದು ನಾವು ತಿಳಿಯೆವು; ಆದರೆ ನಮಗೆ ಸರಿದೋರಿದ ದಾರೀ ಹಿಡಿವುದೇ ನಮ್ಮ ಕರ್ತವ್ಯ. ಅದೇ ಆ ಪರಮೇಶ್ವರನಿಚ್ಛೆಯೆಂದೇ ನನ್ನ ನಂಬುಗೆ. ಎಲ್ಲವೂ ಸರಿಯಾಗಿದ್ದರೆ ಪತ್ನೀ ಪುತ್ರ ಪಾಲನೆಯೇ ಕರ್ತವ್ಯವಾಗುತ್ತಲಿದ್ದಿತು. ಆದರದು ಸಣ್ಣ ಜಗತ್ತು. ಆ ಸಣ್ಣ ಜಗತ್ತಿನಿಂದ ಹೊರಗೆಳೆದು ವಿಶಾಲವಾದ ಜಗತ್ತನ್ನೇ ಪರಮಾತ್ಮ ನಿನಗೆ ಕಾರ್ಯಕ್ಷೇತ್ರವಾಗಿ ಕೊಟ್ಟಿರುವ. ಈ ವಿಶಾಲವಾದ ಕ್ಷೇತ್ರದಲ್ಲಿ ಕಾರ್ಯಮಗ್ನಳಾಗುವುದರಿಂದ ನಿನ್ನ ಸಾಫಲ್ಯ ನಿನಗೆ ಸಿಕ್ಕುವುದಲ್ಲದೇ ಅನೇಕರಿಗೆ ರಾಜಮಾರ್ಗ ತೋರಿಸುವ ಮಹದ್ಭಾಗ್ಯಕ್ಕೆ ನೀನು ಕಾರಣಳಾಗುವೆ. ಯಶಾಪಯಶಗಳನ್ನವನಿಗೊಪ್ಪಿಸಿ ಸರಿದೋರಿದ ದಾರಿ ಕೈಕೊಳ್ಳುವುದೇ ಯೋಗ್ಯವಾದುದು.'

'ಅಣ್ಣಾ, ನಾನಂತಹ ಕಾರ್ಯವೊಂದನ್ನು ಕೈಕೊಳ್ಳಬಲ್ಲೆನೆ? ಸಾರ್ಥಕತೆಯಿರಲಿ, ಇಲ್ಲದಿರಲಿ; ಜಗತ್ತಿಗೆ ಹಿತವಾಗಲಿ, ಆಗದಿರಲಿ ನನ್ನನ್ನು ನಾನು ಮರೆಯುವಂತಹ ಕಾರ್ಯವಾದರೆ ಸಾಕು.'

'ನೀನು ಯಾವ ಕಾರ್ಯವನ್ನಾದರೂ ಕೈಕೊಂಡು ಪೂರಯಿಸಬಲ್ಲೆ. ಅಂತಹ ಮಾರ್ಗಗಳನೇಕವಿವೆ.'

'ಹಾಗಾದರೆ ನನಗೊಂದನ್ನು ತೋರಿಸು. ಅನ್ಯ ವಿಚಾರಗಳಿಗವಕಾಶವಿಲ್ಲದೇ ಕಾಲಕಳೆಯುವಂತಾದರೆ ಸಾಕು.'

'ಗಂಗೂ, ತೋರಿಸುವೆ. ಬರಿಯ ದಾರಿಯೇಕೆ? ರಾಜಮಾರ್ಗವನ್ನೇ ತೋರಿಸುವೆ. ಬರಿಯ ಕಾಲಕಳೆವುದೇಕೆ? ಕಳೆದ ಪ್ರತಿ ನಿಮಿಷ ಶ್ರೇಷ್ಠತಮ ವಾದ ಕೆಲಸ ಸಾಧಿಸಬಹುದಾದ ದಾರಿ ತೋರಿಸುವೆ. ನೀನು ಹುಟ್ಟಿದುದು, ಬಳೆದುದು, ಈಗ ಉಳಿದುದೂ ಅದಕ್ಕೇನೇ ಎಂದು ನನ್ನ ದೃಢವಾದ ವಿಶ್ವಾಸವಿದೆ.'

'ಅದಾವುದು?'

'ಅಷ್ಟು ಆತುರವೇಕೆ? ನಿನ್ನ ಅಂತಃಕರಣವೀಗ ಬಹಳ ವ್ಯಥಿತವಾಗಿದೆ. ವ್ಯಥಿತಾಂತಃಕರಣದ ಮೂಲಕ ಮನ ಸರಿಯಾಗಿ ವಿಚಾರಮಾಡಲಾರದು. ಅರೆ ವಿಚಾರಗಳಿಂದ ಸರಿಯಾದ ದಾರಿಯೂ ಸಿಕ್ಕದು. ಮೊದಲು ಮನ ಶಾಂತವಾಗಲಿ. ಏನೂ ಆಗಿಲ್ಲ, ನೀನು ಮುನ್ನಿನಂತೆಯೇ ಇರುವೆಯೆನ್ನು ವಷ್ಟು ಶಾಂತತೆ ಸಿಕ್ಕಲಿ.'

'ಆದರದು ಹೇಗೆ ತಾನೇ ಸಾಧ್ಯ?'

'ಸಾಧ್ಯಾಸಾಧ್ಯಗಳ ಗೊಡವೆಯೇಕೆ? ಪ್ರಯತ್ನಮಾಡುವುದಷ್ಟೇ ನಮ್ಮ ಕರ್ತವ್ಯ. ಯಶಕೊಡುವವ ಪರಮಾತ್ಮ. ನಮ್ಮ ಯತ್ನ ಸರಿಯಾಗಿ ದ್ದರೆ ಪರಮಾತ್ಮ ಸಹಾಯ ನೀಡದಿರನು.'

---

## ಶಾಂತಾನುಕೂಲ ಪವನ.

ಮಾನವನ ಜೀವನವೊಂದು ಕಡಲಿನಲ್ಲಿ ಹೋಗುವ ಹಡಗವಿದ್ದಂತೆ. ಅದೂ ದೊಡ್ಡದಾದ. ಆಧುನಿಕ ಸಾಧನಗಳಿಂದ ಕೂಡಿದ ಉಗಿಹಡಗವಲ್ಲ. ಒಂದು ಚಿಕ್ಕ ನಾವು. ಗಾಳಿಯ ಬಲದಿಂದಲೇ ನಡೆಯತಕ್ಕದು. ಗಾಳಿ ಬಲ ವಾದಾಗ ಓಡುವುದು. ಮಂದವಾದಾಗ ಅದರ ಪ್ರಗತಿ ಕಾಣದಷ್ಟು ಮಂದವಾಗುವುದು. ಅದೇ ಗಾಳಿ ಪ್ರತಿಕೂಲವಾದ ಬಿರುಗಾಳಿಯಾದರೆ?— ಆಗ ಮಾತ್ರ ಆ ನಾವಿನ ಗತಿ ಹಿಮ್ಮೆಟ್ಟುವುದಿಷ್ಟೇ ಅಲ್ಲ, ಸುರಕ್ಷಿತವಾಗುಳಿವ ಆಶೆ ಕೂಡಾ ಇಲ್ಲದಾಗದಿರದು. ಮುಂದೆ ಹೋಗಬೇಕೆಂದು ಮಾಡಿದ ಯತ್ನಗಳೆಲ್ಲ ವ್ಯರ್ಥವಾಗುವುವು. ನಾವಿಕನ ಶಕ್ತಿಸರ್ವಸ್ವ ತೀರಾ ನಿಷ್ಫಲ ವಾಗುವದು. ಹತಾಶನೇ ಆಗುವ. ಇಂತಹ ಈ ನಿರಾಶಾಮಯ ಸ್ಥಿತಿ ಯಲ್ಲಿ ಬಿರುಗಾಳಿ ಶಾಂತಾನುಕೂಲ ಪವನವಾಗಿ ಮಾರ್ಪಟ್ಟರೆ—ಮುಷ್ಟಿ

ದನ್ನೆಲ್ಲ ಮರೆತು ಮುಂದೋಡುವುದು. ಮಾನವೀ ಜೀವನ ಸುಗಮವಾಗಿ ಸಾಗಿರುವಾಗ ಒಮ್ಮೆಲೇ ಮುಗ್ಗರಿಸುವುದು. ಮತ್ತೆ ಅವಕಾಶ ದೊರೆತಲ್ಲಿ-ದೊರೆವುದು ಹೇಗೆ? ಇದೀಗ ಬಿಡಿಸಲಾರದ ಸಮಸ್ಯೆ. ದೈವವೆಂದು ಕೆಲವರೆಂದರೆ ದೇವರೆಂದು ಹಲವರೆನ್ನುವರು. ಸ್ವಪ್ರಯತ್ನವೆಂದೂ ಅನ್ನುವವರಿದ್ದರೆ, ಜನತೆಯ ಬೆಂಬಲವೆಂದೂ ಅನ್ನುವವರಿಲ್ಲದಿಲ್ಲ. ಇದೆಲ್ಲ ಬಿಡಿಸಲಾರದ ಕಗ್ಗಂಟಾಗಿದ್ದರೂ ಸಂಕಟಗಳನ್ನೂ ಸವಿಯಾಗಿಸುವ ಸಾಂತ್ವನಪರ ಮಾತುಗಳ ಮಹತಿಯೂ ಬಹಳವಾಗಿದೆ. ಅಂಥ ಮಧುರ ಮಾತು ಆಡುವವರ ಹೃದಯಶುದ್ಧಿ ಮಾಡುವುದಲ್ಲದೆ, ಕೇಳಿದವರ ಹೃದಯವನ್ನೂ ಸುಖಸಮಾಧಾನಗಳಿಂದ ತುಂಬುತ್ತದೆಂದರೆ ಅಚ್ಚರ್ಯವಲ್ಲ.

ಗಂಗೂನ ಜೀವನ ನೌಕೆ ಪ್ರಕ್ಷುಬ್ಧ ಮಹಾಸಾಗರದಲ್ಲಿ ಪರ್ವತಪ್ರಾಯವಾದ ಭೀಕರ ತೆರೆಗಳಲೆದಾಟಕ್ಕೆ ಸಿಕ್ಕು ಮುಳುಗುವಂತಹ ಸ್ಥಿತಿಗೆ ತಲುಪುತ್ತಲಿದ್ದಿತು. ಆದರವಳ ದೈವಬಲದಿಂದಲೋ ದೇವರ ಪ್ರೇರಣೆಯಿಂದಲೋ ಕೃಷ್ಣರಾಯನ ಮುಖಾಂತರವಾಗಿ ಶಾಂತವಾದ-ಅನುಕೂಲವಾದ ಗಾಳಿಯಾಯಿತು. ಸುಗಮವಾಗಿ ಮುಂದೆ ಸಾಗಬಹುದೆಂಬಾಶೆ ಕಾಣಹತ್ತಿತು. ಆ ಭೀಕರ ಬಿರುಗಾಳಿ ದಿಶೆ ಮಾತ್ರ ಬದಲಿಸಿದ್ದಿತು. ಇಂತಹ ಬಿರುಗಾಳಿಗೆ ಸಿಕ್ಕ ನಾವಿಕ ದಂಡೆ ಸಿಕ್ಕತ್ತ ಹೊರಡುವದಿಲ್ಲವೆ? ತನ್ನ ಗವ್ಯವನ್ನಾ ಮೇಲೆ ಕಂಡುಕೊಳ್ಳುವದಿಲ್ಲವೆ? ಸಂಸಾರಿಗನ ಗವ್ಯುವಾದರೂ ಏನು? ಜೀವನಾನಂದ ಸವಿಯುವದು. ಅದಕ್ಕೊಂದು ನಿಶ್ಚಿತ ತಾಣವಿಲ್ಲ. ಎಲ್ಲೆಡೆಗಳಲ್ಲೂ ಕಾಣಬಹುದಾ ಆನಂದವನ್ನು.

ಕೃಷ್ಣರಾಯನುಪದೇಶ ಗಂಗೂನ ಮನವನ್ನು ಬಹಳವಾಗಿ ಶಾಂತಗೊಳಿಸಿತು. ಅತ್ಯಂತ ಕ್ಷುಬ್ಧವಾಗಿ ಹೊಯ್ದಾಡುವ ಹೊಯ್ದಾಟ ಬಹಳ ಮಟ್ಟಿಗೆ ತಣ್ಣಗಾಯಿತು. ನಿಲ್ದಾಣ ಬರುತ್ತಲೇ ಸಿಪಾಯಿಯವರನ್ನು ಕೆಳಕ್ಕಿಳಿಸಿದನು. ಮೋಟರಿನಲ್ಲಿ ಮನೆಗೆ ತಲುಪಿದರು.

ಮನೆಯಲ್ಲಿದ್ದವರು ಕೃಷ್ಣರಾಯನ ಪತ್ನಿ ಮನೋರಮೆ. ಅವಳಿಗೆ ಮೈಯಲ್ಲಿ ಸ್ವಸ್ಥವಾಗಿರಲಿಲ್ಲವಾದುದರಿಂದ ಮದುವೆಗಾಗಲಿ, ಆ ಮೇಲೆ ಪತಿಯೊಡನಾಗಲಿ ಬರಲಾಗಲಿಲ್ಲ. ಅವಳ ಎರಡು ಮಕ್ಕಳು. ಮೋಹನ ಮತ್ತು ಶಶಿಕಲೆ. ಮೋಹನನಿಗೆ ಐದು ವರುಷವಾದರೆ, ಶಶಿಕಲೆಗೆ ಎರಡು ವರುಷ.

ಗಂಗೂನನ್ನು ಮನೋರಮೆ ಮೊದಲಿನಿಂದಲೂ ತಿಳಿದಿದ್ದಳು. ಗಂಗೂನ ಆ ಮೋಹಕ ವರ್ತನೆಯಿಂದ ಬಹಳ ಆಕರ್ಷಿತಳಾಗಿದ್ದಳು. ಮದುವೆಗೆ ಹೋಗಲಾಗದಿದ್ದುದಕ್ಕೆ ಬಹಳ ಹಳಹಳಿಸಿದಳು ಮದುವೆ ಯಾದೊಡನೆ ಕರೆಯಿಸಿ ಅವಳನ್ನು ಆದರಿಸಬೇಕೆಂದು ಬಹವಾಳಗಿ ಬಗೆದಿದ್ದಳು. ಒಮ್ಮೆಲೇ ಭೀಕರ ಅನಾಹುತದ ವಾರ್ತೆ ತಿಳಿದು ಗಾಬರಿಯಾದಳು. ಮಂತ್ರಿಯೊಬ್ಬ ಬಂದ ಮೂಲಕ ಕೃಷ್ಣರಾಯನಿಗೂ ಹೋಗಲಾಗಲಿಲ್ಲ. ಗಂಗೂನ ಗಂಡನ ಮರಣವಾರ್ತೆ ಬರಲು ಮನೋರಮೆ ಕೃಷ್ಣರಾಯನನ್ನು ಬಲವಂತ ಪಡಿಸಿ ಕಳುಹಿಸಿದಳು. ಏನಾದರೂ ಮಾಡಿ ಗಂಗೂನನ್ನು ಕರೆತರಲೇಬೇಕೆಂದು ಒತ್ತಾಯಪಡಿಸುತ್ತಲಿದ್ದಳು. ದಿನಾಲು ಕೃಷ್ಣರಾಯನ ಬರವನ್ನೇ ನಿರೀಕ್ಷಿಸುತ್ತಲಿದ್ದಳು. ಗಂಗೂನ ಬರವಿನ ಬಗ್ಗೆ ನಿಶ್ಚಿತ ಸಂಗತಿಯೇನೂ ತಿಳಿಯದ್ದರಿಂದ ಅವಳಿನ್ನೂ ಆತುರಳಾಗಿದ್ದಳು.

ಗಂಗೂ ಆತುರ, ಭೀತಿ, ಸಂಕೋಚ ಮುಂತಾದ ಭಿನ್ನ ಭಾವನೆಗಳೊಡನೆ ಮನ ಹಿಂದೆ ಮುಂದೆ ಎಳೆಯುತ್ತಲಿರಲು ಒಳ ಬಂದಳು. ಮನೋರಮೆ ಹರ್ಷದಿಂದ ಮುಂಬಂದು ಸ್ವಾಗತಿಸಿದಳು. ಗಂಗೂನಿಗೆ ಸಂಕೋಚವೆನಿಸಿತು; ಆದರೆ ಅವಳನ್ನು ಮನೋರಮೆ ಕೈ ಹಿಡಿದೆಳೆದು ತನ್ನ ಹಾಸಿನ ಮೇಲೆಯೇ ಕೂರಿಸಿಕೊಂಡಳು. ಗಂಗೂನನ್ನು ಬಿಗಿದಪ್ಪಿದಳು. ಇಂತಹ ನಿಷ್ಕಪಟ ಪ್ರೇಮ ಗಂಗೂನ ಹೃದಯವನ್ನು ನೀರಾಗಿಸಿತು. ದುಃಖ ಒತ್ತರಿಸಿ ಬಂದಿತು. ಮನೋರಮೆ ಪ್ರೇಮ-ವಾತ್ಸಲ್ಯಗಳಿಂದ ಮೈ ಮೇಲೆ ಕೈಯಾಡಿಸುತ್ತ: 'ಗಂಗಕ್ಕಾ, ಗಂಗು, ಅಳಬೇಡ ಮಗು. ಅತ್ತು ಅತ್ತು ನನ್ನ ಕೂಸು ಗಾಸಿಯಾಗಿ ಹೋಗಿದೆ. ಮಗು, ನೀನಳುವದರಿಂದ ಸುಮ್ಮನೇ ಹಣ್ಣಾಗುವೆ.' ಎಂದು ನುಡಿದಳು.

ಗಂಗೂ ದೈನ್ಯ ತುಂಬಿದ ನೋಟದಿಂದ ಮನೋರಮೆಯನ್ನು ನೋಡಿದಳು. ಆ ದೀನ ನೋಟದಲ್ಲಿ ಅವಳಾ ಅಸಹಾಯ ಸ್ಥಿತಿಯೇ ಬಿಂಬಿಸಿದ್ದಿತು. ಆ ಒಂದೇ ನೋಟದಿಂದ ಮನೋರಮೆಗೆ ಅಪಾರ ದುಃಖವಾಯಿತು. ಮನೋರಮೆ ಅತ್ಯಂತ ವಾತ್ಸಲ್ಯದಿಂದ 'ಗಂಗೂ, ನೀನು ನನ್ನ ಮಗಳಾಗಿರುವೆ. ತಾಯಿಯೆಂಬ ಭಾವನೆಯಿಂದ ನನ್ನ ಮಡಿಲಲ್ಲಿ ಮಲಗು. ಈ ಮಾತೃಹೃದಯದ ಅಭೇದ್ಯ ಕೋಟೆಯಲ್ಲಿ ನಿನಗಪಾಯವೇನೂ ಇಲ್ಲವೆಂದು ನಂಬು.' ಈ ಮಾತುಗಳಿಂದ ಮನೋರಮೆ ತನ್ನ

ಹೃದಯವನ್ನೇ ಗಂಗೂನ ಹೃದಯಕ್ಕೆ ಬೆರೆಸಿದಳು. ಆ ಎರಡೂ ಹೃದಯ ಗಳು ಒಂದರಲ್ಲೊಂದು ಕೂಡಿಹೋದುವು. ಹೆತ್ತತಾಯಿಯ ಹೃದಯ ಧರ್ಮ ಬುದ್ಧಿಯಿಂದ ಕಲ್ಲಾಗಿರುವಾಗ ಅಂತಹ ಸ್ನೇಹಪೂರ್ಣವಾತ್ಸಲ್ಯ ಗಂಗೂ ನಿಗೆ ದೈಹಿಕವಾಗಿ ಯಾವ ಸಂಬಂಧವೂ ಇಲ್ಲದ ಮನೋರಮೆಯಲ್ಲಿ ಸಿಕ್ಕ ಬೇಕೆಂದರೆ ಅದೆಷ್ಟು ಅಚ್ಚರಿ! ಅನುಕೂಲ ಗಾಳಿ ನಾವಿಕ ನಿರೀಕ್ಷಿಸಿದ ದಿಶೆ ಯಿಂದಲೇ ಅವಾಗಲೂ ಬೀಸುವುದೆಂದು ಹೇಳಲಾಗುವುದಿಲ್ಲ. ಎಷ್ಟೋ ಸಲ ಅನಿರೀಕ್ಷಿತ ಘಟನೆ ಸಂಭವಿಸುವುದಕ್ಕೆ ಅನ್ಯ ಆಧಾರವೇ ಬೇಕಿಲ್ಲ. 'ಬಲೀ ಯಸೀ ಕೇವಲಮೀಶ್ವರೇಚ್ಛಾ' ಎಂದು ಕವಿ ಹೇಳಿದುದು ತೀರಾ ಸರಿ ಯಾಗಿದೆ.

ಕೃಷ್ಣರಾಯನಲ್ಲಿ ಗಂಗೂ ಎಷ್ಟೋ ನೆಮ್ಮದಿಯಾಗಿದ್ದಳು. ಮನೋ ರಮೆಯ ಆರೈಕೆಯನ್ನು ಸ್ವತಃ ಕೈಕೊಂಡಳು. ಅತ್ಯಂತ ದಕ್ಷತೆಯಿಂದ ಅವಳ ಓಷಧಿ ಪಥ್ಯಗಳ ವ್ಯವಸ್ಥೆನೋಡುತ್ತಲಿದ್ದಳು. ಎರಡೂ ಮಕ್ಕಳಿ ಗವಳೇ ತಾಯಿಯಾಗಿದ್ದಳು. ಮಾಮಲೇದಾರರ ಮನೆಯಲ್ಲೇತಕ್ಕೆಕಡಿಮೆ? ಹುಡುಗರೊಡನೆ ಆಡುವಳು. ಮನೋರಮೆಯಾಗಲಿ, ಕೃಷ್ಣರಾಯ ನಾಗಲಿ ಗಂಗೂನ ಮನಸ್ಸಿಗೆ ಅಲ್ಪವಾದರೂ ನೋವಾಗದಂತೆ ವರ್ತಿಸುತ್ತ ಲಿದ್ದರು. ನಿಜವಾದ ಪ್ರೇಮವಿದ್ದಲ್ಲಿ ಅನ್ಯಥಾ ಆಡರಣೆಗವಕಾಶವೆಲ್ಲಿ? ಆದರೂ ಆಗಾಗ ಗಂಗೂನ ಹೃದಯವಳುಕಿಸುವ ವಿಷಯವವಳ ತಂದೆ- ತಾಯಿಗಳ ವಿಚಾರ. ಭೀಮರಾಯರಲ್ಲಿ ಅತಿಯಾದ ಅಕ್ಕರೆ. 'ತಂದೆ ಹೇಗಿ ರುವನು? ಆತನಾರೈಕೆ ಮಾಡುವವರಾರು? ಸಂಕಟದಿಂದ ಜರ್ಜರಿತನಾದ ಅವನ ಸುಖ ನೋಡುವವರಾರು?—'ಮುಂತಾದ ವಿಚಾರಗಳಿಂದ ಮನಸ್ಸು ಬಹಳವಾಗಿ ಕುತೂಹಲಗೊಂಡು ತಂದೆಯ ಬಳಿಯಲ್ಲಿಯೇ ಉಳಿಯ ಬೇಕೆಂಬಾಶೆ ಬಲವಾಗುವುದು. ತಾಯಿಯ ಬಗ್ಗೆ ತನ್ನಾಮನ ಅಷ್ಟು ಕಠೋರ ವಾದುದಕ್ಕೆ ತನ್ನನ್ನೇ ತಾನು ನಿಂದಿಸಿಕೊಳ್ಳುವಳು; ಆದರೆ ಆ ಶುದ್ಧೀ ಕರಣ—ಅವಳ ಮನ ಇನ್ನೂ ಕಠೋರವಾಗುವುದು. ಧಾರವಾಡದಲ್ಲಿನ ಈ ಕೆಲ ದಿನಗಳ ವಾಸ್ತವ್ಯ ಅವಳಿಗೆನಿತೋ ಸಂಗತಿಗಳರಿವು ನೀಡಿದ್ದಿತು. ಸ್ವಂತಕ್ಕೆ ಸಂಬಂಧಿಸಿದ ವಿಧವೆಯರ ಈ ಬಗೆಯ ಶುದ್ಧೀಕರಣ—ಬಲವಂತ ದಿಂದ ಅವರನ್ನು ವಿಕಾರಗೊಳಿಸುವುದು ತಪ್ಪೆಂಬ ಭಾವನೆಯುಂಟಾಗಿ ಅವಳ ಮನ ತಾಯಿಯ ಬಳಿಯಿಂದ ದೂರ ಸರಿಯುವುದು. ಆಗಾಗ

ಬರುವ ಓಲೆಗಳ ಮೂಲಕ ತಂದೆಯ ಕುಶಲವರಿತು ಅಷ್ಟರಲ್ಲಿಯೇ ತೃಪ್ತಿ ಹೊಂದಿ, ತನ್ನ ಕಾರ್ಯಕ್ರಮದಲ್ಲಿ ಮಗ್ನಳಾಗುವಳು.

ಗಂಗೂನ ಆರೈಕೆಯ ಫಲವಾಗಿ ಮನೋರಮೆ ಬೇಗ ಗುಣವಾದಳು. ಇಬ್ಬರೂ ಕೂಡಿ ಹುಡುಗರೊಡನೆ ತಿರುಗಾಡಲು ಹೋಗುವರು. ಎಲ್ಲಿಯಾದರೂ ಆಮಂತ್ರಣವಿದ್ದರೆ ಹೋಗುವರು. ಮೊದ ಮೊದಲು ಗಂಗೂ ಒಪ್ಪುತ್ತಲಿರಲಿಲ್ಲ; ಆದರೆ ಮನೋರಮೆ ಬಲವಂತದಿಂದೆಳೆದೊಯ್ಯುತ್ತಲಿದ್ದಳು. ಇನ್ನು ಜನರಿಗಾದರೂ ಆದರ ಪರಿವೆಯೇನು? ಆತುರವಿದ್ದವರು ಯಾರೆಂದು ಕೇಳಿ ತಿಳಿದರು; ಆದರೆ ಆಕ್ಷೇಪಣೆಯೆಲ್ಲಿಯೂ ಬರಲಿಲ್ಲ; ಮತ್ತು ಹಳ್ಳಿಯವರಂತೆ ಶಹರದವರ ಸ್ಥಿತಿಯಿಲ್ಲ. ಇಂತಹ ಬಾಲವಿಧವೆಯರೆನಿತೋ ಇರುವರು. ಇದು ತೀರಾ ಪರಿಚಿತ ವಿಷಯ. ಹೀಗೆ ಗಂಗೂನ ವೈಚಳಿ ಮುರಿದಂತಾಯಿತು. ಶಾಲೆ-ಕಾಲೇಜುಗಳನ್ನೂ ಅಲ್ಲಿ ಕಲಿಯುವ ವಿದ್ಯಾರ್ಥಿ ವೃಂದವನ್ನೂ ಕಂಡು ಗಂಗೂನಿಗೆ ಆದರವೆನಿಸುವದು. ತನ್ನ ಕಲಿಯಬೇಕೆಂಬ ಮನದ ಆಕಾಂಕ್ಷೆ ಮುನ್ನಿನಿಂದ ಇದ್ದರೂ, ಹೇಗೆ ತ್ಯಜಿಸಬೇಕಾಯಿತೆಂಬಬಗ್ಗೆ ಅದೆಷ್ಟೋ ಸಲ ಹಳಹಳಿಸುವಳು. ಗಂಡು ಮಕ್ಕಳಿಗೆ ಕಲಿಯುವ ಅವಕಾಶ ಬೇಕಾದಷ್ಟಿರುವಾಗ, ಅದರ ಲಾಭ ತೆಗೆದುಕೊಂಡು ಎಲ್ಲರೂ ಏಕೆ ಜ್ಞಾನ ಸಂಪಾದನೆ ಮಾಡುವದಿಲ್ಲವೆಂದು ಕೇಳುವಳು. ಈ ಬಗ್ಗೆ ಗಂಗೂ-ಮನೋರಮೆಯರಲ್ಲಿ ಆಗಾಗ ಚರ್ಚೆ ನಡೆವುದು.

'ಗಂಗೂನನ್ನು ಮುಂದೆ ಓದಿಸುವ ವ್ಯವಸ್ಥೆಯೇನು ಮಾಡಿದಿ?' ಮನೋರಮೆಯೊಮ್ಮೆ ಪತಿಯನ್ನು ಕೇಳಿದಳು. ಇದುವರೆಗೆ ಅವರೀರ್ವರಲ್ಲಿ ಎಷ್ಟೋ ಚರ್ಚೆಯಾಗಿದ್ದಿತು. ಶಾಲೆಗೆ ಕಳಿಸುವುದಂತೂ ಆರಂಭದ ಉಪಾಯವಾಗಿ ಕೈಕೊಂಡು ಮುಂದೆ ಅನುಕೂಲಿಸಿದ ಮಾರ್ಗ ಸ್ವೀಕರಿಸಬೇಕೆಂಬ ನಿರ್ಣಯವೂ ಆಗಿದ್ದಿತು.

'ವ್ಯವಸ್ಥೆಯೇನು? ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆಯಿದೆ. ಬೇಕಾದಾಗ ಕಳಿಸಬಹುದು. ಗಂಗೂ ಸಿದ್ಧಳಾಗುವಳೇ?'

'ಆಕ್ಷೇಪಿಸಲಿಕ್ಕಿಲ್ಲವೆಂದು ತೋರುತ್ತದೆ. ಆದರೂ ತಂದೆ-ತಾಯಿಗಳ ಸಮ್ಮತಿ ಸಿಕ್ಕದಿದ್ದರೆ ಅವಳೊಪ್ಪುವದು ಕಠಿಣವಾಗುವದು.'

'ತಂದೆಯ ಸಮ್ಮತಿ ಸಿಕ್ಕುವದೇನೂ ಅಷ್ಟು ಕಠಿಣವಲ್ಲ. ಹಳೆಯ ತರಹದ ಮನುಷ್ಯನಾದರೂ ಚಿಕ್ಕಪ್ಪ ವಿಚಾರಿ ಇರುವ. ನಾನು ಹೇಳಿದ ಮೇಲೆ

ಆದಕ್ಕೆ ಅಡ್ಡ ಹೋಗಲಾರನು; ಆದರೆ ತಾಯಿಯ ಸಮ್ಮತಿ ಎಂದೂ ಯಾರಿಂದಲೂ ಸಾಧ್ಯವಿಲ್ಲ.'

'ಅಷ್ಟು ಕಠಿಣ ಹೃದಯಿಯೇಕಾಗಿರಬಹುದು?'

'ಅದೀಗ ಉಜ್ವಲ ಸಂಸ್ಕೃತಿಯ ತಪ್ಪು ಉಪಯೋಗದ ಪರಿಣಾಮ.'

ಅದೇನು? ಅಂತಹ ತಪ್ಪು ಉಪಯೋಗವಾವುದು?'

'ನಿಜ ಹೇಳಬೇಕೆಂದರೆ, ಈ ಶ್ರೇಷ್ಠವಾದ ಸಂಸ್ಕೃತಿಯ ಮೂಲ ತತ್ವ ನಮ್ಮ ಮನದಲ್ಲಿ ಮೂಡಿಲ್ಲ. ಬರೀ ಬಾಹ್ಯರೇಷೆ ಮಾತ್ರ ಉಳಿದಿದೆ. 'ದಯೆಯೇ ಧರ್ಮದ ಮೂಲ' ವೆಂದು ಎಲ್ಲ ಧರ್ಮಸಂಸ್ಥಾಪಕರೂ ಸಾರಿದ್ದಾರೆ. ಶಾಸ್ತ್ರ-ಪುರಾಣಗಳೂ ಹೇಳುತ್ತವೆ. ಆದರೂ ಈಗ ಎಲ್ಲೆಡೆಯಲ್ಲಿ ಪಸರಿಸಿದುದು ದಯೆಯಿಲ್ಲದ ಧರ್ಮವೇ. ಧರ್ಮ ಕಟ್ಟುಗಳು ಕಠೋರ ಹೃದಯಹೀನ ಆಚರಣೆಗಳಾಗಿವೆ. ಕ್ರೂರ ಅಪರಾಧ ಮಾಡದವನಿಗೂ ನ್ಯಾಯಾಧೀಶನಿಗೆ ದಯೆತೋರಿಸಲವಕಾಶವಿತ್ತಿರುವಾಗ ಈ ಧರ್ಮದಾಚರಣೆಯಲ್ಲಿ ದಯೆಗೆ ಸ್ಥಾನವೇ ಇಲ್ಲವೆಂಬ ಸಂಗತಿ ನಿಜವಾಗಿಯೂ ಶೋಚನೀಯ. ರೂಢಿಯಿಂದ ಬಂದಾ ಧರ್ಮಕಾರ್ಯಗಳನ್ನು ಸರಿಯಾಗಿ ಆಚರಿಸಿದರಾಯಿತು. ಅದೇ ಧರ್ಮವೆಂಬ ನಮ್ಮ ಕಲ್ಪನೆ ರೂಢವಾಗಿದೆ. ಅದನ್ನಾಚರಿಸದವ ಧರ್ಮಹೀನನೆಂಬ ಕಠೋರ ಟೀಕೆಗೆ ಗುರಿಯಾಗುತ್ತಾನೆ. ಆ ಧರ್ಮದ ಕಟ್ಟುಗಳ ಮರ್ಮವೇನೆಂದು ವಿಚಾರಿಸುವವರೇ ಇಲ್ಲ ನಿಜವಾದ ಧರ್ಮದ ಮರ್ಮ ಮರೆಯಾಗಿ ಹೀಗೆ ಧಾರ್ಮಿಕರೆನಿಸಿಕೊಳ್ಳುವವರ ಮನ ನಿರ್ಜೀವ ಯಂತ್ರದಂತಾಗಿದೆ. ಯಂತ್ರಕ್ಕೆಲ್ಲಿಯ ದಯೆ?'

'ಆದರೆ ಸುವಿಚಾರಿಗಳೆನ್ನಿಸಿಕೊಳ್ಳುವವರು ಹೀಗೆ ಆಚರಿಸುವದೇಕೆ?'

'ಇಂಥಆಡರಣೆಯುಳ್ಳವರಿಗೆ ವಿಚಾರಿಗಳೆನ್ನುವುದು ಕೂಡಾ ಸರಿಯಾಗಲಾರದು. ವಿಚಾರವಿದ್ದರೆ ತಾನೇ ವಿಚಾರಿ. ಇವರ ಕಣ್ಣು ಕಲ್ಪನಾಮಯ ಪಾಪ-ಪುಣ್ಯಗಳ ಪರೆಯಿಂದ ಕಾಣದಾಗಿವೆ. ಪಾಪವೆಂದರೇನು? ಪುಣ್ಯವೆಂದರೇನೆಂಬ ಯೋಚನೆಯೇ ಇವರಿಗಿಲ್ಲ. ರೂಢಿಯಿಂದ ಬಂದ ಕೆಲ ಮೂಢ ಕಲ್ಪನೆಗಳಲ್ಲಿ ಮುಚ್ಚಿಹೋಗಿದ್ದಾರೆ. ಇದು ಪಾಪ, ಇದು ಪುಣ್ಯ ಎಂಬ ನಿರ್ದಿಷ್ಟವಾದ ನಿಯಮಗಳನ್ನೇ ಇಟ್ಟುಕೊಂಡಿದ್ದಾರೆ. ಪುಣ್ಯಸಂಪಾದನೆಯ ಕಾರ್ಯವೊಂದರಲ್ಲಿ ಅದೆಷ್ಟು ಪಾಪ ಕಟ್ಟಿಕೊಳ್ಳುತ್ತಾರೆಂಬ ಅರಿವಾದರೂ ಇದ್ದಿದ್ದರೆ—'

'ಛೆ, ಇದೆಂಥ ಧರ್ಮವಿದು?'

'ಇದೇ ಕುರುಡು ಧರ್ಮ. ಇಂಥದೇ ಸಂಸ್ಕೃತಿಯಲ್ಲಿ ಬೆಳೆದ ಇವರು ಒಮ್ಮೆ ಒಬ್ಬರು ಒಂದು ನಿರ್ಣಯ ಕೊಟ್ಟರಾಯಿತು. ಅನ್ಯರದನ್ನು ಅಲ್ಪವಾದರೂ ಅನುಮಾನವಿಲ್ಲದೆ ಅನುಕರಿಸುತ್ತಾರೆ. ಒಬ್ಬರು, ಇಬ್ಬರು—ಹೀಗೆಯೇ ಮತ್ತೆ ಕೆಲವರು ಅಂದುದನ್ನೇ ಅಂದರಾಯಿತು. ಬ್ರಾಹ್ಮಣನಿಗೆ ಯಜ್ಞಪಶು ನಾಯಿಯಾಗಿ ಕಾಣಲಿಲ್ಲವೆ? ಅದನ್ನವನು ಒಗೆದೋಡಲಿಲ್ಲವೆ? ಇದೂ ಹಾಗೆಯೇ. ಪ್ರತ್ಯಕ್ಷ ಹೆತ್ತ ತಾಯಿಯಾಗಿದ್ದರೂ ಮಗಳ ವ್ಯಕ್ತಿಮತ್ವ, ಗುಣ, ನಡೆವಳಿಗಳೆಲ್ಲ ಮರೆಯಾಗಿ ಮಗಳ ಬಗ್ಗೆ ವಿರೋಧಭಾವವುದಿಸಿತು. ಪಾಪಕಲ್ಪನೆ ಮೂಡಿತು. ಹೆತ್ತ ತಾಯಿಯೇ ಕಡು ವೈರಿಯಾದಳು.'

'ನಿಜವಾಗಿಯೂ ವಿಚಿತ್ರ.'

'ಅಹುದು ಹೀಗಿದ್ದರೂ ತಾಯಿಯೆದೆ ಇಷ್ಟು ಕಲ್ಲು ಏಕಾಯಿತೆಂಬದು ತಿಳಿಯುವಂತಿಲ್ಲ; ಅಥವಾ ತನ್ನ ಆ ಧರ್ಮದಲ್ಲಿರುವ ಅಚಲವಾದ ಶ್ರದ್ಧೆಯೇ ಅದಕ್ಕೆ ಕಾರಣವಿರಬಹುದು; ಆದರೆ ಚಿಕ್ಕಪ್ಪ ಇದಕ್ಕೆ ತೀರಾ ವಿರೋಧವಾದ ಸ್ವಭಾವದವ. ಹಳೆಯ ರೂಢಿ—ಸಂಸ್ಕೃತಿಗಳಿಗನುಸರಿಸಿ ಪ್ರವಾಹಪತಿತನೇ ಆಗಿದ್ದನು; ಆದರೆ ಒಮ್ಮೆಲೆ ಅಂಥ ಪರಿಸ್ಥಿತಿಯುಂಟಾಗಲು ಪ್ರತಿಭಟಿಸಿದ- ಚಿಕ್ಕಮ್ಮನ ವಿರೋಧವನ್ನು ಎಷ್ಟು ಮಾತ್ರವೂ ಗಣಿಸುವದಿಲ್ಲ. ಅದೂ ಗಂಗೂನಷ್ಟಕ್ಕೇನೇ. ಅಲ್ಲಿ ಪ್ರೇಮ ಧರ್ಮದ ಕಟ್ಟುಗಳನ್ನೂ ಮೀರಿದೆ. ಇಲ್ಲಿ ಧರ್ಮ ಪ್ರೇಮವನ್ನು ಹಿಂದು ಹಾಕಿದೆ. ಇದೇ ವಿಚಿತ್ರ.'

'ಹಾಗಿದ್ದರೆ ಓಲೆಯೊಂದನ್ನು ಬರೆದು ಅವರನ್ನು ಬರಮಾಡಿಕೊಳ್ಳಬಹುದಲ್ಲವೆ? ಆ ವರೆಗೆ ನಾನೂ ಗಂಗೂನ ಸಮ್ಮತಿ ದೊರೆಕಿಸುವೆ."

ಒಡನೆಯೇ ಎಂಟು ದಿನಗಳಲ್ಲಿ ಬಂದಿದ್ದ ಮೋಹನನ ಹುಟ್ಟುಹಬ್ಬಕ್ಕೆ ಬರಬೇಕೆಂದು ಓಲೆಯೊಂದು ಹೋಯಿತು. ಎರಡೇ ದಿನಗಳಲ್ಲಿ ಬರುವುದಾಗಿ ಮಾರೋಲೆಯೂ ಬಂದಿತು.

ಭೀಮರಾಯರ ಮಾರೋಲೆ ಬಂದ ದಿನ ಸಂಜೆಗೆ ಗಂಗೂ-ಮನೋರಮೆಯರು ತಮ್ಮ ಮನೆಯಂಗಣದಲ್ಲಿ ಕುರ್ಚಿಗಳಲ್ಲಿ ಕುಳಿತಿದ್ದರು. ಹರಟೆಯೇನೋ ನಡೆದಿದ್ದಿತು.

'ಗಂಗೂ, ನನ್ನದೊಂದು ವಿಚಾರವಿದೆ. ನಿನಗೆ ಹೇಗೆನ್ನಿಸುವುದೊ?"

'ಅದೇನು ಅತ್ತಿಗೀ, ಅಂತಹ ವಿಚಾರವೇನು?'

'ನೀನು ಒಪ್ಪುವುದಾದರೆ ಹೇಳುತ್ತೇನೆ.'

'ನಿನ್ನಮಾತನ್ನು ನಾನೆಂದಾದರೂ ಅಲ್ಲಗಳೆಯುವೆನೆ?'

'ಆದರೂ ಹೀಗೆ ಹೇಳುವ ಮೊದಲು ವಿಚಾರಿಸಿನೋಡು.'

ಒಮ್ಮೆಲೇ ಗಂಗೂನ ಮನದಲ್ಲಿ ಭಿನ್ನ ಭಿನ್ನ ವಿಚಾರಗಳು ತಾಕಲಾಡಿದುವು. ಸುಶಿಕ್ಷಿತರು, ಸುಧಾರಿಸಿದವರು, ಅಧಿಕಾರಿಗಳು. ಇಂತಹರ ವಿಚಾರವೇನಿರಬೇಕು? 'ದುತ್ತಿ ಮದುವೆಯಾಗೆನ್ನುವರೆ?' ಮದುವೆಯ ವಿಚಾರವವಳನ್ನು ತನ್ನ ವಿವಾಹದ ಆ ಭೀಕರ ವಾತಾವರಣಕ್ಕೆಳೆದೊಯ್ದಿತು. ಅನೇಕ ಭೀಕರ, ಭಯಾನಕ ನೋಟಗಳು ಕಣ್ಣೆದುರು ಭಯಂಕರವಾಗಿ ಕುಣಿಯತೊಡಗಿದವು. ಮದುವೆಯ ವಿಚಾರ ಕೂಡ ಅವಳಿಗೆ ಸಹನವಾಗಲಿಲ್ಲ. ತೀರಾ ಗಾಬರಿಯಾದಳು.

ಮನೋರಮೆ ಅವಳ ಮನವರಿತಳು.

'ಗಂಗೂ, ಗಂಗಕ್ಕಾ, ನೀನು ಸುಮ್ಮನೆ ಭಯಪಡಬೇಡ. ನಿನ್ನ ಮನಸ್ಸು ಗಾಸಿಯಾಗುವಂಥ ವಿಚಾರ ನಾನು ತ್ರಿಕಾಲಕ್ಕೂ ಹೇಳುವದಿಲ್ಲ; ಆದರೆ ಒಂದು ಸಂಗತಿ ಮಾತ್ರ ಸ್ಪಷ್ಟವಾಗಿ ತಿಳಿದುಕೊಳ್ಳು. ಗಂಡ ಸತ್ತನೆಂದೊಡನೆ ಹೆಂಡತಿಯ ಅಸ್ತಿತ್ವ ಅಳಿಸಿ ಹೋಗುತ್ತದೆಂದೇನೂ ಅಲ್ಲ. ಹೋಗುವದಿಲ್ಲ, ಹೋಗಲಾರದು. ಅಂತೇ ಹೋಗಕೂಡದು. ಒಂದಾನೊಂದು ಸಮಯ ಸತಿ ಹೋಗುವ ರೂಢಿಯಿದ್ದಿತು. ಎಷ್ಟೋ ಸಲ ಮನಸ್ಸಿಗೆ ವಿರುದ್ಧವಾಗಿದ್ದರೂ, ಬಲವಂತದಿಂದಾದರೂ ಗಂಡಸತ್ತವಳನ್ನು ಸುಡುತ್ತಲಿದ್ದರು. ಅದು ಸರಿಯಿದ್ದಿತೆಂದು ಆಗಿನ ಕಾಲಮಾನಗರಿತು ಮಾತ್ರ. ಸರಿಯಾಗಿ ತೋರಿದರೆ ಹೇಳಿದರಾದೀತು; ಆದರೆ ಬಾಣ ಮುಂತಾದವರು ಈ ಅನುಮರಣ ನಿಂದಿಸಿದ್ದನ್ನು ನೀನು ಕೇಳಿಯಾದರೂ ತಿಳಿದಿರಬಹುದು. ಆದರಲ್ಲಿ ಕಾಲಮಾನವೀಗ ಬದಲಿಸಿದೆ. ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಸತಿಹೋಗುವುದು ಮೂರ್ಖತನವೆಂದಿಷ್ಟೇ ಅಲ್ಲ, ಪುನರ್ವಿವಾಹವನ್ನು ಕೂಡಾ ಕಾಯಿದೆಯಿಂದ ಸರಿಯಾಗಿಸಿದ್ದಾರೆ. ಮನುವು ಕೂಡಾ ಪುನರ್ವಿವಾಹಕ್ಕೆ ಸಮ್ಮತಿ ಕೊಟ್ಟಿರುತ್ತಾನೆಂದು ಕೇಳುತ್ತೇನೆ; ಆದರೆ ನಾನೀಗ ನಿನಗೆ ಪುನರ್ವಿವಾಹ ಮಾಡಿಕೊಳ್ಳೆಂದು ಹೇಳುವುದಿಲ್ಲ. ಅದು ಬೇರೆಯವರು ಹೇಳುವ ಸಂಗತಿಯೂ ಅಲ್ಲ. ನಿನಗೆ ಸರಿಗಂಡಾಗ್ಗೆ ಸರಿಗಂಡರೆ

ಮಾಡಿಕೊಳ್ಳಬಹುದು, ಇಲ್ಲವಾದರೆ ಬಿಡಬಹುದು. ನನ್ನ ವಿಚಾರದ ವೆಂದರೆ ಗಂಡನ ಮರಣಾನಂತರ ಹೆಂಡತಿ ಜೀವಿಸಿರಲೇ ಬೇಕು. ಅದೇಕೆ, ಜೀವಿಸಿರುವ ಹಕ್ಕು ಅವಳಿಗಿದ್ದೇ ಇದೆ. ಜೀವಿಸಿರುವುದಾದಲ್ಲಿ ಜೀವನ ಧ್ಯೇಯ ಸಾಧಿಸಬೇಕು. ಅದಕ್ಕೆ ತಪ್ಪಿದರೆ ಕರ್ತವ್ಯಚ್ಯುತಿಯಾಗುವುದೆಂದು ನನ್ನ ದೃಢ ವಿಶ್ವಾಸ. ಇಂದು ನಮ್ಮ ಭಾರತಕ್ಕೆ ಗಂಡ-ಮಕ್ಕಳಲ್ಲಿ ಮುಳುಗಿ ಹೊರ ಜಗತ್ತು ಕೂಡಾ ಕಾಣದಿರುವ ಅಬಲೆಯರಿಗಿಂತಲೂ ಜೀವಿತವನ್ನೇ ದೇಶಕ್ಕಾಗಿ, ಸಮಾಜಕ್ಕಾಗಿ ಧಾರೆಯೆರೆವ ಸಬಲೆಯರ ಅವಶ್ಯಕತೆ ಬಹಳವಾಗಿದೆ. ದೇವರು ನಿಮಗೊಂದು ಅಂತಹ ಸಂಧಿ ದೊರಕಿಸಿ ಕೊಟ್ಟಿರುವ ಅಂತಹ ಮಹತ್ಕಾರ್ಯ ಕೈಗೂಡಿಸಬೇಕೆಂದಾತನ ಇಚ್ಛೆಯಿದ್ದುದಾದರೆ ನೀನೇಕೆ ಆತನ ಕರೆಗೆ ಓ ಕೊಡಲಾಗದು? ದೊರೆತ ಈ ಸಂಧಿಯ ಲಾಭ ನೀನೇಕೆ ತೆಗೆದುಕೊಳ್ಳಬಾರದು? ನಿನ್ನಂತಹ, ನಿನ್ನಕಿಂತಲೂ ಹೀನ ಸ್ಥಿತಿಯಲ್ಲಿರುವ ಅಸಂಖ್ಯ ಅಬಲೆಯರಿಗೆ ಒಂದು ದಾರಿಯನ್ನೇಕೆ ನೀನು ತೋರಿಸಬಾರದು? ನೀನಂತಹ ಸಬಲೆಯಾಗಬೇಕು. ನಿನ್ನ ಶಕ್ತ್ಯಾನುಸಾರ ಈ ಮಹತ್ಕಾರ್ಯಕ್ಕೆ ನೀನು ಸಮ್ಮತಿಸಬೇಕೆಂಬುದೇ ನನ್ನ ಹಾರೈಕೆ.'

'ಅತ್ತಿಗೀ, ನಿನ್ನ ಮಾತು ತೀರಾ ದಿಟವಿದೆ. ಮಕ್ಕಳಿಗೆ ಇಂತಹ ಯೋಗ್ಯದಾರೀ ತೋರುವ ತಂದೆ-ತಾಯಿಗಳೆಷ್ಟು ಜನರಿರುವರು ನಮ್ಮ ದೇಶದಲ್ಲಿ? ಸಂಕುಚಿತವಾದ ಮನೆಯ ಸಂಸಾರದಲ್ಲಿ ಮುಳುಗಿಸಬೇಕೆನ್ನುವವರೇ ಬಹಳ ಜನ. ಚಿಕ್ಕತನದಿಂದಲೂ ವಿಶಾಲ ಜಗತ್ತಿನಲ್ಲಿ ವಿಹರಿಸಲು ಹೆಣ್ಮಕ್ಕಳಿಗೆ ಅನುವೇಕೆ ಸಿಕ್ಕಬಾರದೆಂಬ ವಿಚಾರ ಇದ್ದೇ ಇದೆ; ಆದರೆ ಈಗ ನನ್ನ ಈ ಸ್ಥಿತಿಯಲ್ಲಿ ನಾನೇನು ತಾನೇ ಮಾಡಲು ಸಾಧ್ಯವಿದೆ?'

'ಏನಾದರೂ ಮಾಡಲು ಸಾಧ್ಯವಿದ್ದರೆ ಅದು ಇನ್ನು ಮೇಲೆಯೇ. ಏಕೆಂದರೆ ಈಗ ನೀನು ಈಗ ಚಿಕ್ಕ ಜಗತ್ತಿನಲ್ಲಿನಿಂದ ಬಿಡುಗಡೆ ಹೊಂದಿರುವೆ.'

'ಒಂದು ದೃಷ್ಟಿಯಿಂದ ನಿಜವೆನ್ನಬಹುದು. ಆದರದರಿಂದ ಇನ್ನೂ ಕತ್ತಲೆಗೆ ಮಾತ್ರ ನೂಕಲ್ಪಟ್ಟಿರುವೆನಷ್ಟೆ?'

'ಕತ್ತಲೆಯಲ್ಲುಳಿಯಬೇಕೆಂದರೆ ಬಿಡಿಸುವವರಾರು? ಆದರೆ ಹೊ ಬಂದರೆ ಬೇಡವೆನ್ನುವವರೂ ಇಲ್ಲ. ಇರಬಹುದು. ಆದರವರನ್ನು ಗಣಿಸಲು ಕಾರಣವೇನೂ ಇಲ್ಲ. ಆದುದರಿಂದ ಈಗ ನೀನು ಇನ್ನು ಮುಂದಕ್ಕೆ ಓದಬೇಕು. ಬೇಕಾದ ಅನುಕೂಲತೆ ಮಾಡಬಹುದು.'

'ಓದಬೇಕು. ಜ್ಞಾನ ಸಂಪಾದನೆ ಮಾಡಬೇಕು. ಸಾಧ್ಯವಿದ್ದ ಯಾವುದೊಂದು ಸಮಾಜ ಸೇವೆ ಸಲ್ಲಿಸಬೇಕು, ಎಂಬ ಹಾರೈಕೆ ಚಿಕ್ಕತನದಿಂದಲೂ ನನಗೆ ಬಲವಾಗಿದೆ. ಅನೇಕ ದೇಶಸೇವಕರ ಚರಿತೆ ನನ್ನಲ್ಲದೆಷ್ಟೋ ಸ್ಫೂರ್ತಿ ತುಂಬಿದ್ದಿತು. ಗಂಡುಸೇಕಾಗಲಿಲ್ಲವೆಂದೇಕೆಂದು ಎಷ್ಟೋ ಸಲ ಬಹಳವಾಗಿ ಹಳಹಳಿಸಿದ್ದೇನೆ.'

'ಗಂಡಸು ಮಾತ್ರ ಸಮಾಜ ಸೇವೆ ಮಾಡಬೇಕೆಂದೇನೂ ನಿಯಮವಿಲ್ಲ. ಯಾರೂ ಮಾಡಬಹುದು; ಮತ್ತು ಎಲ್ಲರೂ ಮುಂಬಂದು ಭಾರತದುನ್ನತಿಗೆ ಯತ್ನಿಸುವ ಕಾಲವೇ ಈಗ ಬಂದಿದೆ.'

'ಅಹುದು. ಹೀಗಿದ್ದರೂ ಈ ಅನುಕೂಲತೆ ಎಲ್ಲರಿಗೂ ಇರುವದೇ? ಎಲ್ಲರೂ ಇದರ ಲಾಭ ಪಡೆಯಲು ಸಮರ್ಥರಿರುವರೇ? ಯೋಗ್ಯ ಉತ್ತೇಜನವಿಲ್ಲದಿದ್ದರಿಲ್ಲ, ಹಿಂದೆ ಜಗ್ಗುವದನ್ನಾದರೂ ಸಮಾಜ ಬಿಡುವದೆ? ಎಲ್ಲರಿಗಿಲ್ಲವಾದರೂ ನನ್ನಂತಹ ಹಲವರಿಗಾದರೂ ಉಪಯೋಗವಾದೀತು.'

'ಅಹುದು. ಅಂತೆಯೇ ನಾನೀಗ ನಿನಗೆ ಹೀಗೆ ಹೇಳಿದದು.'

'ಆದರೆ ಅತ್ತಿಗೀ, ನಾನೀಗ ಶಾಲೆಗೆ ಹೋಗುವದು ಹೇಗೆ? ಜನರೇನೆಂದಾರು? ಅವ್ವ-ಅವ್ವನ ಅಪ್ಪಣೆ ಸಿಕ್ಕುವದು ತೀರಾ ಅಶಕ್ಯ. ಒಂದು ವೇಳೆ ಅಪ್ಪ ಒಪ್ಪಬಹುದು. ನೀನು ಹೇಳಿದರೆ—'

'ಗಂಗೂ, ಜನತೆಯ ವಿಚಾರ ಬೇಡ. ಜನವೋ ದನವೋ? ಮತ್ತು ಅದೆಲ್ಲ ಹಳ್ಳಿಗಳಲ್ಲಿ. ಇಲ್ಲಿ ನಿನ್ನಂತಹರೆಷ್ಟೋ ಜನರಿದ್ದಾರೆ. ಅವರು ಶಾಲೆಗೂ ಹೋಗುತ್ತಲಿದ್ದಾರೆ. ಟೀಕಿಸುವವರು ಹಿಂದೆ ಮಾತ್ರ ಟೀಕಿಸಬಹುದು. ಎದುರಿನಲ್ಲಿ ಟೀಕಿಸುವ ಎದೆಯಾರಿಗಿದೆ? ಇದು ವರೆಗೆ ನಿನಗಿದರ ಅನುಭವ ಬಂದಿರಲು ಸಾಕು.'

'ಅಹುದಹುದು. ಮೊದಮೊದಲು ನನಗೆ ಭಯವೆನಿಸುತ್ತಲಿದ್ದಿತು; ಆದರೆ ನಿನ್ನೊಡನೆ ಊರ ಹೊರಟಾಗ, ನಾಟಕ-ಸಿನೇಮಾಗಳಿಗೆ ಹೋದಾಗ ಸಭೆ-ಸಮ್ಮೇಲನಗಳಿಗೆ ಹೋದಾಗ ಎಲ್ಲೆಡೆಯಲ್ಲಿ ಆದರವೇ ಇದೆ.'

'ಮಾವನವರ ಸಮ್ಮತಿ ದೊರೆಕಿಸುವ ಹೊಣೆ ನಿಮ್ಮಣ್ಣ ಹೊತ್ತಿರುವರು.'

'ಅಂದರೆ ಈಗಾಗಲೇ ನೀವು ನಿರ್ಧರಿಸಿರುವಿರಾ?'

'ಅಹುದು. ಬರಿಯ ನಿರ್ಧಾರವಷ್ಟೇ ಏಕೆ? ಮೋಹನನ ಹುಟ್ಟುಹಬ್ಬಕ್ಕೆ ಬರಬೇಕೆಂದು ಓಲೆ ಬರೆದು, ಅವರಿಂದ ಬರುವ ಬಗ್ಗೆ ಆಶ್ವಾಸನವೂ

ದೊರೆತಿದೆ. ಓದುತ್ತೇನೆಂದು ನೀನು ಮಾವನವರಿಗೆ ತಿಳಿಸಿಬಿಡು. ಇನ್ನುಳಿದು ದೆಲ್ಲವೂ ತಾನೇ ಸರಿಯಾಗುವದು.'

'ಆಗಲಿ. ಅತ್ತಿಗೀ, ನನಗೀ ಅವಸ್ಥೆ ತಂದುದೂ, ನನ್ನನ್ನುಳಿಸಿದುದೂ ಇದೇ ಪರಮಾತ್ಮನ ಉಪದೇಶವಾಗಿದ್ದರೆ ನಾನೇಕೆ ಅಲ್ಲಗಳೆಯಲಿ? ನಿನ್ನಂತಹಳ ಬೆಂಬಲ ನನಗೆ ದೊರೆತುದೂ ಅದಕ್ಕೇನೇ ಇರಬೇಕು. ನಿನ್ನ ಈ ಸಮರ್ಥ ಉಪದೇಶ-ಹಾರೈಕೆಗಳಿಂದ ನಾನೇನನ್ನಾದರೂ ಸಾಧಿಸಬಲ್ಲೆನೆಂಬ ಹಾರೈಕೆ ಹುಟ್ಟುತ್ತಲಿದೆ. ನನ್ನಂತಹ ಅಬಲೆಯರು ಸಬಲೆಯರಾದಲ್ಲಿ ಅದೇನು ಕಾರ್ಯ ಕೈಗೂಡಿಸಬಲ್ಲರೆಂಬುದನ್ನೂ ಜಗತ್ತಿಗೆ ತೋರಿಸಬಹುದು.'

'ಗಂಗೂ, ನಾನು ಬಯಸುವದೂ ಇದೇ. ಹಿಂದಿನ ಕಾಲವಿಂದು ಬದಲಾಗಿದೆ. ಇಂದಿನದು ಮುಂದೂ ಉಳಿಯಲಾರದು. ಭಾರತವೀಗ ಸ್ವತಂತ್ರವಾಗಿದೆ. ಪ್ರತಿ ವ್ಯಕ್ತಿಗೂ ಸ್ವಾತಂತ್ರ್ಯ ಬೇಕು. ಆ ಸ್ವಾತಂತ್ರ್ಯದ ಸದುಪಯೋಗವಾಗಬೇಕು. ಸ್ವತಂತ್ರ ಭಾರತದ ಸ್ವತಂತ್ರ ಮಹಿಳೆಯರ ಕೀರ್ತಿ ಮೆರೆಯಬೇಕು. ನನ್ನ ಈ ಪ್ರಬಲೇಚ್ಛೆ ನಾನು ಸ್ವತಃ ಕೈಗೂಡಿಸಲಾರಳಾಗಿದ್ದರೂ ನಿನ್ನ ಮುಖಾಂತರವಾಗಿ ಸಾಧಿಸಬೇಕೆಂಬದೇ ನನ್ನ ಮಹತ್ವಾಕಾಂಕ್ಷೆ. ರೂಢಿಯ ಬೇಡಿ ಕಡಿದೊಗೆಯಬೇಕು. ಸಂಕುಚಿತ ಬುದ್ಧಿ ನಶಿಸಿ, ವ್ಯಕ್ತಿವಿಕಾಸಕ್ಕವಕಾಶ ಸಿಕ್ಕಬೇಕು. ಗಂಡ-ಮಕ್ಕಳಲ್ಲಿ ಮುಳುಗಿ ಇಂತಹ ವಿಶಾಲ ಕಾರ್ಯಕ್ಷೇತ್ರದಲ್ಲಿ ಪ್ರವೇಶಿಸಲಾಗದ ನನ್ನಂತಹ ಅನೇಕ ಹೃತ್ಪೂರ್ವಕ ಅಭಿನಂದನೆ ನಿನಗೆ ಸಿಕ್ಕುವುದು. ನನ್ನ ಉದ್ದೇಶ ಸಫಲವಾಗುವ ಸಮಯ ಬಂದಿತೆಂದರಿತು ನನಗೆ ಈಗ ನಿಜವಾಗಿಯೂ ಸಮಾಧಾನವಾಯಿತು.

---

# ಆಶೀರ್ವಾದ

ಭೀಮರಾಯರು ಬರುವ ದಿನ ಸಮೀಪಿಸಿತು. ಒಂದೊಂದೇ ದಿನ ಕಳೆದಂತೆ ಗಂಗೂನ ಮನದಲ್ಲಿ ಅನೇಕ ವಿಚಾರಗಳು ಬರಲಾರಂಭಿಸಿದುವು. ಮನೆಯ ಅನೇಕ ಹಿಂದಿನ ನೆನಹುಗಳು ಮತ್ತೆ ಮತ್ತೆ ಅವಳ ಮನವನ್ನು ಮುತ್ತುತ್ತಲಿದ್ದುವು. ಹುಟ್ಟಿ ಬಳೆದ ಊರು, ಮನೆಗಳೆಲ್ಲ ಸ್ಪಷ್ಟವಾಗಿ ಕಾಣತೊಡಗಿದುವು. ತನ್ನ ಸಂಗತಿಗಳ ಸ್ಮರಣೆಯಾಯಿತು. ಕೃಷ್ಣರಾಯರಲ್ಲಿ

ಮಕ್ಕಳೊಡನಾಟ, ಮನೋರಮೆಯೊಡನೆ ಮಾತು, ಓದು ಮುಂತಾದ
ಕಾರ್ಯಕ್ರಮದಲ್ಲಿ ಮಗ್ನವಾಗಿ ಮನ ಅದೆನಿತೋ ಮನೆಯನ್ನು ಮರೆ
ತಿದ್ದಿತು. ಆ ಮಕ್ಕಳೊಡನೊಂದಾಗಿದ್ದಳು. ಆ ಎರಡೂ ಹುಡುಗರವ
ಳಿಗೆ ಪ್ರಾಣಕ್ಕಿಂತಲೂ ಪ್ರಿಯವಾಗಿದ್ದುವು. ಆಗಾಗ ಮನೆ-ತಂದೆ-ತಾಯಿ
ಗಳಸ್ಮರಣೆಯಾಗುತ್ತಲಿದ್ದಿತು. ಆ ಶುದ್ಧೀಕರಣದ ಬಲುಮೆಯೊಂದಿಲ್ಲ
ವಾಗಿದ್ದರೆ!

ಭೀಮರಾಯರು ಬರಲು ಅವಳಿಗೆ ಮನೆಯ ಎಲ್ಲ ವಿಷಯಗಳೂ
ಸ್ಮರಣೆಗೆ ಬರುವಂತೆ ಮಾಡಿತು. ಪ್ರತಿ ಕಲ್ಲು-ಮರಗಳೂ ಅಷ್ಟು ಪ್ರಿಯ
ವಾಗಿ ತೋರಿದುವು. ಅದರಲ್ಲಿಯೂ ಹೆಣ್ಮಕ್ಕಳಿಗೆ ತವರುಮನೆ ಎಲ್ಲ
ಸುಂದರ ಸಂಗತಿಗಳ ತವರೇ ಆಗಿರುತ್ತದೆ. ತಾನು ತನ್ನದೇ ಆದ ಮನೆ
ಯಲ್ಲಿದ್ದು, ತಂದೆ ತನ್ನ-ತನ್ನದೇ ಆಗಿದ್ದ ಮನೆಗೆ ಬಂದುದಾಗಿದ್ದರೆ,
ಮನ ಎಷ್ಟೋ ಸಲ ಹಾರೈಸೀತು. ಇದೀಗ ಹೆಣ್ಮಕ್ಕಳಸಹಜವಾದ ಆಕಾಂಕ್ಷೆ.
ತಂದೆಯ ಮನೆ ಮದುವೆಯ ವರೆಗೆ ಮಾತ್ರ. ಆ ಮೇಲೆ ಅವರು ತಮ್ಮ
ದೆಂದು ತಿಳಿವುದು, ಮನೆಯೇ ತಾವಾಗಿ ಮನಮುಟ್ಟಿ ದುಡಿವುದು, ಆ
ಮನೆಯ ಮಾನ-ಮನ್ನಣೆಗಳಿಗೆಂದು ಹಗಲಿರುಳು ಯತ್ನಿಸುವದು, ಹಗಲಿ
ರುಳು ಆ ಮನೆಯ ಶ್ರೇಯಕ್ಕಾಗಿ ದೇವರನ್ನು ಪ್ರಾರ್ಥಿಸುವದು ಗಂಡನ
ಮನೆಯೇ ಅಲ್ಲವೆ? ಹೆಣ್ಣು ಮಕ್ಕಳ ಹೆಮ್ಮೆಯ ಮನೆಯೇ ಅತ್ತೆಯ ಮನೆ.
ಅವರ ಜೀವನ-ಮರಣಗಳದನ್ನೇ ಅವಲಂಬಿಸಿರುತ್ತವೆ.

ಆದರೆ ಗಂಗೂನಿಗಾ ಗಂಡನ ಮನೆಯೇ ಇರಲಿಲ್ಲ. ಗಂಡನೆನ್ನುವ
ವ್ಯಕ್ತಿಯಿಲ್ಲದ ಆ ಮನೆ ಗಂಡನ ಮನೆ ಹೇಗಾದೀತು? ಆ ಗಂಡನ ಮನೆಯ
ಅಭಾವ ಅವಳ ಮನಕ್ಕೆ ಬಹಳ ತೊಂದರೆ ಕೊಡುತ್ತಲಿದ್ದಿತು. ಸುವಿಚಾರಿ
ಯಾದವಳು ವಸ್ತುಸ್ಥಿತಿಯನ್ನು ಚನ್ನಾಗಿ ಅರಿತಿದ್ದಳು. ತನ್ನ ಮನದ
ಮರುಗನ್ನು ಅಲ್ಪವಾದರೂ ಹೊರಗೆ ಹಾಕುತ್ತಲಿರಲಿಲ್ಲ. ಅನ್ಯರಿಗಲ್ಪ
ವಾದರೂ ಸುಳುವುಗೊಡುತ್ತಲಿರಲಿಲ್ಲ. ತನ್ನ ಪ್ರೇಮದ ತಂದೆ ಬರುವ
ನೆಂಬ ಸಂಗತಿ ತಿಳಿದು ಹರ್ಷ-ವಿಷಾದಗಳೆರಡೂ ಒಮ್ಮೆಲೇ ಉಂಟಾದವು.
ತಾನು ಅಂತಹ ದೀನಾವಸ್ಥೆಯಲ್ಲಿ ಕೂಡಾ ನೆಮ್ಮದಿಯಾಗಿರುವ ವಿಷಯ
ತಿಳುಹಿ ತಂದೆಯ ಸಮಾಧಾನಕ್ಕಣಿಯಾದಳು. ತನ್ನ ಓದುವ ಧ್ಯೇಯ
ಸಾಧನೆಗೆ ತಂದೆಯ ಸಮ್ಮತಿ ಸಿಕ್ಕುವ ಆಶೆಯಿದ್ದಿತು. ಆತನಾ ಆಶೀರ್ವಾದ

ದಿಂದ ಜೀವನದಲ್ಲೇನಾದರೂ ಕಾರ್ಯ ಕೈಗೂಡಿಸುವ ಆಶೆ ಪ್ರಬಲವಾಯಿತು. ಅದರಿಂದವಳಿಗೆನಿತೋ ಹಿತವೆನಿಸಿತು.

ಶಿಪಾಯಿ ಭೀಮರಾಯರ ಸಾಮಾನಿನೊಡನೆ ಬಂದನು. ಭೀಮರಾಯರೂ ಬಂದರು. ಆಗತ-ಸ್ವಾಗತಗಳಾದವು. ಗಂಗೂ ಒಳಗಿನಿಂದಲೇ ನೋಡುತ್ತಲಿದ್ದಳು. ಮನೋರಮೆ ಕರೆಯಲು ಹೋದಳು.

ಕೃಷ್ಣರಾಯ ಕಚೇರಿಗೆ ಹೋಗುವ ವರೆಗೆ ಅದೆನಿತೋ ಚರ್ಚೆಯಾಯಿತು. ಗಂಗೂನ ಶಿಕ್ಷಣವೇ ಮುಖ್ಯವಾದ ವಿಷಯವೆಂದು ಬೇರೆ ಹೇಳಬೇಕಿಲ್ಲ. ಆ ಶಿಕ್ಷಣದ ಅವಶ್ಯಕತೆ, ಲಾಭ ಮುಂತಾದ ವಿಷಯಗಳನ್ನು ಸಯುಕ್ತಿಕವಾಗಿ ಚರ್ಚಿಸಿ ಅದರ ಬಗ್ಗೆ ಭೀಮರಾಯರಿಗೆ ಮನಗಾಣಿಸಿಕೊಟ್ಟನು. ಭೀಮರಾಯರು ಹೆಚ್ಚೇನೂ ಹೇಳದೆ 'ಕೃಷ್ಣಣ್ಣಾ, ಗಂಗೂನ ಎಲ್ಲ ಸುಖದುಃಖಗಳು ನಿನ್ನನ್ನೇ ಸೇರಿವೆ. ಈ ವಿಷಯ ನನ್ನನ್ನು ವಿಚಾರಿಸುವ ಆವಶ್ಯಕತೆಯೇ ಇಲ್ಲ. ನಿನಗೆ ಸರಿಯೆಂದು ತೋರುವ, ಗಂಗೂನ ಮನಕ್ಕೆ ಒಪ್ಪಿತವಾಗುವ ವಿಷಯಗಳನ್ನು ಕೈಕೊಳ್ಳಬಹುದು.' ಎಂದು ಮನ ಬಿಚ್ಚಿ ಹೇಳಿದರು; 'ಆದರೆ ಚಿಕ್ಕಪ್ಪಾ, ಗಂಗೂ ಒಪ್ಪಬೇಕಾದರೆ ನಿನ್ನ ಒಪ್ಪಿಗೆ ಬೇಕೇ ಬೇಕು. ನಿಮ್ಮಿಂದ ಆಗಲಿರಲು ಆಕೆಯ ಮನ ವ್ಯಥೆಗೊಂಡಾಗ ಇಂಥ ಕಾರ್ಯ ನಿನ್ನ ಸಮ್ಮತಿಯನ್ನುಳಿದು ಕೈಕೊಳ್ಳುವುದು ತೀರಾ ಅಶಕ್ಯ' ಕೃಷ್ಣರಾಯ ನುಡಿದ. 'ಕೃಷ್ಣಣ್ಣಾ ಗಂಗೂನ ಜೀವನಮಾರ್ಗವು ಒಂದು ಬದಿಕಟ್ಟಾಗಿದೆ. ಹಳಬರಾದ ನಮ್ಮ ಕಣ್ಣು ರೂಢಿಯ ಪರದೆಯಿಂದ ಕಟ್ಟಾಗಿವೆ; ಆದರೆ ಅವೇ ಸರಿಯೆನ್ನುವ ಆಗ್ರಹ ನನ್ನದಿಲ್ಲ. ನಿನಗೆ ಸರಿಗಂಡುದಕ್ಕೆ ನನ್ನ ಮನಃಪೂರ್ವಕವಾದ ಸಮ್ಮತಿಯಿದೆ.' ಪ್ರಾಂಜಲಮನದಿಂದ ಭೀಮರಾಯರು ಸಮ್ಮತಿಸಿದರು. ಇಬ್ಬರಿಗೂ ಆನಂದವಾಯಿತು.

ಕೂಡಲೆ ಕೃಷ್ಣರಾಯನೀ ಸಂಗತಿಯನ್ನು ಮನೋರಮೆಗೆ ತಿಳಿಸಿದನು. ಅದರಿಂದಾ ಸಾಧ್ವಿಗಾನಂದವಾಯಿತೆಂದು ಹೇಳಬೇಕೆ? ಒಡನೆಯೇ ಮನೋರಮೆ. 'ಗಂಗಕ್ಕಾ ಇಲ್ಲಿಗೆ ಬಾ.' ಎಂದು ಆನಂದದಿಂದ ಕರೆದಳು. 'ಗಂಗೂ, ಇಗೋ ನೋಡು. ನಾನು ಹೇಳಿದ ಮಾತು ದಿಟವಾಯಿತು. ಮಾವನವರು ನಿನ್ನ ಶಿಕ್ಷಣಕ್ಕೆ ಸಮ್ಮತಿಸಿದರು. ನನ್ನ ಧ್ಯೇಯ ಸಿದ್ಧಿಸಿ ನಿನ್ನಲ್ಲಿ ಕಾಣಬೇಕೆಂದಿರುವ ಹಾರೈಕೆ ಪೂರಯಿಸಿತು.' ಮನೋರಮೆಯ ಮಾತಿಗೆ ನಗುತ್ತ 'ಧ್ಯೇಯವಾವುದು? ಸಿದ್ಧಿಯೇನು?' ಕೃಷ್ಣರಾಯ ಕೇಳಿದ. 'ಅಣ್ಣಾ

ಏನೂ ಇಲ್ಲ. ಅತ್ತಿಗೆಯು ಗಾಳಿಗೋಪುರವೊಂದು." ಗಂಗೂ ಹಾರಿಕೆಯ
ಉತ್ತರ ಕೊಟ್ಟಳು. 'ಗಾಳಿ ಗೋಪುರವೇಕೆ? ಒಂದುವೇಳೆ ಗಾಳಿಗೋಪು
ರವೇ ಆಗಿದ್ದರೂ ಅದನ್ನೆಳೆದು ತಂದು ನಿಲ್ಲಿಸುವ ಚಮತ್ಕಾರ ಸಾಧಿಸುವೆ.
ಜಗತ್ತನ್ನು ಬೆರಗುಗೊಳಿಸುವೆ.' ಮನೋರಮೆ ಆವೇಶದಿಂದ ನುಡಿದಳು.
'ಅದೇನು? ಒಗಟೇ ತಿಳಿಯಲಿಲ್ಲ' 'ಕೃಷ್ಣರಾಯನೆಂದ. 'ಏನಿಲ್ಲ, ಗಂಗೂ
ಎಂದರೆ ಸಮಾಜದೃಷ್ಟಿಯಿಂದ, ಬಂಧು-ಬಳಗದವರ ದೃಷ್ಟಿಯಿಂದ ಒಬ್ಬ
ಸಾಮಾನ್ಯ ವಿಧವೆ. ದೀನಳು, ದುರ್ಬಲಳು, ಪತಿತಳು ಎಂದೇ ಇದೆ.
ಹತ್ತಿ-ಬತ್ತಿಗಳೇ ಅವಳ ಆಯುಧ. ವ್ರತೋಪವಾಸಗಳೇ ಗುರಿ. ಪುಣ್ಯ
ಸಂಪಾದನೆಯೇ ಸಾಧನೆ. ಅಥವಾ ಇನ್ನೂ ಸ್ವಲ್ಪ ಸುಧಾರಿಸಿದವರು ಏನೋ
ಸ್ವಲ್ಪ ಕಲಿತು ಶಿಕ್ಷಕಿಯೋ ಏನೋ ಆಗಿ ಹೊಟ್ಟೆ ಹೊರೆದುಕೊಳ್ಳಬೇಕು'
ಎಂದು ಅನ್ನಬಹುದು; ಆದರೆ ನನ್ನ ನೋಟ ಇದಕ್ಕೂ ಮುಂದೆ. ಬಹಳ
ಮುಂದೆ. ಅನ್ಯರ ಕಣ್ಣಿಗೆ ನಿಲುಕದಷ್ಟು ಮುಂದಿದೆ.' ಮನೋರಮೆ ಕಳ
ಕಳಿಯಿಂದ ನುಡಿದಳು.

'ಆದರೆ ಗಂಗೂ ಭಾರತದ ಮುಂದಾಳಾಗಬೇಕೆಂದಿರುವೆಯಾ?'
ಕೃಷ್ಣರಾಯ ಪ್ರಸನ್ನ ಮನದಿಂದ ಕೇಳಿದ. 'ಭಾರತದ ಮುಂದಾಳು ಮಾತ್ರ
ವಾದಲ್ಲಿ ಮುಗಿಯಲಿಲ್ಲ. ಹತ್ತೆಂಟು ಆವೇಶಯುಕ್ತವಾದ ಭಾಷಣಗಳನ್ನು
ಮಾಡಿದರೆ ಸಾಕು, ಮುಂದಾಳಾಗಬಹುದು. ಇಂತಹ ಮುಂದಾಳಾಗ
ಬೇಕೆಂದೇನೂ ನನ್ನ ಇಚ್ಛೆಯಿಲ್ಲ. ದೀನರ, ದಲಿತರ ತಾಯಿಯಾಗಬೇಕು.
ಬಡವರ ಭಾಗ್ಯದೇವತೆಯಾಗಬೇಕು, ಅಚ್ಚು ಮೆಚ್ಚಿನ ಮಗಳಾಗಬೇಕು.
ಇದೇ ನನ್ನ ಇಚ್ಛೆ, ಹಾರೈಕೆ.' ಮನೋರಮೆಯ ಈ ಗಂಭೀರ ಉದ್ಗಾರ
ಇಬ್ಬರ ಹೃದಯವನ್ನೂ ಹುರುಪು-ಹುಮ್ಮಸ್ಸುಗಳಿಂದ ತುಂಬಿತು. ಮೃದು
ಧ್ವನಿಯಿಂದ ಕೃಷ್ಣರಾಯ 'ಗಂಗಕ್ಕಾ, ನಿನ್ನ ಅತ್ತಿಗೆಯ ಆಶೆ ಸರಿಯಾಗಿದೆ.
ಪರಮೇಶ್ವರ ಅಂತಹ ಸಂಧಿ ನಿನಗೆ ತಂದುಕೊಟ್ಟಿರುವ. ಜನತೆಯ ಟೀಕೆ-
ಟಿಪ್ಪಣಿಗಳಿಗೆ ಲಕ್ಷ್ಯಕೊಡಬೇಡ. ಸಮಾಜವನ್ನು ಗಣಿಸಬೇಡ. ನಿಂದೆ-
ದೂಷಣಗಳಿಗೆ ಕಿವಿಗೊಡಬೇಡ. ಪರಿಚಯವಿಲ್ಲದಾಗ್ಗೆ ನಾಯಿ ಬೊಗ
ಳುತ್ತಲಿದ್ದರೆ, ಪರಿಚಯವಾದಾಗ ಅದೇ ನಾಯಿ ಬಾಲ ಅಲ್ಲಾಡಿಸದಿರದು.
ನಿನ್ನ ಅತ್ತಿಗೆಯ ಆಶೆ-ಆಕಾಂಕ್ಷೆಗಳಿಗೆ ನನ್ನ ಮನಃಪೂರ್ವಕವಾದ ಬೆಂಬಲ
ವಿದೆ. ಬೇಕಾದ ಸಹಾಯ ಸಿದ್ಧವಿದೆ.—'

ಅಂದು ಮಧ್ಯಾಹ್ನ ಗಂಗೂ ತಂದೆಯ ಆಶೀರ್ವಾದ ಪಡೆಯ ಹೊರಟಳು ವಿಧವೆ-ಸಕೇಶಿಯೆಂಬ ತಿರಸ್ಕಾರದ ಹೆಸರಿನಿಂದ ಕರೆಯಲ್ಪಡುವ-ವಿಧವೆಗೆ ಆಶಿರ್ವಾದವೆ? ವಿಧವೆಗೆ ಆಶಿರ್ವಾದವೆಂತಹದು? ವಿಧವೆಗೂ ಆಶಿರ್ವಾದಕ್ಕೂ ಎಲ್ಲಿಯ ಸಂಬಂಧ? ಅಹುದಹುದು. ನಮ್ಮ ಆಶೀರ್ವಾದ ಕೋಶವೆಲ್ಲವೂ ಕೊನೆಗೊಳ್ಳುವದು. 'ಅಷ್ಟ ಪುತ್ರ ಸೌಭಾಗ್ಯವತೀ ಭವ.' ಎನ್ನುವುದರಲ್ಲಿಯೇ ಹೆಣ್ಣುಮಕ್ಕಳ ಜೀವನಧ್ಯೇಯವಿಷ್ಟೇ ತಾನೇ? ಇದರಲ್ಲಿ ಸಾರ್ಥಕ್ಯವಿಲ್ಲವೆಂದಲ್ಲ; ಆದರೂ ಇಷ್ಟರಲ್ಲಿಯೇ ಕೊನೆಗೊಳ್ಳಬೇಕೆಂಬ ದೃಷ್ಟಿ ತೀರಾ ಸಂಕುಚಿತವಾದುದಲ್ಲವೆ? ಇರಲಿ. ಆಶೀರ್ವಾದ ವಿಸ್ತಾರವಾದರೂ ಮದುವೆ-ಮಕ್ಕಳಲ್ಲಿಯೇ ಮುಗಿಯಬೇಕೆ? 'ಧ್ಯೇಯ ಸಿದ್ಧಿಯಾಗಲಿ.' ಎಂಬೊಂದು ಆಶೀರ್ವಾದ ನಮ್ಮ ಆಶೀರ್ವಾದ ಕೊಶದಲ್ಲಿರ ಕೂಡದೆ? ಅದೂ ಪುರುಷರ ಮಟ್ಟಿಗಿದ್ದೀತು. ಸ್ತ್ರೀಯರಿಗಿಂತಹ ಆಶೀರ್ವಾದವೆಲ್ಲಿಯದು? ಅವರ ಧ್ಯೇಯವೆಲ್ಲವೂ 'ಎಂಟು ಮಕ್ಕಳನ್ನು ಹೆರುವುದರಲ್ಲಿಯೇ' ಇನ್ನು ವಿಧವೆಯರಿಗೂ ಈ ಆಶೀರ್ವಾದಕ್ಕೂ ಸಂಬಂಧವೆನಿತೂ ಇಲ್ಲ. ಇನ್ನುಳಿದ ಆಶೀರ್ವಾದಕ್ಕವರು ಅರ್ಹರೇ ಅಲ್ಲ. ಅಂತೆಯೇ ಗಂಗೂ ತಂದೆಯ ಆಶೀರ್ವಾದಕ್ಕೆ ಅಣಿಯಾದಳೆಂದರೆ ಅನೇಕರಿಗೆ ಆಶ್ಚರ್ಯವಾಗುವದು ಸ್ವಾಭಾವಿಕ. ಹೀಗಿದ್ದಲ್ಲಿ ಇದೊಂದು ಹೊಸ ರೀತಿಯೆನ್ನಬಹುದು. ಗಂಗೂ ಕೈಕೊಂಡ ಕಾರ್ಯವಾದರೂ ಒಂದು ವಿಧದಲ್ಲಿ ಹೊಸದೇ. ಹೊಸ ಕಾಲದ ಹೊಸ ಕಾರ್ಯಕ್ಕೆ ಹೊಸ ರೀತಿಯದೇ ಆದ ಆಶೀರ್ವಾದವಿರುವದು ಸ್ವಾಭಾವಿಕ. ಇರಲಿ.

ಗಂಗೂ ತಂದೆಯ ಬಳಿ ಸಾವಕಾಶವಾಗಿ, ಅನೇಕ ಭಾವನೆಗಳಿಂದ ಪ್ರೇರಿತಳಾಗಿ, ಅನನುಭೂತ ಭಾವನೆಗಳಿಂದ ಕೂಡಿ ಹೊರಟಳು. 'ಗಂಗೂ, ಗಂಗಕ್ಕಾ, ಮಗು'-ಭೀಮರಾಯರ ಕಂಠ ರುದ್ಧವಾಯಿತು. 'ಅಪ್ಪಾ.' ಎಂದು ಕಾತರತೆಯಿಂದ ಕೂಗಿ, ಗಂಗೂ ಧಾವಿಸಿ ತಂದೆಯನ್ನಪ್ಪಿದಳು. ಕೆಲ ಸಮಯ ಇಬ್ಬರ ಮುಖದಿಂದಲೂ ಮಾತುಗಳೇ ಹೊರಡಲಿಲ್ಲ. ಕಣ್ಣುಗಳು ನೀರಿನಿಂದ ತುಂಬಿ ಕಾಣದಾದುವು. ಕೆಲ ಸಮಯ ಇದೇ ಸ್ಥಿತಿಯುಳಿಯಿತು.

ಭೀಮರಾಯರು ತಮ್ಮ ಕಟುತಮ ಭಾವನೆಗಳನ್ನು ತಡೆಹಿಡಿದು ಮಗು ಶೋಕಿಸುವುದು ಸಾಕು. ಸಾಮಾನ್ಯರ ಕಣ್ಣುಗಳಿಗೆ ಈ ಅಳು ಸಹಜವಾದರೂ

ಇದೀಗ ಅವಶ್ಯವಿಲ್ಲವೆಂದು ವಿಚಾರಿಸಿದಾಗ ತಿಳಿಯದಿರದು. ಗಂಡನ ಸುಖವನ್ನು ಕ್ಷಣವಾದರೂ ಕಾಣದ ನೀನು ಆ ಗಂಡನಿಗಾಗಿ ಅಳುವುದೇಕೆ? ಮತ್ತು ಅದಕ್ಕಾಗಿ ನಿನ್ನ ಈ ಸುಂದರವಾದ ಜೀವನ ಹಾಳುಮಾಡುವುದೇಕೆ? ಇದೀಗ ಸರಿಯಲ್ಲವೆಂದು ಯಾವ ವಿವೇಕಿಯೂ ಹೇಳಬಲ್ಲನು. ಆದರೇನು ಮಾಡುವುದು? ವಿವೇಕಕ್ಕೆ ಅವಕಾಶವೇ ಇಲ್ಲದ ಸಂಸ್ಕೃತಿಯಲ್ಲಿ ನಾವು ಬೆಳೆದಿರುವೆವು. ನಮ್ಮ ಕಣ್ಣು ಕುರುಡಾಗಿವೆ. ನಮ್ಮ ನಿಜವಾದ ಸಂಸ್ಕೃತಿಯನ್ನು ಕೂಡಾ ನಾವು ಕಂಡಿಲ್ಲವೆಂಬಂತೆ ತೋರುತ್ತಿದೆ. ಏನೇ ಇರಲಿ, ನಾನು ಹಳಬ. ಹಳೆಯ ಸಂಸ್ಕೃತಿಯಲ್ಲಿ ಬೆಳೆದವ ಬಾಳಿನ ಕೊನೆದುದಿ ಮುಟ್ಟಲಿರುವವ. ನಮ್ಮ ಆ ಸಂಸ್ಕೃತಿ ನಿಜವಾದ ಸಂಸ್ಕೃತಿಯೋ ಹೇಗೆ? ಎಂದು ಇದುವರೆಗೂ ವಿಚಾರ ಮಾಡಲಿಲ್ಲ. ಈಗ ಮಾಡುವ ಶಕ್ತಿಯಿಲ್ಲ; ಮತ್ತು ಅವಶ್ಯವೂ ಇಲ್ಲ. ನಮ್ಮ ಸಂಸ್ಕೃತಿಗೊಪ್ಪಲಿ, ಒಪ್ಪದಿರಲಿ ಅದು ನಮ್ಮಷ್ಟಕ್ಕೇ ಉಳಿಯಲಿ. ನೀವೀಗ ಹೊಸ ಕಾಲದವರು. ಹೊಸ ಕಾಲಕ್ಕೆ ಹೊಸ ಧರ್ಮ. ಅದಾದರೂ ಹೊಸದಲ್ಲವೆಂದು ಅನೇಕರು ಹೇಳುತ್ತಲಿರುವ ಸಂಗತಿ ಬಲ್ಲೆ. ಆದರೂ ಆದರಲ್ಲಿನ ಸತ್ಯತೆಯರಿಯುವಷ್ಟು ಸಹನೆ ನಮಗೆ-ಹಳಬರೆನ್ನಿಸಿಕೊಳ್ಳುವ ನಮಗೆ ಇಲ್ಲವೆಂದು ಒಪ್ಪಿಕೊಳ್ಳುವೆ. ಹೀಗಿದ್ದರೂ ನಿಮಗೆ ಕಾಲ್ತೊಡಕಾಗಬೇಕೆಂದು ನನ್ನ ಇಚ್ಛೆಯಿಲ್ಲ ಅಂಥ ಸ್ವಾರ್ಥಿ ನಾನಲ್ಲ; ಮತ್ತು ಮುಖ್ಯ ಉದ್ದೇಶವೆಂದರೆ ನಿನಗೆ—ಒಂದು ಸಲ ನನ್ನಮಗಳಾದ-ಗಂಗೂ ಹೀಗೆಂದೊಡನೆ ಅನ್ಯಥಾ ಭಾವಿಸಬೇಡ. ಅಂದು ನೀನು ಬಾವಿಯಲ್ಲಿ ಬಿದ್ದಾಗಲೇ ನಿನ್ನ ಪೂರ್ವ ಜನ್ಮ ಕಳೆಯಿತು. ನಿನ್ನಣ್ಣ ನಿನಗೆ ಪುನರ್ಜನ್ಮ ನೀಡಿರುವ. ಆತನೇ ನಿನ್ನ ತಂದೆ. ಅವನನುಮತಿಯಂತೆ ನಿನಗೆ ಸರಿಬಂದುದನ್ನು ನೀನು ಮಾಡು. ಇನ್ನು ಆ ಪೂರ್ವದ ಸಂಬಧವನ್ನು ಸ್ಮರಿಸಿ ಸದ್ಯದ ನಿನ್ನ ಕಾರ್ಯ ಅನ್ಯರ ಕಣ್ಣಿಗೆ ಅನಾಚಾರವೆಂದು ತೋರಿದರೂ ನನಗೆ ಆಚಾರವೇ ಎಂಬ ನಂಬುಗೆಯದ್ದ ಮೂಲಕ, ನಿನ್ನ ಈ ಧ್ಯೇಯದಲ್ಲಿ ನಿನಗೆ ಸಂಪೂರ್ಣ ಯಶ ಸಿಕ್ಕಲೆಂದು ನಾನು ಅಂತಃಕರಣಪೂರ್ಣವಾಗಿ ಹರಸುತ್ತೇನೆ. ಹೆಚ್ಚೇನು? ಮಗು, ಕಾಲ ಹೊಸದಾದರೇನು? ಹಳೆಯದಾದರೇನು? ಸದಾಚಾರ-ಸದ್ವರ್ತನೆಗಳಾವಾಗಲೂ ಶ್ರೇಷ್ಠವಾದುವೇ ಇವೆ. ಅಂತಹ ಸದ್ವರ್ತನೆ ಬಿಡದೇ ಇರಬೇಕೆಂಬುದೇ ನನ್ನ ಬಯಕೆ. ಇನ್ನು ದೃಷ್ಟಿಭಿನ್ನತೆಯೂ ಇರಬಹುದು. ಹಾಗೆ ನಿಮಗೆ ಒಳಿತೆಂದು ತೋರಿದುದನ್ನು ನೀವು ಮಾಡಬಹುದು; ಆದರೆ ನನಗೆ ಸರಿಗಂಡ ಮಾರ್ಗಕ್ಕೆ ಒಪ್ಪಿಗೆ ಕೊಡಲು

ನಾನೆಂದೂ ಹಿಂದೆ ಬೀಳುವದಿಲ್ಲ. ಸದ್ಯದ ನಿನ್ನ ಮಾರ್ಗ ಸರಿಯೆಂದು ನನ್ನ ಮನವರಿಕೆಯಾಗಿದೆ. ಅದರಲ್ಲಿ ನಿನಗೆ ಸಂಪೂರ್ಣ ಯಶ ಸಿಕ್ಕಲೆಂದು ನಾನು ಮನಃಪೂರ್ವಕವಾಗಿ ಆಶೀರ್ವದಿಸುತ್ತೇನೆ. ತಂದೆಗೆ ಮಗಳದಾವ ಸ್ಥಿತಿಯಲ್ಲಿದ್ದರೂ ಮಗಳೇ ಎಂಬುದನ್ನು ನೆನೆದು ನಿನ್ನ ಒಂದು ಕಾಲದ ತಂದೆಯಾಗಿದ್ದ ಈ ತಂದೆಯ ಮನಃಪೂರ್ವಕವಾದ ಹರಕೆ. ನಿನ್ನ ಧ್ಯೇಯ ಸಿದ್ಧಿಸಲಿ— ಒಮ್ಮೆ ಜಗತ್ಪಾವನೆ ಗಂಗೆಯೆಂದು ಹೆಮ್ಮೆಪಡುತ್ತಲಿದ್ದೆ. ಆ ನನ್ನ ಹೆಮ್ಮೆ ಇನ್ನೂ ಪೂರಯಿಸಲೆಂದು ದೇವರಿಗೆ ಬೇಡಿಕೊಳ್ಳುವೆ—'

ಇಬ್ಬರ ಕಣ್ಣುಗಳೂ ಹನಿದುವು.

---

# ಪಾರ್ವತೀಬಾಯಿ.

ಇದುವರೆಗಿನ ಕತೆಯಿಂದ ಪಾರ್ವತೀಬಾಯಿಯ ಪಾತ್ರವನ್ನು ಓದುಗರರಿತಿರುವರು. ಆದರೂ ಸಂಪೂರ್ಣ ಚಿತ್ರ ಸರಿಯಾಗಿ ಸಿಕ್ಕಿರಲಿಕ್ಕಿಲ್ಲವೆಂಬ ಭಾವನೆಯೆ ಸದ್ಯದ ಭಾಗದ ವಿಷಯ.

ಒಮ್ಮೆಲೇ ಪಾರ್ವತೀಬಾಯಿಗೆ ತಾನೊಂದು ತೀರಾ ಹೊಸದಾದ ಜಗತ್ತಿನಲ್ಲಿ ಕಾಲಿಕ್ಕಿದಂತಾಯಿತು. ಗಂಗೂನ ಮದುವೆಯ ವರೆಗಿನ ಆ ಹೆಣ್ಣುಮಗಳ ಜೀವನ ಪ್ರವಾಹ ತನ್ನೊಂದು ರೀತಿಯಲ್ಲಿ ಶಾಂತವಾಗಿಯೂ ಸುಗಮವಾಗಿಯೂ ಸಾಗಿದ್ದಿತು. ದುಃಖ, ದುಗುಡಗಳರಿವೇ ಅವಳಿಗಾಗಲಿಲ್ಲವೆಂಬೊಂದು ಚಿಂತೆಯಿದ್ದಿತು. ಆದರೆ ಕೆಲವೊಂದು ಕಾಲಾವಧಿ ಮಾತ್ರ. ಆ ಕಾಲ ಕಳೆಯಲು ಪಾರ್ವತೀಬಾಯಿಯ ಮನ ಮೊದಲೇ ಪಾರಲೌಕಿಕದಲ್ಲಿ ತಿರುಗಿದುದು ಇನ್ನೂ ಅತ್ತವೇ ಹೊರಳಿದ್ದಿತು. ಐಹಿಕ ಸುಖಕ್ಕವಳು ಸಂಪೂರ್ಣವಾಗಿ ವಿಮುಖಳಾಗಿದ್ದಳು.

ಮುಂಜಾವಿನಿಂದ ಸಂಜೆಯ ವರೆಗಿನ ಕಾಲವೆಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ಪರಮಾತ್ಮನ ಚಿಂತೆಯಲ್ಲಿಯೇ ಕಳೆಯುತ್ತಲಿದ್ದಿತು. ಮನೆಯಲ್ಲಿ ಬೇಕಾದಷ್ಟಿರಲಿಲ್ಲವಾದರೂ ಸಾಕಾಗುವಷ್ಟಕ್ಕೆ ಕಡಿಮೆಯಿರಲಿಲ್ಲ. ಆ ಎಲ್ಲದರ ವಿನಿಯೋಗ ಧರ್ಮಕಾರ್ಯಕ್ಕಾಗಿಯೇ. ನಿತ್ಯನಿಯಮಗಳು ನಿಯಮಬದ್ಧವಾಗಿಯೇ ನಡೆಯುತ್ತಲಿದ್ದವು. ಮುಂಬೆಳಗಿನಲ್ಲಿಯೇ ಏಳುವುದು. ತಾಸೆರಡುತಾಸು ದೇವರ ಸ್ತುತಿಪಾಠಗಳಲ್ಲಿ. ಸೂರ್ಯೋದಯದ ತರುವಾಯದ ಒಂದು-ಒಂದೂ

ವರೆ ಗಂಟೆ ಗೋಸೇವೆ, ರಂಗವಲ್ಲಿಗಳಲ್ಲಿ ಕಳೆಯುವಷ್ಟರಲ್ಲಿ ನೈವೇದ್ಯ ತೋಳೆಯುವ ವೇಳೆಯಾಗುವದು. ನೈ ತೋಳೆದು ಗೌರೀಪೂಜೆ, ತುಳಸೀಪೂಜೆಗಳಾಗುತ್ತಲೇ ಅಡುಗೆ. ಮಧ್ಯಾಹ್ನದ ದ್ವಿತೀಯ ಪ್ರಹರ ಕೊನೆಗಾಣುವ ಸಮಯಕ್ಕೆ ಭೀಮ ರಾಯರ ಸ್ನಾನಾಹ್ನಿಕ, ರಾಮಶಾಸ್ತ್ರಿಗಳ ಪೂಜೆ ಮುಗಿಯುವವು. ಅವರೀರ್ವ ರೂ, ಮತ್ತುಳಿದ ಅತಿಥಿಗಳಾರಾದರೂ ಇದ್ದರೆ-ದಿನಾಲು ಬಹುಶಃ ಯಾರಾದರೂ ಇದ್ದೇ ಇರುತ್ತಲಿದ್ದರು-ಅವರೂ ಊಟಕ್ಕೆ ಕೂಡ್ರುವರು. ಗಂಡಸರ ಊಟ ಮುಗಿಯುತ್ತಲೇ ತನ್ನ ಊಟ, ಎಂಜಲು-ಗೋಮಯ ಮುಂತಾದವು ಮುಗಿ ಯುವಷ್ಟರಲ್ಲಿ ಎರಡು ಗಂಟೆಯಾಗುವುದು. ತಾಸೆಂಡುತಾಸು ಬೇಳೆ-ಕಾಳು ಗಳಲ್ಲಿ ವೆಚ್ಚಿಸುವದರಲ್ಲಿ ಪುರಾಣದ ಸಮಯವಾಗುವದು. ಇದೇ ಬಗೆಯ ಸಂಜೆ ಯ ಕಾರ್ಯಗಳು. ಇದರಲ್ಲಿ ಒಬ್ಬಳೇ ಒಬ್ಬ ಮಗಳಾದ ಗಂಗೂಬಿಗೋಸು ಗವೂ ಕೆಲ ಸಮಯ ವೆಚ್ಚಿಸಬೇಕಾಗುತ್ತಲಿದ್ದಿತು ಆದರೂ ಗಂಗೂನ ಹೆಚ್ಚು ಸಮಯ ಕಳೆವುದು ಭೀಮರಾಯರ ಬಳಿಯಲ್ಲಿಯೇ.

ಗಡಿಯಾರದಂತೆ ನಡೆಯುತ್ತಲಿರುವ ಈ ನಿಯಮಬದ್ಧ ಜೀವನದಲ್ಲಿ ವ್ಯತ್ಯಾಸವೇ ಆಗುತ್ತಿರಲಿಲ್ಲ. ನಿರ್ಜೀವ ಯಂತ್ರದಲ್ಲೂ ಏನಾದರೂ ಹರಿ-ಮುರಿ ಗಳಾಗಿ ವ್ಯತ್ಯಾಸ ಕಾಣಬಹುದು; ಆದರೆ ಪಾರ್ವತೀಬಾಯಿಯ ಜೀವನದಲ್ಲಿ ವ್ಯತ್ಯಾಸಕ್ಕವಕಾಶವೇ ಇರಲಿಲ್ಲ. ಯಾವ ಕೆಲಸ, ಯಾವ ಉದ್ಯೋಗ ಗಳಲ್ಲಿ ಮಗ್ನಳಾಗಿದ್ದರೂ ಮುಖದಲ್ಲಿ ದೇವರ ಸ್ತೋತ್ರ ತಪ್ಪುತ್ತಲಿರಲಿಲ್ಲ. ಬಾಹ್ಯ ಜಗತ್ತಿನಲ್ಲಿ ಭೂವ್ಯಾಕಾಶದಷ್ಟು ಮಾರ್ಪಾಟು ಕಾಣಬಹುದು. ಭಾರ ತವೂ ಅದ್ಭುತ ಕ್ರಾಂತಿ ಸಾಧಿಸಿ ಶೋಚನೀಯವಾದ ಪಾರತಂತ್ರ್ಯದಿಂದ ದಿವ್ಯವಾದ ಸ್ವಾತಂತ್ರ್ಯ ಪಡೆಯಿತು. ಅದರೊಡನೆ ಅನೇಕ ಮಾರ್ಪಾಟು ನಡೆದುವು. ಇವೆಲ್ಲವುಗಳ ಸಂಪರ್ಕ ಅಲ್ಪ. ಅತ್ಯಲ್ಪವಾದರೂ ಪಾರ್ವತಿ ಬಾಯಿಗೆ ಆಗಲಿಲ್ಲವೆಂದು ಹೇಳಿದರೆ ಆಶ್ಚರ್ಯಪಡುವ ಕಾರಣವಿಲ್ಲ. ದಾನ- ಧರ್ಮ ಮಾಡುವದು, ಪುಣ್ಯ ಸಂಪಾದನೆಯಲ್ಲಿ ಆಯುಃ ಸವೆಯಿಸುವದು ಮತ್ತಯಿದೆಯಾಗಿ ಮರಣ ಹೊಂದುವದು ಇದೇ ಅವಳ ಜೀವನದ ಹೆಗ್ಗುರಿ. ಪರಮಾರ್ಥಕ್ಕೆ ಸಂಬಂಧವಿಲ್ಲದ ಮಾತುಗಳನ್ನೇ ಆಡುತ್ತಲಿರ ಲಿಲ್ಲವೆಂದಲ್ಲಿ ಕೆಡಕು ನುಡಿಗಳಿಗವಕಾಶವೆಲ್ಲಿ? ತನು ಮನಧನಗಳನ್ನೆಲ್ಲ ಪುಣ್ಯ ಸಂಪಾದನೆಗಾಗಿಯೆ ವೆಚ್ಚಿಸುತ್ತಲಿದ್ದಳೆಂದರೆ ಸಾಕು. ಆ ಹೆಣ್ಣುಮಗಳ ಜೀವನ ಪ್ರವಾಹ ಹುಟ್ಟಿದುದು,ಹರಿದುದು ಇಂತಹ, ಇದೇ ಈ ಸಂಸ್ಕೃತಿಯಲ್ಲಿ.

ಸಂಸ್ಕೃತಿಯೆಂದರೇನೆಂಬ ಬಗ್ಗೆ ಅನೇಕ ಮಹನೀಯರು ಅನೇಕ ವಿಧ ವಾಗಿ ಚರ್ಚಿಸಿದ್ದಾರೆ. ಸಾಮಾನ್ಯವಾಗಿ ನಾನಿಲ್ಲಿ ಹೇಳುವದು ನಾವೆಲ್ಲ ಹುಟ್ಟಿ ಬೆಳೆದಾಗ ನಮ್ಮ ಸುತ್ತುಮುತ್ತಲಿನ ವಾತಾವರಣವೆಂದಿಷ್ಟು ಮಾತ್ರ. ಶಿಕ್ಷಣ, ಉಪದೇಶ ಮುಂತಾದವುಗಳೆಲ್ಲ ಇದರಲ್ಲಿಯೇ ಅಡಕವಾಗುತ್ತಿವೆ. ಪರಿಸ್ಥಿತಿಯ ಪಡಿಯಚ್ಚು ನಮ್ಮಲ್ಲಿ ಸಂಪೂರ್ಣವಾಗಿ ಬಿಂಬಿಸಿರುವ ಮೂಲಕ ಅದರ ಬಲ ಬಹಳವಿರುವದು ಸ್ವಾಭಾವಿಕ. ಹೀಗೆ ಸಂಸ್ಕೃತಿಯೊಂದು ನಮ್ಮ ಸ್ವಭಾವವೇ ಆಗಿರುತ್ತದೆನ್ನಬಹುದು, ಅಥವಾ ನಮ್ಮ ಸ್ವಭಾವ ನಿರ್ಮಾ ಣಕ್ಕೆ ಈ ಸಂಸ್ಕೃತಿಯೇ ಹೆಚ್ಚಾಗಿ ಕಾರಣವಾಗಿರುತ್ತದೆಂದರೆ ಇನ್ನೂ ಸರಿ ಯಾದೀತು. ಅಂತೆಯೇ ಸ್ವಭಾವದಂತೆ ಸಂಸ್ಕೃತಿಯೂ ಬದಲಿಸಲು ಬಾರ ದೆಂಬದು ಸಹಜ. ಅವರವರ ಸುಖ-ದುಃಖಗಳು ಅವರವರ ನಸೀಬದಂತೆ ಸಿಕ್ಕುವಂಥವು ನಸೀಬ ಒಳ್ಳೇದಿದ್ದರೆ ಫಲವೂ ಒಳ್ಳೇದೇ ಆಗುವದು. ಕೆಟ್ಟಿ ದ್ದಾಗಿದ್ದರೆ ಕೆಟ್ಟ ಫಲ. ಆ ನಸೀಬ ನಾವು ಗಳಿಸಿದ ಪುಣ್ಯ-ಪಾಪಗಳನ್ನವ ಲಂಬಿಸಿರುತ್ತವೆ. ಇಂದು ನಸೀಬ ಕೆಟ್ಟದಿದ್ದರೆ ಮುಂದಾದರೂ ಒಳ್ಳೇದಾಗ ಬೇಡವೆ? ಅಂತೆಯೇ ಪುಣ್ಯ ಗಳಿಸಬೇಕು. ಇದೇ ಈ ಸಂಸ್ಕೃತಿಯ ತಿರುಳು.

ಪಾರ್ವತೀಬಾಯಿ ಈ ತಿರುಳು ಚನ್ನಾಗಿ ತಿಳಿದವಳು. ರಾಮಶಾಸ್ತ್ರಿಗಳ ಪುರಾಣದಲ್ಲಿ ವ್ರತೋಪವಾಸ, ದಾನ-ಧರ್ಮಗಳ ಮಹತ್ವ ಬಂದೇ ಬರುವದು. ಈ ಧಾರ್ಮಿಕ ಬುದ್ಧಿ ಪಾರ್ವತೀಬಾಯಿಯಲ್ಲಿ ಸಂಪೂರ್ಣ ಮೈಗೊಂಡಿದ್ದಿತು. ಆಕೆಯ ಈ ಧಾರ್ಮಿಕತೆ ಗಂಗೂನ ಮದುವೆಯಲ್ಲಿ ಚನ್ನಾಗಿ ವ್ಯಕ್ತವಾಗಿ ದ್ದಿತು. ತನಗೆ, ತಮ್ಮ ಮನೆಗೆ, ಮಗಳು ಗಂಗೂನಿಗೆ ಕಲ್ಯಾಣದಾಯಕವಾಗ ಬೇಕೆಂದು ವಿವಾಹ ವಿಧಿಗಳಲ್ಲೊಂದನ್ನಾದರೂ ತಪ್ಪುತ್ತಲಿರಲಿಲ್ಲ. ಒಂದು ಕ್ಷಣವಾದರೂ ಬೇಸರುಪಟ್ಟುಕೊಂಡಿರಲಿಲ್ಲ. ದಾನ-ದಕ್ಷಿಣೆಗಳಲ್ಲಿ ಏನನ್ನೂ ಕಡಿಮೆ ಮಾಡಿರಲಿಲ್ಲ. ಅನ್ನದಾನವಂತೂ ವೆಗ್ಗಳವಾಗಿ ನಡೆಯಿತು. 'ಇಂತಹ ಮದುವೆ ಈ ಕಲಿಯುಗದಲ್ಲೆಂದೂ ನಡೆಯಲಾರದು. ಪುರಾಣಕಾಲ ದಲ್ಲಿ ಮಾತ್ರ ನಡೆದಿರುವವೆಂದು ಕೇಳುತ್ತೇವೆ. ಪಾರ್ವತೀಬಾಯಿ ಕೂಡ ಕಲಿಯುಗದವಳು ಅಲ್ಲವೇ ಅಲ್ಲ, ಪುರಾಣಕಾಲದ ಸೀತಾ-ಸಾವಿತ್ರಿಯರಿಗೆ ಸರಿಯಾದವಳು—' ಎಂಬ ಹೊಗಳಿಕೆಯಿಂದ ಜನರು-ವಿಶೇಷವಾಗಿ ಹೆಣ್ಣು ಮಕ್ಕಳು ಪಾರ್ವತೀಬಾಯಿಯನ್ನು ಬಾಯ್ತುಂಬ ಹೊಗಳುತ್ತಲಿದ್ದರು.

ಆದರೆ ಅಂತಹ ಧರ್ಮನಿಷ್ಠಳಿಗೆ ತೀರಾ ವಿಪರೀತವಾದ ಫಲ ದೊರೆಕಿತು. ಪ್ರತ್ಯಕ್ಷ ಯಮನೊಡನೆ ಹೋರಾಡಿ ಗಂಡನನ್ನು ಮರಳಿ ಪಡೆದಾ ಸತೀ ಶಿರೋಮಣಿ ಸಾವಿತ್ರಿಯೆಲ್ಲಿ? ಗಂಡನ ಮರಣಾನಂತರ ಆಚರಿಸಬೇಕಾದ ಧಾರ್ಮಿಕ ವಿಧಿಗೆ ಭಯಪಟ್ಟು ಬಾವೀ ಬೀಳುವ ಗಂಗೂ ಎಲ್ಲಿ? ಧರ್ಮ ಮೂರುತಿಯೇ ಎಂದು ಹೆಸರುಗೊಂಡ ಪಾರ್ವತೀಬಾಯಿಯೆಲ್ಲಿ? ಅವಳ ಮಗಳೇ ಆಗಿದ್ದರೂ ಧರ್ಮಾಚರಣಕ್ಕೆ ಹೆದರ್ಯೋಡುವ ಗಂಗೂನೆಲ್ಲಿ? ಗಂಗೂ ಧರ್ಮಾಚರಣಕ್ಕೆ ಹೆದರಿದುದೇಕೆ? ಅಥವಾ ಗಂಡನನ್ನೇ ಕಳೆದುಕೊಳ್ಳಲು ಕಾರಣವೇನು? 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್' ಎಂದು ಭಗವಂತ ಸಾರಿ ಹೇಳಿರಲು, ಸ್ವಲ್ಪೇ ಏಕೆ,ಉಸಿರು-ಉಸಿರಿನಲ್ಲಿ ಧರ್ಮವೇ ತುಂಬಿರಲು, ಗಂಗೂ ಇಂತಹ ಭಯಂಕರವಾದ ಸಂಕಟದಿಂದ ಏಕೆ ಪಾರಾಗಲಿಲ್ಲ? ಇದಕ್ಕೆಲ್ಲ ಕಾರಣರಾರು? ಗಂಗೂನ ಆ ಕರಿಗಾಲೇ ಕಾರಣವಾಗಿರಬೇಕು. ಇಂಥಹ ಅನರ್ಥ ವ್ಯೆ ಮೇಲೆ ಬಿದ್ದಿರುವಾಗಲೂ ಕಣ್ದೆರೆಯಬಾರದೆ? ಧರ್ಮಕ್ಕೆ ಶರಣೆನ್ನಬಾರದೆ? ಇಂತಹ ಪಾಪಿ ಹುಟ್ಟಿದುದೇಕೆ? 'ತೋಟ ಹಾಳಾಗುವುದಕ್ಕೆ ಮೂರು ಮೊಳ ಕಾಯಿ'ಯೆಂಬಂತೆ ಮನೆತನ ಹಾಳುಮಾಡಲೆಂದೇ ಈ ಪಾಪಿ ಹೆಣ್ಣು ಹುಟ್ಟಿತು.—ಇಂತಹ ವಿಚಾರ ಸರಣಿಯಲ್ಲಿ ಮಗ್ನಳಾಗಿರುವಾಗಲೇ ಕಂಠ ತುಂಬಿ ಬಂದಿತು.

'ದೇವರೇ, ಇದೇನನರ್ಥ ತಂದೆ ನನ್ನ ಮೇಲೆ? ನನ್ನ ತಪ್ಪು ಯಾವುದು? ಇಷ್ಟಕ್ಕೇ ಕೊನೆಗಂಡೀತೆಂದರೆ ಇನ್ನೇನು ಬರುತ್ತದೆಯೋ? ದೇವಾ-ದೇವಾ, ಆ ಅನರ್ಥ ಕಾಣುವ ಮೊದಲೇ ನನ್ನ ಕಣ್ಣು ಮುಚ್ಚು—'ದೇವರನ್ನು ಅದೆಷ್ಟೋ ವೇಳೆ ಪ್ರಾರ್ಥಿಸುತ್ತಲಿದ್ದಳು. ಆಕೆಯ ನಿತ್ಯಕ್ರಮವೇ ಇದಾಯಿತು. ನಿಯಮಬದ್ಧ ಜೀವನದ ನಿಯಮವೇ ತಪ್ಪಿದಂತಾಗಿದ್ದಿತು. ಅನೇಕ ಸಮಯ ಯೋಚನಾಮಗ್ನಳಾಗಿರುವಾಗಲೇ ನಿತ್ಯಕ್ರಿಯೆಗಳು ತಪ್ಪುವುವು. ತಪ್ಪು ಲಕ್ಷ್ಯಕ್ಕೆ ಬರುತ್ತಲೇ ಗಡಬಡಿಸುವಳು. 'ದೇವರೇ, ಹಿಂದೆ ಮಾಡಿದ ತಪ್ಪನ್ನೀಗ ಅನುಭವಿಸುತ್ತೇನೆ. ಇನ್ನು ಮತ್ತೆ ತಪ್ಪು ಮಾಡಿ ಮತ್ತೆ ಯಾವ ದುಃಖಕ್ಕೆ ಗುರಿಯಾಗುವೆ?' ಎಂದು ಮತ್ತೆ ಗಲ್ಲ ಬಡಿದುಕೊಂಡು ಕಾರ್ಯಮಗ್ನಳಾಗುವಾಗಲೇ ವಿಚಾರಚಕ್ರ ಪುನಃ ಮುತ್ತುವದು. ಮತ್ತೆ ತಪ್ಪು, ಮತ್ತೆ ಪಶ್ಚಾತ್ತಾಪ! ಇದೇ ಅವಳ ನಿಯಮವಾಯಿತು. ವ್ಯಗ್ರ ಮನದಿಂದ ಹೇಗೋ ದಿನಗಳನ್ನು ತಳ್ಳುತ್ತಲಿರುವಾಗ ಭೀಮರಾಯರೊಬ್ಬರೇ ಬಂದರು.

ಗಂಗೂ ಬಾರಳೆಂದಿಷ್ಟೇ ಅಲ್ಲ, ಆಕೆ ಮುಂದೆ ಓದುತ್ತಲಿದ್ದ ಸಂಗತಿಯನ್ನು ತಿಳಿಸಿದರು. ಇವೇ ಪಾರ್ವತೀಬಾಯಿನ್ನು ಬೇಡವೆಂದರೂ ಹೊಸ ಜಗತ್ತಿನಲ್ಲಿ ನೂಕಿತು.

ಗಂಗೂನನ್ನು ಶುದ್ಧಮಾಡುವದು ತಾಯಿಯಾದ ತನ್ನ ಕರ್ತವ್ಯವಾಗಿದ್ದಿತು. ಆ ಕರ್ತವ್ಯ ಆಗಲೇ ಪೂರಯಿಸಬೇಕೆಂದರೆ ತಡೆ ಬಂದಿತು. ಕೊಂಚ ಸಮಯ ತಡೆಯಾದರೂ ಕರ್ತವ್ಯ ಪೂರಯಿಸಿಬಿಡಬೇಕೆಂದು ಆಕೆಯ ನಿರ್ಧಾರವಿದ್ದಿತು. ಅದಕ್ಕಾಗಿ ಅವಳ ಜೀವ ಪ್ರತಿ ನಿಮಿಷ ಚಡಪಡಿಸುತ್ತಲಿದ್ದಿತು. ಅಂತೆಯೇ ಗಂಗೂನನ್ನು ಕರೆತರಬೇಕೆಂದು ಭೀಮರಾಯರಿಗೆ ಆಗ್ರಹಪೂರ್ವಕವಾಗಿ ಹೇಳಿದ್ದಳು. ಧರ್ಮನಿಷ್ಠ ಭೀಮರಾಯರು ಬರೀ ಸಮ್ಮತಿಯಷ್ಟೇ ಏಕೆ, ಸಹಾಯವನ್ನೂ ಕೊಡುವರೆಂಬ ವಿಶ್ವಾಸ ಬಲವಾಗಿದ್ದಿತು. ಆದರೆ 'ಮೂಲೇ ಕುಠಾರಃ' ಎಂಬಂತೆ ಅಂತಹ ಆ ಧರ್ಮ ಪರಾಯಣ ಪತಿ ಗಂಗೂನನ್ನು ಕರೆತರುವುದಿರಲಿ, ಆಕೆಯನ್ನು ಶಾಲೆಗೆ ಕಳುಹಿಸಲು ಸಮ್ಮತಿ ಕೊಟ್ಟುಬಂದ. ಅಧರ್ಮ, ಅನ್ಯಾಯ, ಮಹಾ ಪಾಪ. ಇಂತಹ ಪಾಪಕ್ಕೆ ಪ್ರಾಯಶ್ಚಿತ್ತವಿದ್ದೀತೆ? ಇದೇನು ಕೇಡುಗಾಲ! ಇನ್ನೆಲ್ಲಾದರೂ ಇಂತಹ ಹೀನ ಕಾರ್ಯ ನಡೆದಿದ್ದರೆ ಎಚ್ಚರಿಸುವುದೂ, ಆ ಪಾಪದಿಂದ ಪರಾವರ್ತಿಸುವುದೂ ಭೀಮರಾಯರಂತಹರ ಕರ್ತವ್ಯವಾಗಿದ್ದಿತು. ತಮ್ಮ ಆ ಕರ್ತವ್ಯವನ್ನವರು ಅನೇಕ ಸಲ ನೆರವೇರಿಸಿದ್ದರು; ಆದರೆ ಮನೆಯಲ್ಲಿಯೇ ಇಂತಹ ಅಧರ್ಮ ನಡೆವಿರಲು ಅದಕ್ಕೆ ತಿಳಿದೂ ತಿಳಿದೂ ಅನುಕೂಲತೆ ಕಲ್ಪಿಸಿಕೊಡಬೇಕೆ? ಜನರೇನಂದಾರು? ದೇವರು ಸುಮ್ಮನಿರುವನೇ? ಪತಿಯನ್ನೆಚ್ಚರಿಸುವುದವಶ್ಯವಾಗಿದ್ದಿತಷ್ಟೇ ಅಲ್ಲ, ಅದು ಆಕೆಯ ಶ್ರೇಷ್ಠವಾದ ಕರ್ತವ್ಯವಾಗಿದ್ದಿತು. ಅಂತೆಯೇ ಪತಿಗೆ ಕರ್ತವ್ಯ ಬೋಧಮಾಡಬೇಕಾಯಿತು.

'ಅಲ್ಲಾ ಮತ್ತೆ ಆ ಕೃಷ್ಣ ತಿಳಿಗೇಡಿ ಹುಡುಗಾ. ಏನೋ ಮಂದಿನ್ನೋಡಿ ಕುಣೀತಾನ. ಅಂವಗ ತಿಳೂದಿಲ್ಲಾ ಅಂತ ನಿಮಗೂ ತಿಳೂದಿಲ್ಲೇನ? ಗಂಡ್ಸತ್ತಿದ್ದ ರೇದ್ದುಡಿಗಿ ಮಂದೀ ಮನ್ಯಾಗಿರೂದs ತಪ್ಪಂದ್ರ ಸಾಲಿಗೆ ಬ್ಯಾರೆ ಕಳ್ಸೂದಂದ್ರೇನು? ಗಂಡ್ಸತ್ತರೇನ್ಸಾಲ್ಗೇ ಕಳ್ಸಬೇಕೂ ಅಂತ ಯಾವ ಶಾಸ್ತ್ರದಾಗ್ಹೇಳೇದ? ಒಂದಾರs ಉದಾರಣದನs? ಅಯ್ಯೋ! ಇಂಥಾ ಪಾಪಾ ಮಾಡಿಯಾರ ನರಕಕ್ಕ್ಹೋಗ್ಬೇಕೂ ಅಂತೀರಿ. ನಿಮ್ಗೇನ್ಧರ್ಮಾ ಕರ್ಮಾ ತಿಳೂದಿಲ್ಲ?'

ಭೀಮರಾಯರಿಗಾದರೂ ಇಂತಹ ಪ್ರಸಂಗ ಅವರ ಜೀವನದಲ್ಲಿಯೇ ಮೊದಲಿನದು. ಹೆಂಡತಿಯ ಮಾತು. ಮಾತಿನ ಸತ್ಯತೆ ಮನಕ್ಕೆ ಹೊಳೆಯುತ್ತಲಿದ್ದಿತು. ವಿವೇಕವೂ 'ಅದೇ ಸರಿ'ಯೆಂದು ಸಾರುತ್ತಲಿದ್ದಿತು; ಆದರೆ ಹೃದಯ? ಆ ಹೃದಯ ಬಂಡನ್ನೇ ಎಬ್ಬಿಸಿದ್ದಿತು. ಮನಸ್ಸು ವಿವೇಕಗಳೊಂದೆಡೆಯಾಗಿದ್ದರೆ ವಿವೇಕವೊಂದೇ ಇನ್ನೊಂದೆಡೆಗಾಗಿದ್ದಿತು. ಅವುಗಳ ನಡುವೆ ಧಾರವಾಡದಿಂದ ಬಂದಾಗಿನಿಂದ ತುಮುಲ ಯುದ್ಧವೇ ನಡೆದಿದ್ದಿತು ಆ ಯುದ್ಧದ ಕೊನೆಯೆಂದು ಬಂದಿದ್ದಿತು. ಹೃದಯ ಗೆದ್ದಿತು. ಮನ ಮಂಕಾಯಿತು. ವಿವೇಕ ಹಿಂದಾಯಿತು.

'ನೀನು ಹೇಳುವುದೆಲ್ಲವೂ ಸರಿಯಿದೆ. ನನಗೂ ಹೀಗೆ ಮಾಡುವುದು ತಪ್ಪೆಂದು ತಿಳಿಯುತ್ತದೆ. ಸರಿ ದಾರಿ ಹಿಡಿಯಬೇಕೆನ್ನುತ್ತೇನೆ.—'

'ಹಾಗಿದ್ದರೆ ಇದಕ್ಕೆ ನೀವೇಕೆ ಒಪ್ಪಿದಿರಿ?'

'ನನಗಾದರೂ ಅದೇ ತಿಳಿಯದಾಗಿದೆ.' 'ಅಂದರೆ?'

'ಅಂದರೇನು? ಆ ಮುದ್ದುಮಗುವಿನ ಮುಖನೋಡುತ್ತಲೇ ನನ್ನ ಈ ಧರ್ಮಾಧರ್ಮದ ವಿಚಾರಗಳೇ ಮರೆಯುತ್ತಲಿವೆ. ಆ ಮಗು ಹಿಗೆ ಅಲ್ಪಸ್ವಲ್ಪ ದುಃಖವಾದರೆ ಹೃದಯ ಕೊರಗುತ್ತದೆ. ಆಕೆಯ ಮನ ನೋಯಿಸಬಹುದಾದ ಮಾತುಗಳಾಡಲು ನಾಲಿಗೆ ತೊದಲುತ್ತದೆ. ಆ ದೀನ ಮುಖ ನೋಡುತ್ತಲೇ ಕಣ್ಣು ಕಂಬನಿದುಂಬುತ್ತವೆ. ಆ ಮಗುವಿಗೆ ದುಃಖ ಕೊಡಬಹುದಾದ ಒಂದೇ ಒಂದು ಮಾತು ಆಡಲು ನಾನೆಂದೂ ಸಮರ್ಥನಲ್ಲ.'

'ಅಯ್ಯೋ! ನನ್ಗೇನಂತಃಕರಣಿಲ್ಲs? ಹಡೆದ ತಾಯಿ ನಾ ಅಲ್ಲ? ಮಗಳ್ಗೆ ದುಃಖ್ಖಾಗ್ಬೇಕೂ ಅಂತ ತಾಯಿ ಅಂದಾಳs? ತಾಯೀಕಿಂತಾ ನಿಮ್ಮಂತಃಕರಣೇ ನ್ಹೆಚ್ಚ? ಆದ್ರ ಈ ಮಾಯೊಂದಾಗ ಧರ್ಮಾ ಕರ್ಮಾ ಮರೀಬೇಕ? ನಾವ್ಮಾಡೂದಾದ್ರೇನಾಕೀಗ್ಸುಖಾ ಆಗ್ಬೇಕಂತಲ್ಲ?'

'ನೀನು ಹೆತ್ತ ಮಾತ್ರಕ್ಕೆ ತಾಯ್ತನದ ಕರ್ತವ್ಯ ಪೂರಯಿಸಿಲ್ಲ. ಏಕೆಂದರೆ ತಾಯಿಗಿರಬೇಕಾದ ಹೃದಯ ನಿನಗಿಲ್ಲ. ದೇವರು--ಧರ್ಮಗಳಿಗೆ ನಿನ್ನ ಮನ ಮಾರಿ ಹೋಗಿದೆ. ಪುಣ್ಯ--ಪಾಪಗಳಲ್ಲಿ ನಿನ್ನ ವಿವೇಕ ಕುರುಡಾಗಿದೆ. ಹೃದಯ ಬತ್ತಿ ಹೋಗಿದೆ. ರುಕ್ಷವಾದ ಆ ಕರ್ತವ್ಯಾಕರ್ತವ್ಯ ವಿಚಾರ ಸುಮಧುರವಾದ ತಾಯ್ತನದ ಕೊಲೆ ಮಾಡಿದೆ. 'ಧರ್ಮ,' 'ಧರ್ಮ,' ಎಂದು ಬಡಬಡಿಸುವ ನೀನೇ ತಾಯ್ತನದ ಧರ್ಮ ಬಿಟ್ಟು ಬಿಟ್ಟಿರುವೆ.

‘ಅಯ್ಯೋ! ಏನ್ಕೇಡ್ಗಾಲ್ಬಂತಿದು? ನಿಮ್ಬಾಯಿಂದಿಂಥಾ ಮಾತ? ಹಗಲೆಲ್ಲಾ ಧರ್ಮಾ ಕರ್ಮಾ ಅನ್ನೂ ಅವ್ರು ನೀವs ಹೀಂಗೆಂದ್ರೇನು? ಗಂಡ್ಸತ್ತ ಹರೇದ್ಹುಡುಗಿ. ಆ ಸಾಲ್ಯಾಗ ಮಾಸ್ತರೆಂಥವ್ರೋ—ಹುಡುಗರೆಂಥವ್ರೋ? ಹರೇದ ಮಬ್ಬಿನ್ಯಾಗ ಕಾಲ್ಜಾರಿದ್ರ ಎಂಥಾ ಪಾಪ ಘಟಿಸೀತು? ಯೇಳ್ತಲೀ ಅವ್ರು ನರಕದಾಗ ಬೀಳ್ಲಿಕ್ಕಿಲ್ಲ?’

‘ಇಗೋ ನೋಡು. ಸುಮ್ಮನೇ ಬಹಳ ಮಾತನಾಡಿ ಪ್ರಯೋಜನವಿಲ್ಲ. ಇದೀಗ ಹೊಸ ಕಾಲ ಬಂದಿದೆ. ಕಲಿಕಾಲವೆನ್ನು, ಇನ್ನೇನಾದರೂ ಅನ್ನು. ನಿನ್ನ ವಿಚಾರಗಳೆಲ್ಲ ಹಿಂದಿನ ಹಳೆಯ ಕಾಲದವು. ಈಗ ಬಂದಿರುವ ಹೊಸ ಕಾಲಕ್ಕೆ ಹೊಸ ವಿಚಾರಗಳಿವೆ. ಅದರಂತೆಯೇ ಹೊಸ ಧರ್ಮವೂ ಬಂದಿದೆ ಹೊಸ ಧರ್ಮಕ್ಕೆ ನಾವು ಹೊಂದಿಕೊಳ್ಳಲಾರೆವು; ಆದರೆ ಹೊಸಬರಾದವರಿಗೆ ಹೊಸದು ಬೇಕು. ಅವರದರಂತೆ ನಡೆಯಲಿ. ಆ ಬಗ್ಗೆ ಆಗ್ರಹ ಕೂಡದು.’

‘ಆದ್ರ ಅವ್ರಸಂಗ್ತಾ ನಾವೂ ನರಕಕ್ಬೀಳ್ಬೇಕೇನು?’

‘ಸ್ವರ್ಗ--ನರಕಗಳೆಂದರೇನು? ಅವು ಇರುವದೆಲ್ಲಿ? ಕಂಡವರಾರು? ನಾನೂ ನೀನೂ ನಂಬಬಹುದು; ಆದರೆ ಅವರೇಕೆ ನಂಬುತ್ತಾರೆ?’

‘ಅಯ್ಯೋ! ಶಾಸ್ತ್ರ ಪುರಾಣದಾಗ ಹೇಳಿದ್ಸುಳ್ಳೇ? ನಾರಾಯ್ಣಾ, ಜೇಗ ನನ್ಕಣ್ಮುಚ್ಚಪ್ಪಾ!’

‘ಇಗೋ, ನೋಡು. ಈ ವ್ಯರ್ಥವಾದ ಆಕ್ರೋಶ ಬೇಡ. ಇವೆಲ್ಲ ಚಿಂತೆ ಗಂಗು ನಮ್ಮ ಮಗಳೆಂದು ಅಲ್ಲವೆ?’

‘ಹೌದು. ಬ್ಯಾರ್ಯೇ ಅವರ ದಸಿಂದ ನವ್ಗೇನ್ಚಿಂತಿ?’

‘ಅದಕ್ಕೇನೇ ನಾನು ಹೇಳಿದುದು. ಗಂಗೂ, ನಮ್ಮಮಗಳು ಅಲ್ಲವೆಂದು ಬಾವಿಯಲ್ಲಿ ಬಿದ್ದಾಗಲೇ ನಮ್ಮ ಮಗಳು ಗಂಗೂ ಸತ್ತು ಹೋದಳು. ಅವಳಿಗೆ ಪ್ರಾಣ ನೀಡಿದವ ಕೃಷ್ಣ. ಈಗ ಗಂಗೂ ಪ್ರಾಣದಾತ ತಂದೆ-ಕೃಷ್ಣನ ಮಗಳು ಬಾವಿಯಲ್ಲಿ ನೂಕಿದಾಗಲೇ ಜನ್ಮದಾತ ತಂದೆ ತನ್ನ ಅಧಿಕಾರ ಕಳೆದುಕೊಂಡಿರುವ. ಪ್ರಾಣದಾತ ತಂದೆ ಆ ಅಧಿಕಾರ ಪಡೆದಿರುವ. ಅವರ ವ್ಯವಹಾರದಲ್ಲಿ ಕೈ ಹಾಕಲು ನನಗೆ ಎಳ್ಳಷ್ಟೂ ಅಧಿಕಾರವಿಲ್ಲ. ನೀನೂ ಹಾಗೆಯೇ ಭಾವಿಸಿ, ಗಂಗೂ ಸತ್ತು ಹೋದಳೆಂದು ತಿಳಿದು ಸುಮ್ಮನಿರು.

ಪಾರ್ವತೀಬಾಯಿಗೆ ತಾನಿರುವದೆಲ್ಲಿ? ಸ್ವರ್ಗವೋ ನರಕವೋ? ಏನೂ ತಿಳಿಯಲಿಲ್ಲ. ಪತಿಯ ಈ ಅಕಲ್ಪಿತ ಉತ್ತರದಿಂದ ತೀರಾ ಹತಾಶಳಾದಳು.

# ವಿಕಾಸ

ವಿಕಾಸವೆಂಬದೆಲ್ಲಕ್ಕೂ ಬೇಕಾದುದು. ಅವುದೊಂದು ಮೊಗ್ಗಿಗೆ ಅನುಕೂಲವಾದ ವಾತಾವರಣ ದೊರೆತಾಗಲೇ ಅದು ವಿಕಸಿತವಾಗುವದು. ಮೊಗ್ಗೆ ವಿಕಾಸ ಹೊಂದಿ ಅರಳಾಗುವದು; ಅರಳುವುದು. ಹಾಗೆ ಅರಳಿದಾಗಲೇ ಆ ಹೂವಿನ ಪರಿಮಳ ಪಸರಿಸುವದು. ತುಂಬಿಗಳಿಗೆ ಮನದಣಿಯು ಬಂಡನ್ನೀವುದು. ನಿಸರ್ಗವಾದರೂ ಬಹಳ ಉದಾರಿ. ಮೂಡಿದ ಪ್ರತಿ ಮೊಗ್ಗಿಗೂ ಬೇಕಾದ ಅಂತಹ ವಿಕಾಸವನ್ನೊದಗಿಸುವದರಲ್ಲಿ ಕಾರ್ಪಣ್ಯ ಅಲ್ಪವಾದರೂ ತೋರುವದಿಲ್ಲ. ಅಂತೆಯೇ ಮೊಗ್ಗಿನಲ್ಲಿ ಸುಪ್ತವಾಗಿರುವ ಸುವಾಸ ಪಸರಿಸಲು ಸಂಧಿ ದೊರೆವುದು. ಮೊಗ್ಗು ಕೂಡಾ ಸುಂದರವಾಗಿರುತ್ತದೆ. ಆದರಾ ಸೌಂದರ್ಯದ ಪರಿಪೂರ್ಣತೆ ಅರಳಿದಾಗಲೇ ಅಲ್ಲವೆ?

ಮಾನವ ಜೀವನದಲ್ಲಿ ಮಾತ್ರ ಇದಕ್ಕೆ ತೀರಾ ವಿರುದ್ಧವಾದ ಸಂಗತಿ ಕಾಣುತ್ತಿದೆ. ಪ್ರತಿ ಬಾಲಕ-ಬಾಲಿಕೆಯರಲ್ಲಿ ಒಂದಿಲ್ಲೊಂದು ಕಲೆ ಉದ್ಯೋಗಗಳು ಸುಪ್ತವಾಗಿರುತ್ತವೆ. ಆದರವುಗಳಿಗೆ ಅನುಕೂಲ ವಾತಾವರಣ ಕಲ್ಪಿಸಿ ಕೊಡುವವರೆನಿತು ಜನ? ಸುಪ್ತವಾದಾ ಕಲಾಭಿರುಚಿಗಳನ್ನೇ ತಿಳಿಯುವುದಿಲ್ಲ. ತಿಳಿದರೂ ಗಣನೆ ಕೊಡುವುದಿಲ್ಲ. ಅಂತೆಯೇ ಮಾನವೀ ಜೀವನದಲ್ಲಿ ಅನೇಕ ಮೊಗ್ಗು ಅರಳದೇ ಬಾಡಿ ಹೋಗುತ್ತವೆ. ನಿಸರ್ಗವನುಸರಿಸಿ ಈ ಎಲ್ಲ ಮೊಗ್ಗುಗಳೂ ವಿಕಸಿತವಾದರೆ?—ಆದರೆ ಮಾನವೀ ಜೀವನ ನಿಸರ್ಗ ಜೀವನವಲ್ಲ. ನಿಸರ್ಗ ನಿಸರ್ಗದಾ ಮಾನವ. ಮಾನವ. ಅವನದಾವಾಗಲೂ ನಿಸರ್ಗಭಿನ್ನವಾದುದು. ಕೃತಕವಾದುದು. ಕೃತಕತೆಯಲ್ಲಿ ಸ್ವಾಭಾವಿಕ ಸಂಗತಿಗಳಿಗುತ್ತೇಜನವಿಲ್ಲ. ನಾಟಕೀಯತೆ ಬೇಕು ಮಾನವನಿಗೆ.

ಬಾಲಕರು ಚಿಕ್ಕವರಿರುವಾಗಲೇ ಅವರಲ್ಲಿ ಸುಪ್ತವಾಗಿದ್ದ ಕಲೆಯಾವುದು? ಅವರ ಅಭಿರುಚಿಯಾವುದು? ಅವರಾವ ಗುಣಗಳಿಗೆ ವಿಕಾಸ ಸಿಕ್ಕರೆ ಅವರು ಅರಳಿದ ಹೂವಿನಂತೆ ಜಗತ್ತನ್ನು ನಲಿಸಬಹುದು? ಅವರ ಜೀವನ ಆನಂದದಿಂದ ತುಂಬಿ ಜಗತ್ತಿಗೆ ಆನಂದವನ್ನೀಯಬಹುದು? ಅಂತಹ ಪರಿಸ್ಥಿತಿಯಾವುದು? ಇವೇ ಮುಂತಾದ ಪ್ರಶ್ನೆಗಳನ್ನು ಮಕ್ಕಳು ಚಿಕ್ಕವರಿರುವಾಗಲೇ ಯೋಚಿಸುವುದತ್ಯವಶ್ಯ; ಆದರೆ ಅಂತಹರೆಷ್ಟು ಜನ? ನೂರ

ಕ್ಕೊಬ್ಬರಾದರೂ ಸಿಕ್ಕಬಹುದೇ? ಅಂತೆಯೇ ಅಭಿಜಾತಕಲಾವಿದರೂ, ಸುವಿದ್ಯಾಭೂಷಿತರೂ ಮಾನವ ವರ್ಗದಲ್ಲಿ ಹೆಚ್ಚಾಗಿ ಸಿಕ್ಕದೇ ಇರುವುದು.

ಗಂಗೂನ ಜೀವನ ಹೀಗೆ ಅನೈಸರ್ಗಿಕವಾಗಿ ವಿಕಾಸ ಹೊಂದುತ್ತಲಿದ್ದಿತು. ಗಂಡುಮಕ್ಕಳೇ ಇಂತಹ ವಿಕಾಸ ಹೊಂದದಿರುವಾಗ ಹೆಣ್ಣುಮಕ್ಕಳನ್ನು ಕೇಳುವವರಾರು? ಎಲ್ಲ ಹೆಣ್ಣುಮಕ್ಕಳಿಗೂ ಅವಶ್ಯಕವಾಗಿರುವ ವಿಕಾಸವು ಒಂದೇ ಒಂದು. ಮನೆಗೆಲಸದಲ್ಲಿ ನುರಿಯಬೇಕು, ಗಂಡ-ಮಕ್ಕಳನ್ನು ಪೋಷಿಸಬೇಕು. ಇನ್ನಾವ ವಿದ್ಯೆ, ಕಲೆ, ಅಭಿರುಚಿಗಳಿಗಲ್ಲಿ ಅವಕಾಶವೇ ಇಲ್ಲ. ಎಷ್ಟೋ ರೀತಿಯಲ್ಲಿ ನೈಪುಣ್ಯ ಪಡೆಯಬಹುದಾದ ಇಂಥ ಮೊಗ್ಗು, ವ್ಯರ್ಥವಾಗಿ ಬಾಡಿಹೋದರೆ, ಅದಕ್ಕೆ ತಪ್ಪುಗಾರರಾರು?

ಮುಂದೆ ಕಲಿಯಬೇಕೆಂಬ ಹವ್ಯಾಸ ಗಂಗೂನಿಗೆ ಚಿಕ್ಕತನದಿಂದಲೂ ಇದ್ದಿತು. ಹೆಣ್ಣಾದುದರಿಂದವಳ ಹವ್ಯಾಸಕ್ಕೆ ಅವಕಾಶ ಸಿಕ್ಕದೇ ಹೋಯಿತು. ಇನ್ನುಳಿದವರಂತೆ ಆಕೆಯ ಜೀವನ ಪ್ರವಾಹವೂ ಮದುವೆಯ ದಿಸೆಯಲ್ಲಿಯೇ ಹರಿಯಿತು; ಆದರೆ ಆಕಸ್ಮಾತ್ತಾಗಿ ಆ ದಾರಿ ಕಟ್ಟಾಯಿತು. ಆ ಪ್ರವಾಹವಲ್ಲಿಯೇ ಬತ್ತುವುದೆಂಬ ಭೀತಿಯೂ ಉಂಟಾಯಿತು; ಆದರೆ ಕೃಷ್ಣರಾಯ ಮನೋರಮೆಯರ ಮೂಲಕ ಆ ಪ್ರವಾಹಕ್ಕೆ ಅನುರೂಪವಾದ ಮಾರ್ಗವೇ ದೊರೆಯಿತು. ಪ್ರವಾಹ ವಿಸ್ತಾರವಾದ ಜೋರಿನಿಂದ ಹರಿಯಲಾರಂಭಿಸಿತು. ಬಾಡುವುದರಲ್ಲಿದ್ದ ಮೊಗ್ಗು ವಿಕಸಿತವಾಗಲಾರಂಭಿಸಿತು. ಅರಳಿ ಸುಂದರವಾದ ಹೂವಾಗಿ ಸುವಾಸನೆ ಬೀರಲಾರಂಭಿಸಿತು.

ಸಾಕಷ್ಟು ಪ್ರಾಥಮಿಕ ಶಿಕ್ಷಣ ಮೊದಲೇ ಸಿಕ್ಕುದರಿಂದ, ಒಮ್ಮೆಲೇ ಮಾಧ್ಯಮಿಕ ಶಿಕ್ಷಣಕ್ಕಾರಂಭವಾಯಿತು. ಕೃಷ್ಣರಾಯನ ಪ್ರಯತ್ನ, ಗಂಗೂನ ಜಾಣ್ಮೆಗಳ ಮೂಲಕವಾಗಿ ಅಲ್ಪಾವಕಾಶದಲ್ಲಿ ಅಯ್ದನೆಯ ವರ್ಗಕ್ಕೆ ಪ್ರವೇಶ ಪಡೆದಳು. ಬುದ್ಧಿವಂತೆ. ಕಲಿವಾಸೆ ಚಿಕ್ಕತನದಿಂದಲೂ ಇದ್ದವಳು; ಮತ್ತು ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಸಿಕ್ಕವಳು. ಅಂದಲ್ಲಿ ಗಂಗೂ ಮನಮುಟ್ಟಿದುಡಿಯುತ್ತಲಿದ್ದಳೆಂದರೆ ಆಶ್ಚರ್ಯವೇನು? ಅದೇಕೆ ಚತುರಮತಿಯಾದ ವಿದ್ಯಾರ್ಥಿಗೆ ಶಾಲೆಯ ಅಭ್ಯಾಸವೆಂದೂ ಸಾಕಷ್ಟಾಗುವುದಿಲ್ಲವೆಂದು ತೀರಾ ಸ್ವಲ್ಪಜನ ತಿಳಿದಿರಬಹುದು. ಒಬ್ಬ ತಿನಸುಬಕ್ಕನೆದುರು ಒಂದು ಹಿಡಿ ಮಂಡಕ್ಕಿ ಇಟ್ಟ ಹಾಗೆ! ಒಂದೇ ವೇಳೆಗದನ್ನೆಲ್ಲ ಬಕ್ಕರಿಸುವನು. ಗಂಗೂನ ಸ್ಥಿತಿ ಹಾಗೇ ಆಯಿತು. ಶಾಲೆಯ ಮಂದಗತಿಯ ಅಭ್ಯಾಸ ಆವಳ

ಬುದ್ಧಿಗೆ ಸಾಲದಾಯಿತು. ತಿಂಗಳೊಪ್ಪತ್ತಿನಲ್ಲಿ ತನ್ನ ಪಠ್ಯಪುಸ್ತಕಗಳನ್ನೆಲ್ಲ ತಿರುವಿಹಾಕಿದಳು. ಈ ವಿಷಯ ಮನೋರಮೆಯೊಡನೆ ಅದೆಷ್ಟೋ ವೇಳೆ ಚರ್ಚಿಸುವಳು.

'ಅತ್ತಿಗಿ, ಇಷ್ಟು ಸ್ವಲ್ಪ ಅಭ್ಯಾಸವೇಕಿಟ್ಟಿರುವರು? ಮತ್ತು ಇಷ್ಟರಿಂದ ಬುದ್ಧಿ ವಿಕಾಸ ಹೇಗಾಗುವುದು?'

'ಗಂಗು, ಇಷ್ಟರಿಂದಲೇ ಬುದ್ಧಿ ವಿಕಾಸವಾಗುವುದೆಂದು ಹೇಳಿದವರಾರು? ಭಿನ್ನ ಭಿನ್ನ ವಿಷಯಗಳ ಪರಿಚಯ ಮಾಡಿಕೊಡುವುದೇ ಈ ಅಭ್ಯಾಸ ಪತ್ರಿಕೆಯ ಉದ್ದೇಶ. ಬರೀ ಪರೀಕ್ಷೆಯೇ ಧ್ಯೇಯವಾಗುಳ್ಳವರು ಅಷ್ಟರಲ್ಲಿಯೇ ಮುಳುಗೇಳುತ್ತಾರೆ; ಆದರೆ ಪರೀಕ್ಷೆಯೇ ಶಿಕ್ಷಣಕ್ರಮದ ಧ್ಯೇಯವೆಂದರೆ ಬುಡಕ್ಕೇ ಕೊಡಲಿ ಹಾಕಿದ ಹಾಗೆ. ಆ ಆ ವಿಷಯಗಳಲ್ಲಿ ನಿಮಗೆ ಗತಿ ದೊರೆತು ನೀವು ನಿಮ್ಮ ಸೇರಿಕೆಯ ವಿಷಯಗಳನ್ನಾಯ್ದುಕೊಂಡು ಅದರಲ್ಲಿ ವಿಕಾಸ ಪಡೆಯತಕ್ಕದ್ದು. ಇದೇ ನಿಜವಾದ ಉದ್ದೇಶ.'

ಅಂದಿನಿಂದ ಗಂಗು ಶಾಲೆಯಲ್ಲಿನ ವಾಚನಾಲಯದ ಪುಸ್ತಕಗಳಿಗೆ ಕೈಹಚ್ಚಿ ತಿರುವಿಹಾಕಿದಳು. ಊರ ವಾಚನಾಲಯದಲ್ಲಿನ ವಿವಿಧ ವಿಷಯಗಳ ಮೇಲಿನ ಅನೇಕ ಪುಸ್ತಕಗಳನ್ನೋದಲಾರಂಭಿಸಿದಳು. ಓದಿದುದೆಲ್ಲ ಅವಳಾ ಮೆದುಳಿನಲ್ಲಿ ಸ್ಥಿರವಾಗಿಯೇ ಉಳಿಯುತ್ತಲಿದ್ದಿತು.

ವರ್ಗದಲ್ಲಿ ಯಾವಾಗಲೂ ಮೊದಲು, ಮಿತ್ರೆಯರಲ್ಲಿ ಆವಾಗಲೂ ಮುಂದು, ಆಟನೋಟಗಳಲ್ಲಿ ಭಾಷಣ ಚರ್ಚೆಗಳಲ್ಲಿ ಯಾವಾಗಲೂ ಮುಂದೆ. ಒಬ್ಬ ಉತ್ಸಾಹೀ ವ್ಯಕ್ತಿಯನ್ನು ಕೆಲಸಮಯ ಕಟ್ಟಿಹಾಕಿ ಆ ಮೇಲೆ ಬಿಟ್ಟು-ಬಿಟ್ಟರೆ ಆವನದೆಷ್ಟು ಹರಿದಾಡುವನು? ಗಂಗೂನ ಆ ಚಾತುರ್ಯ, ಬುದ್ಧಿಮತ್ತೆ, ಕೌಶಲ್ಯಗಳೆಲ್ಲ ಅನುಕೂಲ ಸಮಯ ಸಿಕ್ಕುತ್ತಲೇ ಬೀಳು ಬಿದ್ದ ನೆಲದಲ್ಲಿ ಭರದಿಂದ ಬೆಳೆಬರುವಂತೆ ನಾಗಾಲೋಟದಲ್ಲಿ ಪ್ರಗತಿ ಹೊಂದಲಾರಂಭಿಸಿದವು. ಆವಳಾ ಅದ್ಭುತ ಪ್ರಗತಿ ಎಲ್ಲರನ್ನೂ ಅಚ್ಚರಿಗೊಳಿಸುತ್ತಲಿದ್ದಿತು. ಇಂತಹ ಈ ಬುದ್ಧಿಮತ್ತೆ ವಿಕಾಸ ಕಾಣದೇ ಹೋಗುತ್ತಲಿದ್ದಿತೆಂದು ಮನೋರಮೆಗೆ ಎಷ್ಟೋ ಸಲ ಅನಿಸುತ್ತಲಿದ್ದಿತು. ಅಂಥ ಸಂಧಿ ಕೊಟ್ಟುದಕ್ಕೆ ಪರಮಾತ್ಮನನ್ನು ಪ್ರಾರ್ಥಿಸುವಳು.

ಮೊದಮೊದಲು ಗಂಗೂಸಿಗಾಗಲಿ, ವರ್ಗದ ಬಾಲಿಕೆಯರಿಗಾಗಲಿ ಸ್ವಲ್ಪ ಸಂಕೋಚವೆನಿಸುತ್ತಲಿದ್ದಿತು; ಆದರೆ ಹತ್ತೆಂಟು ದಿನಗಳಲ್ಲದು

ಮಾಯವಾಯಿತು. ಗಂಗೂನ ಸುಮಧುರ ವರ್ತನೆ ಆಕೆಯ ವರ್ಗದ ಎಲ್ಲರನ್ನೂ ಮುಗ್ಧವಾಗಿಸಿತು. ಗಂಗೂ ಎಲ್ಲರಿಗೂ ಅಕ್ಕರೆಯ ಅಕ್ಕನಾದಳು. ಪ್ರೇಮದ ಗೆಳತಿಯಾದಳು. ಒಂದೇ-ಒಂದು ಕ್ಷಣ ಅವರವಳನ್ನು ಬಿಡುತ್ತಲಿರಲಿಲ್ಲ.

ಅಭ್ಯಾಸದ ವಿವಿಧ ವಿಷಯಗಳು, ಆಟನೋಟಗಳು, ಮೈತ್ರಿಣಿಯರ ಅಕೃತ್ರಿಮ ಮೈತ್ರಿ ಗಂಗೂನನ್ನು ತನ್ನನ್ನು ತಾನೇ ಮರೆಯುವಂತೆ ಮಾಡಿದುವು. ತಾನೊಬ್ಬ ಗತಭರ್ತೃಕೆಯೆಂಬದನ್ನೂ ಗಂಗೂ ಮರೆತಳು. ಶಾಲಾಬಾಲೆಯರೂ ಮರೆತರು.

ಶಾಲೆಯಲ್ಲೇನಾದರೂ ಉತ್ಸವ ಸಮಾರಂಭಗಳು ನಡೆದಾಗ ನೋಡಬೇಕು ಗಂಗೂನ ಉತ್ಸಾಹ. ಅವಳಿಲ್ಲದ ಸ್ಥಳವೇ ಇರುತ್ತಿರಲಿಲ್ಲ. ಗಂಗೂ ಇದ್ದರೆ ಸಾಕು, ಎಲ್ಲ ಬಾಲಿಕೆಯರಲ್ಲಿಯೂ ಅವರ್ಣನೀಯ ಉತ್ಸಾಹ ತುಂಬಿ ಬರುತ್ತಿಲಿದ್ದಿತು. ಹುರುಪು-ಹುಮ್ಮಸ್ಸುಗಳು ಸುಂಕುರೋಗವಿದ್ದಂತೆ ಎಲ್ಲರ ಉತ್ಸಾಹದ ಮೂಲಕ ಗಂಗೂನ ಶಾಲೆಯ ಪ್ರತಿ ಕಾರ್ಯ ಕಲ್ಪನೆಗೆ ನಿಲುಕದಷ್ಟು ಯಶಸ್ವೀಯಾಗುತ್ತಲಿದ್ದಿತು. ಶಾಲಾಧಿಕಾರಿಗಳಿಗೆ ಗಂಗೂ ಬಹಳ ಹೆಮ್ಮೆಯ ವಿಷಯವಾಗಿದ್ದಳು. ಯಾವ ಕಾರ್ಯವಿದ್ದರೂ ಗಂಗೂನಿಗೆ ತಿಳಿಸಿದರಾಯಿತು, ಅವರು ತೀರಾ ನಿಶ್ಚಿಂತರು.

ಆ ವರುಷ ವಿದ್ಯಾಧಿಕಾರಿಗಳಿಂದ ಪರಿಪತ್ರವೊಂದು ಬಂದಿತು. 'ಸ್ವತಂತ್ರಭಾರತದಲ್ಲಿ ನಿರಕ್ಷರತೆಯ ನಿರ್ಮೂಲನವಾಗಬೇಕು. ಜನತೆಯಲ್ಲಿ ಜ್ಞಾನ ಹರಡಬೇಕು. ದೇಶದ ಪ್ರಗತಿಯಾಗಬೇಕು. ಸರಕಾರ ಸರ್ವವಿಧದಿಂದಲೂ ಹೆಣಗುವುದು. ಜನತೆಯು, ಅದರಲ್ಲಿಯೂ ಶಾಲೆ ಕಾಲೇಜುಗಳ ಶಿಕ್ಷಕ-ವಿದ್ಯಾರ್ಥಿಗಳ ಸಹಕಾರ ಹೆಚ್ಚಾಗಿ ಬೇಕು. ಮಾಧ್ಯಮಿಕ ಶಾಲೆಯವರು ತಮಗೆ ಸರಿ ಹೋಗುವ ರೀತಿಯಿಂದ ಸಹಾಯ ಮಾಡಬೇಕು. ವಿಶೇಷವಾಗಿ ವಿದ್ಯಾರ್ಥಿಗಳು ಈ ವರುಷದ ಬಿಡುವನ್ನು ಪಯೋಗಿಸಿ, ಒಬ್ಬರೊಬ್ಬರಂತಾದರೂ ಸಾಕ್ಷರರನ್ನು ಮಾಡಬೇಕು. ಸರಕಾರ ಅವಶ್ಯಕ ವೆಚ್ಚವಹಿಸುವುದಲ್ಲದೆ, ಒಳ್ಳೆಯ ಕೆಲಸ ಮಾಡಿದವರಿಗೆ ಪಾರಿತೋಷಕ-ಪದಕಗಳನ್ನು ಕೊಡಲಾಗುವುದು—'ಮುಂತಾಗಿ ಮೇಲಧಿಕಾರಿಗಳ ವಿನಂತಿಯೆಂದರೆ ನೌಕರರಿಗಿದು ಕಟ್ಟಪ್ಪಣೆ. ಉಳಿದ ಶಾಲೆಯವರಂತೆ ಗಂಗೂನ ಶಾಲೆಯವರೂ ಆ ಕಾರ್ಯ ಕೈಕೊಳ್ಳಬೇಕಾಯಿತು. ಬೇಸಿಗೆಯ ಬಿಡುವು

ಒಂದೆರಡು ದಿನವಿರುವಾಗ ಎಲ್ಲ ಬಾಲಿಕೆಯರ ಸಭೆಯೊಂದನ್ನೇರ್ಪಡಿಸಿ ಈ ಕಾರ್ಯ ಕೈಕೊಳ್ಳುವಂತೆ ಕೇಳಿಕೊಂಡರು. ಆ ಮೇಲೆ ಗಂಗೂನನ್ನೊಂದೆಡೆ ಕರೆದರು.

'ಗಂಗೂತಾಯಿ, ನೀನೀ ಸಾಕ್ಷರತೆಯ ಕಾರ್ಯಕೈಕೊಳ್ಳಬೇಕೆಂದು ನನ್ನ ಆಗ್ರಹದ ವಿನಂತಿಯಿದೆ.'

'ನಾವೆಲ್ಲರೂ ಆಗಲೇ ಒಪ್ಪಿಗೆ ಕೊಟ್ಟಿರುವೆವಲ್ಲ ಸರ್?'

'ಅಹುದು. ಬರೀ ಮೋರೆಯಮುಂದಿನ ಒಪ್ಪಿಗೆ ಬೇಡ. ಮನಃಪೂರ್ವಕವಾಗಿ ಒಪ್ಪಿಗೆ ಬೇಕು. ಅದರಲ್ಲೂ ನೀನು ಒಪ್ಪಬೇಕು.'

'ನನ್ನದೇನು ಸರ್? ಎಲ್ಲರಂತೆ ನಾನು.'

'ಗಂಗೂತಾಯಿ, ನಾನೆಲ್ಲ ಬಲ್ಲೆ. ನೀನು ಮುಂದಾದರೆ ಸಾಕು; ಶಾಲೆಯ ಬಾಲಿಕೆಯರೆಲ್ಲ ಉತ್ಸಾಹದಿಂದ ನಿನ್ನ ಬೆನ್ನ ಹತ್ತುವರು. ನೀವೆಲ್ಲರೂ ಅದ್ಭುತವಾದ ಕಾರ್ಯ ಮಾಡಬಲ್ಲಿರೆಂದು ನನ್ನ ವಿಶ್ವಾಸ. ನಮ್ಮ ಶಾಲೆಯ, ಅದೇಕೆ, ಇಂಥ ಎಲ್ಲ ಶಾಲೆಗಳ ಇತಿಹಾಸಿನಲ್ಲಿಯೂ ಚಿರಸ್ಮರಣೀಯವಾದ ಕಾರ್ಯ ಮಾಡಬಲ್ಲಿರೆಂಬ ನಂಬುಗೆ ನನಗಿದೆ. ನಮ್ಮ ಶಾಲೆಯ ಹೆಸರು ಮುಂದೆ ಬರುವುದಲ್ಲದೆ, ಅನೇಕ ಕೆಲಸಗಾರರಿಗೆ ದಾರೀ ತೋರಿಸಿಕೊಟ್ಟ ಭಾಗ್ಯಕ್ಕೆ ನೀನು ಕಾರಣಳಾಗಬೇಕೆಂದು ನನ್ನ ಕಳಕಳಿಯ ವಿನಂತಿ.'

ಗಂಗೂ ಮರುಮಾತಿಲ್ಲದೆ ಒಪ್ಪಿಕೊಂಡಳು. ಇನ್ನೇನಾದರೂ ಹೇಳಿದರೆ ತನ್ನ ಸ್ತುತಿಯೇ ಹೆಚ್ಚಾಗುವದೆಂದು ಆಕೆಗೆ ಗೊತ್ತು. ಮುಖಸ್ತುತಿ ಯಾರಿಗೆ ಬೇಡ? ಎಲ್ಲರಿಗೂ ಬೇಕು. ನಿಜವಾದ ಯೋಗ್ಯತೆಯುಳ್ಳವರಿಗೆ ಮಾತ್ರ ಬೇಡ. ಮುಖ್ಯಾಧ್ಯಾಪಕರಿಂದ ಹೀಗೆ ಹೊಗಳಿಸಿಕೊಳ್ಳುವದು ಆಕೆಗೆ ಸೇರಲಿಲ್ಲ. ಇರಲಿ. ಯೋಗ್ಯತೆಯಿಲ್ಲದಲ್ಲೂ ಉತ್ತೇಜನ ಕೊಟ್ಟದಾದರೆ ಮಹತ್ಕಾರ್ಯ ಕೈಗೂಡದಿರದು. ನಿಜವಾದ ಕೆಲಸುಗಾರರಿಗೆ ಉತ್ತೇಜನಕೊಟ್ಟಲ್ಲಿ ಆಗದಿರುವುದೆ? ಗಂಗೂನ ಶಾಲೆಯ ಮುಖ್ಯಾಧ್ಯಾಪಕರು ಬೇರೆಯವರಿಂದ ಕೆಲಸ ಹೇಗೆ ತೆಗೆದುಕೊಳ್ಳಬೇಕೆಂದನ್ನು ಚನ್ನಾಗಿ ತಿಳಿದವರು. ಕೆಳಗಿನವರ ಮನನೋಯದಂತೆ ಅನ್ಯರಿಂದಾಗದ ಕಾರ್ಯ ಪೂರಯಿಸಿಕೊಳ್ಳುತ್ತಲಿದ್ದರು. ಅಂತೆಯೇ ಆ ಸಲ ಸಾಕ್ಷರತೆಯ ಕಾರ್ಯ ಕೈಕೊಳ್ಳಬೇಕೆಂದು ನಿರ್ಧರಿಸಿದರು. ನಿಜವಾದ ಅರ್ಹತೆಯುಳ್ಳ ಗಂಗೂನನ್ನೇ ಹಿಡಿದರು. ಶಾಲೆಯಿಂದ

ಅವಶ್ಯಕ ಸಹಾಯ-ಆಶ್ವಾಸನೆಯನ್ನೂ ಇತ್ತರು. ಇಬ್ಬರಿಗೂ ಆನಂದವಾಯಿ ತೆಂದು ಹೇಳಬೇಕಿಲ್ಲ.

ಗಂಗೂ ಮುಖ್ಯಾಧ್ಯಾಪಕರ ಬಳಿಯಿದ್ದುದನ್ನು ಉಳಿದವರು ತಿಳಿದಿದ್ದರು. ಆಕೆ ಬರುವ ವರೆಗೆ ಅವರೆಲ್ಲರೂ ತಡೆದಿದ್ದರು. ಗಂಗೂ ಹೊರಬರುತ್ತಲೇ ಮತ್ತೆ ಚರ್ಚೆಯಾಯಿತು. ಗಂಗೂನಲ್ಲಿ ಎಲ್ಲರದೂ ಅಸಾಧಾರಣವಾದ ಸ್ನೇಹ. ಗಂಗೂನ ಒಂದೇ ಒಂದು ಮಾತು ಬೀಳುಗೊಡುತ್ತಿರಲಿಲ್ಲ. ಗಂಗೂನ ಹಿರಿತನದಲ್ಲಿ ವಿದ್ಯಾರ್ಥಿನಿಯರ ಸಭೆಯೊಂದು ನೆರೆಯಿತು. ಆ ಕಾರ್ಯ ಕೂಡಲೆ ಕೈಕೊಳ್ಳತಕ್ಕದೆಂದೂ ಗಂಗೂನ ಆದೇಶದಂತೆ ಎಲ್ಲರೂ ನಡೆಯತಕ್ಕದೆಂದೂ ನಿರ್ಧರವಾಯಿತು.

ಮನೆಗೆ ಹೋದಮೇಲೆ ಗಂಗೂ ಮನೋರಮೆಯೊಡನೆ ಎಲ್ಲ ವಿಷಯವನ್ನೂ ಚರ್ಚಿಸಿದಳು. 'ಗಂಗಕ್ಕಾ, ನಿನ್ನ ಶಾಲೆಯ ಶಿಕ್ಷಣದ ಆರಂಭಕ್ಕೆ ಮೊದಲೇ ನಾನು ಸೂಚಿಸಿದ್ದ ಸಮಯವೀಗ ಬಂದಿದೆ. ಇದೀಗ ಸಾಕ್ಷರರನ್ನಾಗಿ ಮಾಡುವುದಷ್ಟೇ ನಿನ್ನ ಧ್ಯೇಯವಿರದೆ, ಅವರೆಲ್ಲರ ಜೀವನ ಮಟ್ಟ ಮೇರಿಸುವುದೇ ನಿಜವಾದ ಧ್ಯೇಯವಾಗಿರಲಿ. ಸ್ವಚ್ಛತೆ, ಆರೋಗ್ಯ, ಪ್ರಥಮೋಪಚಾರ ಮುಂತಾದ ಜೀವನಾವಶ್ಯಕ ಸಂಗತಿಗಳತ್ತ ನಿನ್ನ ಲಕ್ಷ್ಯವಿರಬೇಕು. ಇಷ್ಟೇ ಅಲ್ಲ ಸಾಮಾಜಿಕ, ರಾಜಕೀಯತೆಯಲ್ಲಿ ಕೂಡಾ ಅವರಲ್ಲಿರುವ ಅಜ್ಞಾನ ಸಂಪೂರ್ಣ ನಶಿಸಿ, ಸ್ವತಂತ್ರ ಭಾರತದ ಪ್ರಜೆಗಳಾಗುವಂತೆ ಸಹಾಯ ಮಾಡತಕ್ಕದು.'

ಕೃಷ್ಣರಾಯ ಕೂಡಾ, 'ಗಂಗು, ನಿಜವಾಗಿಯೂ ಇದೀಗ ನಿನ್ನ ಕರ್ತೃತ್ವಶಕ್ತಿಯ ಪ್ರದರ್ಶನಕ್ಕೊಂದು ಮೆಟ್ಟಿಲು ಮೊದಲಿನದು. ಇದರ ಯಶಾಪಯಶಗಳನ್ನೇ ಉಳಿದುವು ಅವಲಂಬಿಸಿರುತ್ತವೆ. ನೀನಾದರೂ ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸುವೆಯೆಂದು ವಿಶ್ವಾಸವಿದೆ. ಇದೀಗ ಬರೀ ನಿನ್ನ ಶಾಲೆಯ ಕಾರ್ಯವೆಂದು ಭಾವಿಸಬೇಡ. ಸ್ವತಂತ್ರ ಭಾರತದಲ್ಲಿ ಇನ್ನೂ ಕತ್ತಲೆಯಲ್ಲಿ ನರಳುತ್ತ ಬಿದ್ದಿರುವ ನಿನ್ನ ಸಾವಿರಾರು ಭಗಿನಿಯರ ಆರ್ತ ಕೂಗೆಂದು ಭಾವಿಸಿ, ಅಂತಹ ಉದಾತ್ತವಾದ ಭಾವನೆಯಿಂದ ಪ್ರೇರಿತಳಾಗಿ ನೀನಾಗಲಿ ನಿನ್ನ ಮೈತ್ರಿಣಿಯರಾಗಲಿ ಈ ಕಾರ್ಯ ಕೈಗೂಡಿಸಬೇಕೆಂದು ನನ್ನ ವಿಚಾರ.' ಮುಂತಾಗಿ ಹೇಳಿದುದಲ್ಲದೆ, ಅವರಿಗೆ ಬೇಕಾದ ಅನುಕೂಲತೆ ಕಲ್ಪಿಸಿಕೊಡಲೊಪ್ಪಿದನು. ತನ್ನ ಗಾಡಿ-ಕುದುರೆಗಳನ್ನವರ

ವಶದಲ್ಲಿ ಕೊಟ್ಟದ್ದಲ್ಲದೆ, ಇಬ್ಬರು-ಮೂವರು ಸಿಪಾಯಿಯರನ್ನೂ ಅವರಿಗೆ ಕೊಟ್ಟನು.

ಶಾಲೆಯ ಮುಖ್ಯಾಧ್ಯಾಪಕರ ಹಾರೈಕೆ, ಅಣ್ಣ-ಅತ್ತಿಗೆಯರ ಹರಕೆ, ಭಾರತ ಮಾತೆಯ ಸೇವೆಗೈವ ಸದುದ್ದೇಶ, ಕರ್ತವ್ಯಪ್ರೇರಣೆ ಮುಂತಾದವುಗಳಿಂದ ಪ್ರೇರಿತಳಾದ ಗಂಗೂ ಅದ್ಭುತವಾದ ಆತ್ಮವಿಶ್ವಾಸದಿಂದ ಈ ಕಾರ್ಯ ಕೈಕೊಂಡಳು.

---

## ಯಶೋಮಂದಿರ

ಒಂದು-ಒಂದೂವರೆ ನೂರು ಹುಡಿಗೆಯರ ತಂಡ ಮರುದಿನದಿಂದಲೇ ಧಾರವಾಡದ ಸಂದು-ಗೊಂದಿಗಳಲ್ಲಿ ಕಾಣಿಸಲಾರಂಭಿಸಿತು. ಕೂಲಿಕಾರರ, ಹರಿಜನರ, ಭಂಗೀ ಜನರ ಕೇರಿಗಳನ್ನೇ ಗಂಗೂ ತಮ್ಮ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡಳು. ಅವರ ಉತ್ಸಾಹ ಅವರ್ಣನೀಯವಾಗಿದ್ದಿತು. ತೀರಾ ಅಲ್ಪವಾದ ಅವಧಿಯಲ್ಲಿ ಅಗಾಧವಾದ ಕಾರ್ಯ ಕೈಗೂಡಿಸುವ ದೃಢ ವಿಶ್ವಾಸ ಅವರಲ್ಲಿ ಮೂಡಿದ್ದಿತು. ಶಾಲೆಯಲ್ಲಿ ಕಲಿಯುವ ಶ್ರೀಮಂತ ಜನರ ಮಕ್ಕಳವರು. ಅಂದ-ಚಂದದ ಅರಿವೆ ಧರಿಸಿ, ಆನಂದದಿಂದ ನರ್ತಿಸುವ ನವಿಲಿನಂತಹರು ತಮ್ಮ ಮನೆಯಲ್ಲೂ ಒಂದೇ ಒಂದು ಮನೆಗೆಲಸ ಮಾಡಿದವರಲ್ಲ. ಅಭ್ಯಾಸವನ್ನಾದರೂ ಸುಮ್ಮನೇ ತಮಾಷೆಗಾಗಿ ಮಾಡುವಂತಹರು. ಇಂಥ ಆ ಬಾಲಿಕೆಯರು ಸಂದು-ಗೊಂದಿಗಳಲ್ಲಿ, ಹೊಲಸು-ಕೊಳಚೆಗಳಲ್ಲಿ, ಹಗಲು-ರಾತ್ರಿಗಳಲ್ಲಿ ಅವಿಶ್ರಾಂತವಾಗಿ ದುಡಿಯುವದನ್ನು ನೋಡಿದರೆ, ಯಾರಿಗಾದರೂ ಆಶ್ಚರ್ಯವಾಗುವಂತಿದ್ದಿತು. ಗಂಗೂನ ಆ ಆ ಕಾರ್ಯಶಕ್ತಿ ಪ್ರಬಲವಾಗಿದ್ದಿತು.

ಗಂಗೂ ಎಲ್ಲೆಡೆಗಳಲ್ಲೂ ಕಾಣುತ್ತಲಿದ್ದಳು. ಮಾಮಲೆದಾರರ ಮನೆಯ ಹುಡಿಗೆ ತಮ್ಮ ಗುಡಿಸಲಿಗೆ ಬರುತ್ತಾಳೆ, ಸವಿಸವಿಯಾಗಿ ಮಾತನಾಡುತ್ತಾಳೆ ಈ ಸಂಗತಿಯೇ ಅವರಿಗತೀವ ಆನಂದವನ್ನುಂಟು ಮಾಡಿತು. ಗಂಗೂನ ಬರೀ ಮಾತುಗಳನ್ನು ಕೇಳುವದೂ ಹಬ್ಬವೇ ಆಗಿದ್ದಿತು. ಜೀವನದಲ್ಲಿ ಉದಾತ್ತತೆಯ ಗಂಧವನ್ನೇ ಅರಿಯದ ಅವರ ಜೀವನದಲ್ಲೊಂದು ಕ್ರಾಂತಿಯೇ ಸಂಭವಿಸಿತು. ಅನೇಕ ಇಳಿವಯಸ್ಸಿನ ಹೆಣ್ಣುಮಕ್ಕಳು

ಕೂಡಾ ಹರುಷದಿಂದ ಹಲಗೆ-ಬಳಪ ಹಿಡಿದರು. ಆ ಆ ಜನರಿಗೆ ಬಿಡುವು ಸಿಕ್ಕಬಹುದಾದ ಸಮಯವನ್ನೇ ಗಂಗೂ ಇಟ್ಟುಕೊಂಡಿದ್ದಳು. ಗಂಗೂ ಮತ್ತು ಅವಳ ಸಹಕಾರಿಗಳು ಊಟ-ನಿದ್ದೆಗಳ ಪರಿವೆ ಇಲ್ಲದೆ ದುಡಿಯುತ್ತಲಿದ್ದರೆಂದಲ್ಲಿ ಆಟ-ನೋಟಗಳೆಲ್ಲಿ? ಚಲಚ್ಚಿತ್ರಮಂದಿರಗಳವರು ಗಂಗೂನನ್ನು ಬಹಳವಾಗಿ ನಿಂದಿಸಬಹುದು.

ಮೊದಮೊದಲು ಹೆಣ್ಣುಮಕ್ಕಳು ತಮ್ಮ ಕೆಲಸ ಬಿಟ್ಟುಕೊಡಲು ಅಷ್ಟು ಸಿದ್ಧರಾಗಲಿಲ್ಲ; ಆದರೆ ಮಾಧುರ್ಯದ ಮೂರುತಿಗಳೇ ಆದ ಹುಡಿಗೆಯರಿಗೆ ತೆಂದರೆಯಾಗುತ್ತದೆಂಬ ಕನಿಕರದಿಂದ ತಾವೇ ಸಿದ್ಧರಾಗಿ ಕೂರುತ್ತಲಿದ್ದರು. ಬೇಸರುಪಟ್ಟುಕೊಳ್ಳಕೂಡದು, ಸೋಲನ್ನೆಂದೂ ಒಪ್ಪಕೂಡದು ಎಂಬುದು ಅವರ ಹಟವೇ ಇದ್ದಂತಿತ್ತು. ಬರಬರುತ್ತ ಹೆಣ್ಣುಮಕ್ಕಳು ಈ ಹುಡಿಗೆಯರನ್ನು ಕಾಣುವದಕ್ಕೆ ಆತುರರಾಗುತ್ತಲಿದ್ದರು. ಗಂಗೂನ ಚಟವಟಿಕೆ ಬೊಟ್ಟು ಕಚ್ಚುವಂತಿದ್ದಿತು. ಈಗ ಧಾರವಾಡದ ಒಂದು ಬದಿಯಲ್ಲಿದ್ದರೆ, ಅರ್ಧ ಗಂಟೆಯಲ್ಲಿ ಬೇರೆ ಕಡೆಗೆ ಕಾಣುತ್ತಲಿದ್ದಳು. ಗಂಗೂ ಬಂದಳೆಂದರೆ ಎಲ್ಲರಿಗೂ ಅದೊಂದು ಅವರ್ಣನೀಯ ಉತ್ಸಾಹ! ಆಕೆಯ ಮೈತ್ರಿಣಿಯರೆಲ್ಲ ಗಂಗೂನ ಅನೇಕ ರೂಪಗಳೆಂಬಂತಾಗಿದ್ದರು.

ಒಂದೂವರೆ ತಿಂಗಳಷ್ಟು ಅಲ್ಪಾವಕಾಶದಲ್ಲಿ ಗಂಗೂ ಸಾಧಿಸಿದ ಕಾರ್ಯ ಅದ್ಭುತವಾಗಿದ್ದಿತು. ಐದಾರು ನೂರು ಜನ ಹೆಣ್ಣು ಮಕ್ಕಳು ಓದು-ಬರೆಹ ಕಲಿತರು; ಆದರೆ ಬರೀ ಓದು-ಬರೆಹವಲ್ಲ, ಅದಕ್ಕಿಂತಲೂ ಮಿಗಿಲಾದ ವಿಷಯಗಳರಿವು ಅವರಿಗಾಗಿದ್ದಿತು. ಸ್ವಚ್ಛತೆ, ಅಚ್ಚುಕಟ್ಟುತನ ಕಲಿತರು. ಪ್ರಥಮೋಪಚಾರ, ಮಕ್ಕಳ ಪಾಲನ-ಪೋಷಣ ಕಲಿತರು. ತಮ್ಮ ಮಕ್ಕಳ, ತಮ್ಮ ಅರಿವೆ ಹೊಲಿದುಕೊಳ್ಳುವದನ್ನು ಕಲಿತರು. ಕೆಲವೆಡೆಗಳಲ್ಲಿ ರಾಟಿಗಳಿಂದ ನೂಲು ತೆಗೆಯಲು ಕಲಿತರು. ನೀತಿ-ನಿಯಮಗಳರಿತರು. ತಾವಿರುವ ಭಾರತವೊಂದು ವಿಶಾಲ ರಾಷ್ಟ್ರವಿದ್ದು, ತಾವೆಲ್ಲರೂ ಆ ಮಹಾ ರಾಷ್ಟ್ರದ ಘಟಕಗಳಿದ್ದು, ಅಂತಹ ಆ ಭಾರತಕ್ಕೆ ತಾವು ಸಲ್ಲಿಸಬೇಕಾದ ಕರ್ತವ್ಯಗಳನ್ನು ಕಂಡುಕೊಂಡರು. ಪಟ್ಟಣದಲ್ಲಿದ್ದರೂ ಹಳ್ಳಿಗರಂತೆ ಕೂಪ ಮಂಡೂಕದಂತಿದ್ದ ಆ ಅನೇಕ ಸ್ತ್ರೀಯರಿಗೆ ಗಂಗು ವಿಶಾಲದೃಷ್ಟಿಯನ್ನು ತಂದು ಕೊಟ್ಟಳು.

ಇಂತಹ ಕಾರ್ಯದಿಂದ ಗಂಗೂನಿಗೆ ಅತೀವ ಆನಂದವಾಯಿತು. ಏನಾದರೂ ಕಾರ್ಯಮಾಡಬೇಕೆಂಬ ಮನವಿದ್ದವರಿಗೆ ಮಾರ್ಗವಿದ್ದೇ ಇದೆ ಯೆಂಬ ಸಂಗತಿತಿಳಿಯಿತು. ಅದರಲ್ಲಿಯೂ ಭಾರತದ ಪ್ರತಿವ್ಯಕ್ತಿ ಸುಶಿಕ್ಷಿತ ನಾಗದೇ ಭಾರತದ ಸರ್ವಾಂಗೀಣ ಉನ್ನತಿಯಾಗದೆಂಬವಿಚಾರ ದೃಢವಾ ಯಿತು. ಬಹಳ ದಿನಗಳಿಂದ ಆರಸುತ್ತಲಿದ್ದ ಆ ಮಹತ್ಕಾರ್ಯ ತಾನಾ ಗಿಯೇ ದೊರೆತು ಅದನ್ನು ಪೂರಯಿಸಿದ ಬಗ್ಗೆ ಆನಂದವೆನಿಸಿತು.

ಆ ಬಡವರ ಬಾಳಿನೊಡನೆ ಸಮರಸವಾಗುವ ಕಲೆ ಗಂಗೂನಿಗೂ ಆಕೆಯ ಗೆಳತಿಯರಿಗೂ ಕರಗತವಾಯಿತು. ಗಂಗೂ ಅವರಿಗೆ ಪ್ರೇರಕ ಶಕ್ತಿಯಾಗಿದ್ದರೆ ಅವರವಳಿಗೆ ವ್ಯೈನೆಳಲಾಗಿದ್ದರು. ಗಂಗೂ ಲೋಹ ಚುಂಬಕ ವಾಗಿದ್ದರೆ ಅವರು ಉಕ್ಕಿನ ತುಂಡುಗಳಾಗಿದ್ದರು. ಲೋಹ ಚುಂಬಕದ ಸಂಪರ್ಕದಿಂದ ಉಕ್ಕಿನ ತುಂಡೂ ಲೋಹ ಚುಂಬಕಗಳಾಗಿ ಮಾರ್ಪಡುವುದಿಲ್ಲವೆ? ಆ ಒಬ್ಬ ಕಾರ್ಯ ಕರ್ತ್ರಿಯ ಮೂಲಕವಾಗಿ ನೂರಾರು ಕಾರ್ಯಕರ್ತ್ರಿಯರು ಸಿದ್ಧರಾದರು. ನೂರಾರು ಸುಂದರ ಕಲಾಮೂರ್ತಿ ಗಳನ್ನು ಸಿದ್ಧಪಡಿಸಿದ ಕಲಾವಿದೆ ಗಂಗೂ ಆಗಿದ್ದಳು. ಅವಳಾಸ್ಫೂರ್ತಿಯ ಮೂಲಕವಾಗಿಯೇ ಅವರಾ ಕಾರ್ಯವನ್ನು ಆಟದಂತೆ ಪೂರಯಿಸಿದರು. ಆ ಹುಡಿಗೆಯರ ತಂಡ ಒಂದು-ಒಂದೂವರೆ ತಿಂಗಳಲ್ಲಿ ಧಾರವಾಡವನ್ನೆಲ್ಲ ಗಡಬಡಿಸಿ ಬಿಟ್ಟಿತು.

ಸರಕಾರದವರ ವಿನಂತಿಯನ್ನು ಅಜ್ಞೆಯೇ ಎಂದು ತಳಿದು ಅನೇಕ ಮಾಧ್ಯಮಿಕ ಶಾಲೆಗಳವರು ಆ ಕಾರ್ಯ ಕೈಕೊಂಡಿದ್ದರು. ಕೆಲವರು ಮನಸ್ಸಿನಿಂದ ದುಡಿದರೆ ಹಲವರು ಮನವಿಲ್ಲದೆ 'ನಾಮಕೆವಾಸ್ತೆ' ಕೈಕೊಂಡಿ ದ್ದರು. ಎಲ್ಲರೂ ಮನಮುಟ್ಟಿದುಡಿದರೆ ಭಾರತದುನ್ನತಿಗೆ ಅವಕಾಶವೇ ಬೇಕಾಗಲಿಕ್ಕಿಲ್ಲ. ಇರಲಿ. ಆದರೆ ದೈವವಶಾತ್ ಗಂಗೂನ ಶಾಲೆಯವ ರಿಗೆ ಗಂಗೂನಂತಹ ಚತುರ ಕಾರಾಗೀರಳು ದೊರೆತಳು. ಅಂತೆಯೇ ಗಂಗೂನ ಶಾಲೆಗೇ ಅಗ್ರಸ್ಥಾನ ದೊರೆಯಿತು. ವೃತ್ತಪತ್ರಗಳಲ್ಲಿ ಜನತೆಯ ಬಾಯಲ್ಲಿ ಎಲ್ಲಿ ನೋಡಿದಲ್ಲಿಯೂ ಇದೇ ವಿಷಯವಾಯಿತು.

ಮೊದಲೇ ಪ್ರಸಿದ್ಧ ಪಡಿಸಿದಂತೆ ಸುವರ್ಣ ಪದಕ ಬಹುಮಾನಗಳು ಗಂಗೂನ ಶಾಲೆಗೇ ದೊರೆತುವು. ಗಂಗೂನ ಮೂಲಕವಾಗಿ ತಮ್ಮ ಶಾಲೆ ಗೊಂದು ಉಚ್ಚಸ್ಥಳ ದೊರಕಿದುದಕ್ಕಾಗಿ ಮುಖ್ಯಾಧ್ಯಾಪಕರಿಗೆ ತೀರಾ

ಆನಂದವಾಗಿದ್ದಿತು. ಅವರೀ ಸಮಾರಂಭ ವಿಜೃಂಭಣೆಯಿಂದ ನೆರವೇರಿಸ ಬೇಕೆಂದು ನಿಶ್ಚಯಿಸಿದರು. ಅಂತಹ ಆ ಸಮಾರಂಭಕ್ಕೆ ಮಹಾವ್ಯಕ್ತಿಯೊಂದರ ಶೋಧದಲ್ಲಿರುವಾಗಲೇ ಶಿಕ್ಷಣಮಂತ್ರಿ ಮಾನ್ಯ ಮೋಹನ ರಾಯರು ಸಮೀಪದಲ್ಲಿಯೇ ಧಾರವಾಡಕ್ಕೆ ಬರಲಿದ್ದರು. ಅವರನ್ನೇ ಕೇಳಿಕೊಳ್ಳಲಾಯಿತು. ವೃತ್ತ ಪತ್ರಗಳ ವಿವರದಿಂದ ಮೊದಲೇ ಈ ವಿಷಯ ತಿಳಿದಿದ್ದ ಮೋಹನರಾಯರು ಆತ್ಯಾನಂದದಿಂದ ಸಮ್ಮತಿಸಿದರು. ನಿಜವಾದ ಕಳಕಳಿಯಿಂದ ದುಡಿಯುವವರಿಗೆ ಉತ್ತೇಜನ ಕೊಡದಿದ್ದರೆ ಶಿಕ್ಷಣ ಪ್ರೇಮೀ ಮಂತ್ರಿಗಳಿಗಿನ್ನಾವ ಆನಂದವಿದೆ? ದಿವಸವೂ ನಿಶ್ಚಿತವಾಯಿತು.

'ಗಂಗೂನ ಜೀವನದಲ್ಲದೊಂದು ಮೈಲುಗಲ್ಲು. ಅದ್ಭುತವಾದ ಯಶ ಸಂಪಾದನೆ ಮಾಡುವ-ಯಶದಾಶೆಯಿಲ್ಲದೇ ಮಹತ್ಕಾರ್ಯ ಮಾಡುವ ಶಕ್ತಿ ಅವಳಲ್ಲಿದ್ದಿತು. ಆದರದು ಅವ್ಯಕ್ತವಾಗಿದ್ದು ಗುರುತಿಸುವ, ಅದಕ್ಕೊಂದು ಅವಕಾಶ ದೊರಕಿಸಿಕೊಡುವ ತಜ್ಞ ದೊರೆತಿರಲಿಲ್ಲ. ತಂದೆ-ತಾಯಿಗಳಲ್ಲಿ ಅಂತಹ ದೃಷ್ಟಿಯೇ ಇರಲಿಲ್ಲ. ಕೃಷ್ಣರಾಯ ಗುರುತಿಸಿದ. ದೇವರೂ ಅನುಕೂಲಿಸಿದ. ಮನೋರಮೆ ಸ್ಫೂರ್ತಿ ತುಂಬಿದಳು. ಒಡನೆಯೇಅವ್ಯಕ್ತವಾದ ಅದ್ಭುತ ಶಕ್ತಿ ಹೊಮ್ಮಿತು; ಅರಳಿದರಳಿನಿಂದ ಸುವಾಸ ಹೊರ ಹೊಮ್ಮುವಂತೆ. ತಂದೆ-ತಾಯಿಗಳಲ್ಲಿಂತಹ ಒಂದು ದೃಷ್ಟಿಯಿದ್ದರೆ ಮಕ್ಕಳು ಈ ಜಗತ್ತಿನಲ್ಲಿ ಏನಾದರೊಂದು ಕಾರ್‍ಯ ಮಾಡಬಹುದೆಂದು ಗಂಗು ತೋರಿಸಿಕೊಟ್ಟಳು.

ಆ ಸುದಿನವುದಿಸಿತು. ಕೃಷ್ಣರಾಯ ಸ್ವತಃ ನಿಂತು ಸಮಾರಂಭಕ್ಕೆ ಸಹಾಯಮಾಡಿದ. ಮನೋರಮೆಯೇ ಮುಂದಾಳಾಗಿದ್ದಳು. ಶಹರದ ಅನೇಕ ದೊಡ್ಡ, ದೊಡ್ಡ ಮನೆತನದ ಸ್ತ್ರೀಯರೂ ತಾವಾಗಿಯೆ ಭಾಗವಹಿಸಿದ್ದರು. ಶಾಲೆಯ ಮುಖ್ಯಾಧ್ಯಾಪಕರ ಹರುಷ ಬಣ್ಣನೆಗೆ ಮೀರಿದ್ದಿತು. ಭೀಮರಾಯರೂ ಆಗಮಿಸಿದ್ದರು. ಗಂಗೂ ಹೆಸರನ್ನು ಸಾರ್ಥಕಗೊಳಿಸಿದುದಕ್ಕೆ ಅವರತೀವ ಹೆಮ್ಮೆ ಹೊಂದಿದ್ದರು. ಮಕ್ಕಳ ಕೀರ್ತಿ ಅದಾವ ತಂದೆಯನ್ನು ಹೆಮ್ಮೆಗೊಳಿಸಲಿಕ್ಕಿಲ್ಲ! ತಂದೆಯಾನಂದ ಗಂಗೂನನ್ನು ಇನ್ನೂ ಹೆಚ್ಚಾಗಿ ಹುರುಪುಗೊಳಿಸಿತು. 'ಇದೀಗ ತೀರಾ ಅಲ್ಪವಾದ ಕಾರ್ಯವಿದ್ದು ಇನ್ನೂ ಹೆಚ್ಚಾಗಿ ದುಡಿದರೆ ಇದಕ್ಕಿಂತಲೂ ಮಹತ್ತರವಾದ ಕಾರ್ಯ ಸಾಧಿಸಬಹುದು; ಎಂದು ತಂದೆಗೆ ಸೂಚಿಸಿದಳು. 'ಗಂಗಕ್ಕಾ ನೀನು

ಜಗತ್ಪಾವನೆಯಾಗು. ಗಂಗಾ ಮಾತೆಯಂತೆ ಜನತೆಗೆ ಪಾವಿತ್ರ್ಯನೀಡು.' ಎಂದು ತಂದೆ ಬಾಯ್ತುಂಬ ಹರಸಿದರು.

ಶಾಲೆಯೆದುರಿನ ಬಯಲಿನಲ್ಲಿ ಸುಂದರವಾದ ಮಂಟಪದಲ್ಲಿ ಸಭೆ ಗೂಡಿದ್ದಿತು. ಮಂತ್ರಿಗಳೇ ಬರಲಿದ್ದಮೂಲಕ ಎಲ್ಲ ಅಧಿಕಾರಿಗಳೂ, ಮುಂದಾಳುಗಳೂ ನೆರೆದಿದ್ದರು. ಕೃಷ್ಣರಾಯ ಸ್ವತಃ ನಿಂತು ಎಲ್ಲ ವ್ಯವಸ್ಥೆ ನೋಡುತ್ತಲಿದ್ದನು. ಮಂತ್ರಿಗಳ ಮಾರ್ಗ ಕಾಯುವಷ್ಟರಲ್ಲಿ ಅವರೂ ಆಗಮಿಸಿದರು. ಸ್ವಾಗತ, ಹಾರ ಮುಂತಾದ ಉಪಚಾರಗಳೆಲ್ಲ ಕೊನೆ ಗೊಳ್ಳುತ್ತಲೇ ಮುಖ್ಯಾಧ್ಯಾಪಕರು ವರದಿಯೋದಲು ಮುಂದಾದರು. ಆ ವರದಿಯೆಲ್ಲವೂ ಗಂಗೂನಸ್ತುತಿಯಿಂದಲೇ ತುಂಬಿದ್ದಿತು. 'ಗಂಗೂತಾಯಿ ಮಾಡಿದ ಕಾರ್ಯ ಪ್ರತ್ಯಕ್ಷ ನೋಡಿಯೇ ತಿಳಿಯಬೇಕು. ಒಂದು-ಒಂದೂ ವರೆ ತಿಂಗಳಲ್ಲಿ ಐದಾರು ನೂರು ಜನರನ್ನು ಮಾನವರನ್ನಾಗಿ ಮಾಡಿದ ಶ್ರೇಯ ಗಂಗೂತಾಯಿಯದು. ಆಕೆಯ ಮೂಲಕ ಸ್ಫೂರ್ತಿಗೊಂಡ ನಮ್ಮ ಶಾಲೆಯ ವಿದ್ಯಾರ್ಥಿನಿಯರದು. ಶಾಲೆ ಇವರಿಗೆಲ್ಲ ತುಂಬಾ ಋಣಿ—' ಮುಂತಾಗಿ ಹೇಳಿ ಪಾರಿತೋಷಕಗಳನ್ನು ಹಂಚಲು ಬಿನ್ನವಿಸಿಕೊಂಡರು. ಮಂತ್ರಿಗಳು ನಗುಮೊಗದಿಂದ ಎದ್ದುನಿಂತರು. ಮುಖ್ಯಾಧ್ಯಾಪಕರು ಗಂಗೂ ನನ್ನು ಕರೆದರು. ಗಂಗೂನ ವಿನೀತ ಭಾವ ಅವಳನ್ನು ಬರಗೊಡಲಿಲ್ಲ. ಆಕೆಯಿದ್ದಲ್ಲಿ ಮುಖ್ಯಾಧ್ಯಾಪಕರೇ ಹೋದರು. ಅದೆಲ್ಲ ಬಹುಮಾನ ಶಾಲೆ ಯದೇ ಇದ್ದಮೂಲಕವೂ ತಾನೂ ಶಾಲೆಯೂ ಅಭಿನ್ನರಾದುದರಿಂದಲೂ ಶಾಲೆಯ ಯೋಗ್ಯಪ್ರತಿನಿಧಿಯಾದ ಮುಖ್ಯಾಧ್ಯಾಪಕರೇ ಸ್ವೀಕರಿಸುವುದು ಯೋಗ್ಯವೆಂದು ಹೇಳಿದಳು.

ಗಂಗೂನ ಈ ಮಾತು ಅವಳಲ್ಲಿನ ಆದರವನ್ನು ನೂರ್ಮಡಿಯಾಗಿ ಬೆಳೆಯಿಸಿತು. ಆದರೂ ಮುಖ್ಯಾಧ್ಯಾಪಕರು. ಬಲವಂತ ಪಡಿಸಲು ಮನೋರಮೆ ಕೈ ಹಿಡಿದೆಬ್ಬಿಸಲು ತೀರಾ ವಿನೀತ ಮುಖದಿಂದ ಗಂಗೂ ಮುಂಬಂದಳು. ಕರತಾಡನದಿಂದು ಕಿವಿಗಡಚಿಕ್ಕಿದುವು. ಹರ್ಷನಾದ ತುಂಬಿ ಹರಿಯಿತು. ಭೀಮರಾಯರ, ಮನೋರಮೆ, ಕೃಷ್ಣರಾಯರ ಕಣ್ಣುಗಳಲ್ಲಿ ಆನಂದಾಶ್ರುಗಳುದುರಿದುವು.

ಮಂತ್ರಿಗಳು ಭಾಷಣಮಾಡಿ. 'ಆದರ್ಶವಿದ್ಯಾರ್ಥಿನಿ ಗಂಗೂನನ್ನು ಬಹಳವಾಗಿ ಸ್ತುತಿಸಿದರು. ಶಾಲೆಯವರೂ ಬರೀ ಪಠ್ಯಪುಸ್ತಕ, ವಿಷಯ

ಗಳನ್ನಷ್ಟೇ ಕಲಿಸಿ ಕೂರದೆ ಭಾರತದ ಆದರ್ಶ ನಾಗರಿಕರು, ನಿಜವಾದ ಕಾರ್ಯಕರ್ತರು ಆಗುವಂತೆ ಯತ್ನಿಸ ಬೇಕೆಂದು ಬೋಧಿಸಿದರು. ಗಂಗೂನ ಕಾರ್ಯ ಪ್ರತ್ಯಕ್ಷವಾಗಿ ಕಂಡು ಅಂತಹ ಶಿಕ್ಷಣ ಕೇಂದ್ರವೇರ್ಪಡಿಸಬೇಕೆಂದೂ, ಅದರಲ್ಲಿ ಗಂಗೂನೇ ಮುಖ್ಯವಾಗಿ ಕಾರ್ಯಕರ್ತರನ್ನು ತಯಾರಿಸಬೇಕೆಂಬ ತಮ್ಮ ಮನೋದಯ ವ್ಯಕ್ತಪಡಿಸಿದರು. ಅಂತಹ ಆ ಉಜ್ವಲ ಕಾರ್ಯ ಪ್ರತ್ಯಕ್ಷವಾಗಿ ಮರುದಿನ ನೋಡಲು ಅನೇಕರನ್ನು ಆ ಮಂತ್ರಿಸಿದರು.

ಅಂದಿನಾಸುದಿನ ಬರಬಹುದೆಂದು ಯಾರು ತಾನೇ ಊಹಿಸಿದ್ದರು! ದೇವೋನ ಜಾನಾತಿ' ಎಂದು ಕವಿ ಹೇಳಿದುದು ಯಥಾರ್ಥವೇ ಇದೆ. ಇಂತಹ ಸುಪ್ರಸಂಗವನ್ನೆಲ್ಲರೂ ಆಶಿಸಬಹುದು. ಆದರೆ ಕಾರ್ಯ ಕೈಗೂಡಿಸುವ ಪ್ರಬಲೇಚ್ಛೆ ಬೇಕಲ್ಲವೆ?

ಗಂಗೂನ ಆ ಮಹತ್ಕಾರ್ಯ ಯಾರನ್ನಾದರೂ ತೊಂದರೆಗೀಡುಮಾಡಿದ್ದರೆ ಅದು ನಮ್ಮ ನಗರಪಿತಾಮಹರನ್ನು. ಮರುದಿನ ಮಂತ್ರಿಗಳು ಗಂಗೂನ ಆ ದಿವ್ಯ ಕಾರ್ಯ ಪ್ರತ್ಯಕ್ಷವಾಗಿ ಕಾಣಲು ಹೋಗುವವರಿದ್ದರು. ಆ ಕಾರ್ಯ ಕ್ಷೇತ್ರವೇನು ರಾಜ ಮಾರ್ಗದಲ್ಲಿದ್ದಿತೆ? ಇಲ್ಲ. ಅದಿದ್ದುದು ಸಂದು ಗೊಂದಿಗಳಲ್ಲಿ. ಅಲ್ಲಿಯ ತಗ್ಗುದಿನ್ನೆಗಳು ಮಳೆರಾಯನಕೃಪೆಯಿಂದಲೇ ಮಾರ್ಪಡಬೇಕು. ಹೊಲಸು ಗಾಳಿಯೇ ಹಾರಿಸಬೇಕು. ದೀಪ ಸೂರ್ಯ ಚಂದ್ರರು ಬೆಳಗಿದಾಗಲೇ. ಎಮ್ಮೆ, ಕತ್ತೆ, ಹಂದಿಗಳೇ ಅಲ್ಲಿ ಭಂಗೀಕಾರ್ಯ ಕೈಗೂಡಿಸಬೇಕು. ನಗರಪಿತಾಮಹರಲ್ಲೊಬ್ಬರೂ ಆ ಬದಿ ಸುಳಿದಿರಲಿಲ್ಲ ಕೂಡಾ. ಅಲ್ಲಿ ಕೆಲಸವಾದರೂ ಏನು? ಆಯ್ಕೆಯ ಸಮಯ ಬಂದಾಗ ಅಲ್ಲಿನ ಒಬ್ಬಿಬ್ಬ ಮುಂದಾಳುಗಳ ಕೈಬೆಚ್ಚಗೆ ಮಾಡಿದರಾಯಿತು. ಇಂತಹ ಸ್ಥಳಗಳಲ್ಲೆಲ್ಲ ಮಂತ್ರಿಗಳು ಸಂಚರಿಸಲಿದ್ದರು. ಇದು ನಗರ ಪಿತಾಮಹರನ್ನು ನಿಜವಾಗಿಯೂ ಪೇಚಿಗೀಡು ಮಾಡಿತು ಶಕ್ಯವಿದ್ದಮಟ್ಟಿಗೆ ಬಣ್ಣ ಬಳಿಯಲೇ ಬೇಕಾಯಿತು. ಅಂದು ಇರುಳೆಲ್ಲ ನಗರಪಿತಾಮಹರ ಗಡಬಡಿಯಂದರೆ ಹೇಳತೀರದು ದೀಪಗಳಿಲ್ಲದಲ್ಲಿ ದೀಪಗಳು ಬಂದುವು. ಅಮಾವಾಸ್ಯೆಯ ಕಗ್ಗತ್ತಲಿನಲ್ಲಿ ಕೂಡಾ ಕಾಣದ ದೀಪ, ಹಗಲಿನಂತೆ ಬೆಳಗಹತ್ತಿದುವು. ನೂರಾರು-ಸಾವಿರಾರು ಜನ ಕಾರ್ಯಕ್ಷಮರಾದರು.

ಅಲ್ಲಿನ ದರಿದ್ರ ಜನರಿಗತೀವ ಆಶ್ಚರ್ಯವಾಯಿತು. ಕಾಲಚಕ್ರ ಒಮ್ಮೆಲೆ ಹಾಗೇಕೆ ತಿರುಗಲಾರಂಭಿಸಿತೆಂದು ತಿಳಿಯದಾದರು. ನಗರ ಸೇವಕರು ಗಂಗೂನನ್ನು ತಮ್ಮ ತಮ್ಮೊಳಗೆ ಶಪಿಸುತ್ತಲಿದ್ದರು. ವಿಚಾರಾನಂತರ ಮರುದಿನ ಮಂತ್ರಿಗಳಲ್ಲಿ ಬರಲಿದ್ದರೆಂದೂ ಗಂಗೂನೇ ಅದಕ್ಕೆ ಕಾರಣಳೆಂದೂ ತಿಳಿದು ಗಂಗೂ ನಿಜವಾಗಿಯೂ ಅವರಿಗೆ ದೇವತೆಯಂತೆ ತೋರಿದಳು. ಮನೆಗಳನ್ನು ಸ್ವಚ್ಛಮಾಡಿಸಿದ್ದಳು. ಮನ ತಾನೇ ಸ್ವಚ್ಛಮಾಡಿದ್ದಳು. ಓಣಿ ಬೀದಿಗಳು ಸ್ವಚ್ಛವಾಗುವಂತೆ ಮಾಡಿದಳು. ಮಂತ್ರಿಗಳ ಸ್ವಾಗತಕ್ಕೆಂದು ಅವರೂ ತಮ್ಮ ತಮ್ಮ ತಯಾರಿಯಲ್ಲಿ ತೊಡಗಿದರು.

ಮೋಟಾರಿನ ದರ್ಶನವೇ ಆಗದ ಆ ಬೀದಿಗಳಲ್ಲಂದು ಸುಂದರ ಕಾರುಗಳು ಸಾಲುಗೊಂಡವು ಬೇರೊಂದು. ಸಮಯವಾಗಿದ್ದರೆ ಅಲ್ಲಿನ ಆ ಹುಡುಗರೆಲ್ಲ ಸುತ್ತುಗಟ್ಟದೇ ಬಿಡುತ್ತಲಿರಲಿಲ್ಲ. ಆದರೆ ಗಂಗೂನ ಶಿಕ್ಷಣ! ಆ ಹುಡುಗರೆಲ್ಲ ಸಾಲುಗೊಂಡು ಆ ಮಂತ್ರಿಗಳನ್ನು ಸ್ವಾಗತಿಸಿದರು. ಮಂತ್ರಿಗಳು ಅಲ್ಲಲ್ಲಿ ಮನೆಗಳನ್ನು ಹರಕು-ಮುರಕು ಗುಡಿಸಲನ್ನು ಪ್ರವೇಶಿಸಿದರು. ಸ್ವಚ್ಛತೆ, ಅಚ್ಚುಕಟ್ಟುತನಗಳವರನ್ನು ಬೆರಗುಗೊಳಿಸಿದುವು. ಆ ಆ ಜನರ ಮಾತುಕತೆಗಳನ್ನು ಕೇಳಿಯೇ ಅವರಲ್ಲುಂಟಾದ ಮಾರ್ಪಾಟು ಕಂಡುಕೊಂಡರು. ಅವರಲ್ಲುಂಟಾದ ನವಸಂಸ್ಕೃತಿಯು ಅವರನ್ನು ಬಹಳ ಆನಂದಗೊಳಿಸಿತು. ಜೀವನದ ವಿವಿಧವಿಷಯಗಳ ಬಗ್ಗೆ ಅವರಲ್ಲುಂಟಾದ ಜ್ಞಾನ ಆಶ್ಚರ್ಯಗೊಳಿಸಿತು. ಓದುಬರೆಹ, ಪ್ರಥಮೋಪಚಾರ, ಮಕ್ಕಳ ಪಾಲನಪೋಷಣ, ರಾಜಕೀಯತೆ ಮುಂತಾದುವುಗಳ ಬಗ್ಗೆ ಹೆಣ್ಣುಮಕ್ಕಳಿಗೆ ಪ್ರಶ್ನೆ ಮಾಡಿದರು. ಅವರಿಗೆ ಸಿಕ್ಕಉತ್ತರಗಳೂ ಬಹಳ ಸುಂದರವಾಗಿದ್ದುವು. ಧನಿಕರಿಂದ, ಸುಶಿಕ್ಷಿತರಿಂದ, ಅಧಿಕಾರಿಗಳಿಂದ ಉಪೇಕ್ಷಿತವಾದ ದರಿದ್ರ ಜನತೆಯ ಜೀವನದಲ್ಲಿ ಅಂತಹ ಉಜ್ವಲವಾದ ಬೆಳಕು ಬೀರಿದ ಗಂಗೂನನ್ನು ಬಹಳವಾಗಿ ಹೊಗಳಿದರು. ಜ್ಞಾನದೀಪವೆಂದು ಮನಮುಟ್ಟ ಸ್ತುತಿಸಿದರು. ಅಲ್ಲಿನ ಆ ಜನರಂತೂ ಗಂಗೂ ಎಂದರೆ ತಮ್ಮ ಭಾಗದ ದೇವತೆಯೆಂದೇ ಭಾವಿಸಿದ್ದರು.

ಮಂತ್ರಿಗಳು ತಮ್ಮ ಅಮೌಲ್ಯವೇಳೆಯನ್ನು ಬಹಳವಾಗಿ ವೆಚ್ಚಿಸಿದರು. ಅಂತಹ ಉತ್ಕೃಷ್ಟವಾದ ಸಂಸ್ಕೃತಿಯ ಬೆಳಕು ಕಂಡು ತಮ್ಮ ಜೀವನವೇ ಧನ್ಯವಾಯಿತೆಂದು ಹೇಳಿದರು. ಮಂತ್ರಿಗಳೇ ಹೀಗೆ ನುಡಿ

ದಲ್ಲಿ ಉಳಿದವರ ಪಾಡೇನು? ಪತ್ರಿಕಾ ಪ್ರತಿನಿಧಿಗಳಂತೂ ಇರುವೆಯಂತೆ ಮುತ್ತಿದ್ದರು. ಅವರ ಕ್ಯಾಮರಾಗಳಿಗಂತೂ ಬಿಡುವೇ ಇರಲಿಲ್ಲ. ನೂರಾರು ಚಿತ್ರಗಳನ್ನಾದರೂ ಸಂಗ್ರಹಿಸಿದರು. ಗಂಗೂನ ಚಿತ್ರಗಳೂ ಅದರಲ್ಲಿದ್ದುವು.

---

# ಭಿನ್ನದೃಷ್ಟಿ.

'ದೃಷ್ಟಿಯಂತೆ ಸೃಷ್ಟಿ' ಒಂದೇ ವಸ್ತು ಹಲವರಿಗೆ ಹಲವಿಧವಾಗಿ ಕಾಣು ವುದು ಸ್ವಾಭಾವಿಕ. ಒಬ್ಬನಿಗೆ ಒಳಿತೆಂದು ತೋರಿದುದು ಬೇರೊಬ್ಬನಿಗೆ ಹೀನು ಕಾಣುತ್ತದೆ. ಇದಕ್ಕೆಲ್ಲ ಆ ವಸ್ತುವನ್ನು ನಾವು ನೋಡುವ ದೃಷ್ಟಿಯೇ ಕಾರಣ. ಹಸಿರುಗಾಜಿನಲ್ಲಿ ಜಗತ್ತೆಲ್ಲ ಹಸಿರಾದರೆ, ಕೆಂಗಾಜು ಕೆಂಪಾಗಿಸು ತ್ತದೆ ನಮ್ಮ ಕಣ್ಣು ಆವಾಗಲೂ ಇಂತಹ ಕಾಲ್ಪನಿಕ ಗಾಜಿನಿಂದ ಮುಚ್ಚಿದೆ. ನಾವಾವಾಗಲೂ ನೋಡುವುದು ನಮ್ಮ ಕಲ್ಪನಾರೂಪೀ ಗಾಜು ಗಳಿಂದಲೇ. ಅಂತೆಯೇ ದುರ್ಯೋಧನನಿಗೆ ಎಲ್ಲರೂ ದುಷ್ಟರಾಗಿ ಕಂಡರು.

ಗಂಗೂನ ಈ ಕಾರ್ಯವಿವರಗಳು ಪಡಿಯಚ್ಚುಗಳೊಡನೆ ಪಾರ್ವತೀ ಬಾಯಿಯ ವರೆಗೆ ಬಂದುವು. ಓದು ಬರುತ್ತಲಿಲ್ಲವಾದುದರಿಂದ ಅದನ್ನು ಓದಿ ತಿಳಿಯಲಾಗಲಿಲ್ಲ. ಆದರೂ ಬೇರೆಯವರಿಂದ ಓದಿಸಿ ತಿಳಿದುಕೊಂ ಡಳು. ಪಡಿಯಚ್ಚುಗಳನ್ನು ಪ್ರತ್ಯಕ್ಷವಾಗಿ ನೋಡಿದಳು. ಮಗಳ ಇಂತಹ ಕರ್ತವ್ಯ ಶಕ್ತಿಯನ್ನು ಓದಿ ತಿಳಿಯಲು ಓದು ಕಲಿಯಲಿಲ್ಲವಲ್ಲಾ ಎಂದು ಹಳಹಳಿಸುವುದು ತಾಯಿಯಾದವಳಿಗೆ ಸಹಜ. ತಾಯಿ ಹೆಮ್ಮೆಯಿಂದ ಮಗಳ ಪ್ರೌಢಿಮೆ ಪ್ರಶಂಶಿಸುವುದೂ ಸ್ವಾಭಾವಿಕವೆ? ಆದರೆ ಪಾರ್ವತೀ ಬಾಯಿ ಹಾಗೆ ಮಾಡಿದಳೆಂದು ಯಾರು ಊಹಿಸಲಾರರು. ಹಾಗೆ ಊಹಿ ಸಿದರೆ ಮಾತ್ರ ಅವರದೇ ತಪ್ಪು. ಈ ಸಂಗತಿಯನ್ನು ಕೇಳಿದಾಗ ಆ ಹೆಣ್ಣು ಮಗಳ ಮನಕ್ಕೆ ಉಂಟಾದ ಸ್ಥಿತಿ ಊಹೆಗೂ ಕೂಡಾ ಮೀರಿರುವಾಗ ವರ್ಣ ನೆಗೆ ಹೇಗೆ ಸಾಧ್ಯ? ಪ್ರತ್ಯಕ್ಷವಾಗಿ ಪುರಾಣಿಕರು ವರ್ಣಿಸುವ ಅತ್ಯಂತ ದಾರುಣ ವಾದ ಆ ಮಹಾಪ್ರಳಯ ನಡೆದಿರುವಾಗ ಪಾರ್ವತೀಬಾಯಿ ಅಲ್ಲಿ ಪ್ರತ್ಯಕ್ಷ ವಾಗಿ ನಿಂತಿದ್ದರೂ ವ್ಯಥೆಯೆನಿಸದಷ್ಟು ದಾರುಣವಾದ, ಅಗ್ನಿದಾಹಕ್ಕಿಂ ತಲೂ ಕಠೋರತಮವಾದ ವ್ಯಥೆಯವಳನ್ನಾವರಿಸಿತು; ಮನಕಾತರಗೊಂ ಡಿತು. ಹೃದಯ ತಳಮಳಿಸಿತು. ಹಲ್ಲಣಹಾರಲಾಗದೇ ಉಳಿದಿತು.

ಒಮ್ಮೆಲೇ ಆರ್ತಸ್ವರದಿಂದ ದೇವಾ ದೇವಾ ಏನನರ್ಥವಿದು! ನನ್ನ ಹೊಟ್ಟೆಯಲ್ಲಿಂತಹ ಪಾಪಿ ಹುಟ್ಟಿದುದೇಕೆ? ಇಂತಹ ಭಯಂಕರ ಅನಾಚಾರಕ್ಕೆ ಕೈ ಹಾಕಿದುದೇಕೆ? ಹರೆಯದ ಗಂಡ ಸತ್ತ ಹೆಣ್ಣು. ಗಂಡಸರ ಮುಖ ನೋಡುವದೇ ಮಹಾಪಾಪವಾಗಿರುವಾಗ ಅವರೊಡನೆ ಮೋಟಾರಿನಲ್ಲಿ ಮೆರೆಯುವದೆಂದರೇನು? ಈ ಆ ಹಾಳು ಮಂತ್ರಿಯೋ ತಂತ್ರಿಯೋ ಅವನೊಡನೆ ಕುಳಿತ ಮೇಲೆ ಇವಳ ಶೀಲವುಳಿದೀತೆ? ಅಯ್ಯೋ! ಅಯ್ಯೋ! ಏನು ಭ್ರಷ್ಟಾಚಾರವಿದು? ತನ್ನಷ್ಟಕ್ಕೇ ತಾನು ಹಾಳಾಗಲಿ. ಆದರೆ ನಮ್ಮ ಏಳು ತಲೆಗಳನ್ನೂ ನರಕಕ್ಕೆ ಬೀಳಿಸಿದಳಲ್ಲವೆ? ನಾನಿಷ್ಟೆಲ್ಲ ದಾನಧರ್ಮ ಮಾಡಿದುದರ ಫಲವೆಂದರೆ ಅನಂತ ನರಕವಾಸ ಆ ನರಕಯಾತನೆಯಿಂದ ನಮಗೆ ಉದ್ಧಾರವೇನಾದರೂ ಇದೆಯೆ? ಇಲ್ಲ. ಇಲ್ಲ, ಎಂದೂ ಇಲ್ಲ. ಇದೆಲ್ಲವನ್ನೂ ಕಾಣಲೆಂದೇ ನಾನು ಜೀವಿಸಿರುವೆನೆ? ದೇವರೇ ಕುಳಿತಲ್ಲಿಯೇ ನನ್ನ ಕಣ್ಣುಗಳನ್ನೇಕೆ ಮುಚ್ಚುವದಿಲ್ಲ.

ಪಾರ್ವತೀಬಾಯಿಯ ಸ್ಥಿತಿ ತೀರಾ ಶೋಚನೀಯವಾಯಿತು. ಹಿಂದೆಯೇ 'ಗಂಗೂ ಮುಂದೆ ಓದಲಿದ್ದಾಳೆಂದು ಭೀಮರಾಯರು ತಿಳಿಸಿದಾಗಲೇ ಪಾರ್ವತೀಬಾಯಿಗೊಂದು ಹೃದ್ರೋಗ ಹಿಡಿದ ಹಾಗಾಗಿದ್ದಿತು. ಈಗಂತೂ ಕುರುವಿನ ಮೇಲೆ ಬೊಕ್ಕೆ-ಕುರುವಿಗಿಂತಲೂ ಘನವಾದ ಬೊಕ್ಕೆ. ಇಂತಹ ಭೀಕರ ಉತ್ಪಾತದಿಂದ ಕುಸಿಕೂತಿರುವಾಗಲೇ ಬೇರೊಂದು ಭೀಕರ ಪ್ರಸಂಗ ಎದುರಾಯಿತು. ಆ ಭಯಂಕರ ಸಂಕಟ ಎದುರು ಬೀಳುವುದೆಂದರಿತೇ ಆಕೆಯ ಶಕ್ತಿಗುಂದಿದ ಶರೀರ ಭೂಮಿಗೇ ಇಳಿಯಿತು. ಎದುರಿಸುವ ಶಕ್ತಿಯಿರಲಿಲ್ಲ. ಎದುರಿಸದೇ ಗತ್ಯಂತರವಿರಲಿಲ್ಲ. ಆ ವಿಪತ್ತಿನಿಂದ ಪಾರು ಮಾಡುವಂತೆ ಪರಮೇಶ್ವರನನ್ನು ಬಹಳವಾಗಿ ಪ್ರಾರ್ಥಿಸಿದಳು. ಅಂತಹ ದಾನಧರ್ಮಗಳೇ ಫಲಗಳೇ ಫಲ (ಅವಳ ಮನಕ್ಕೆ ಸರಿಯಾದ) ಕೊಡದಿರಲು ಬರಲಿದ್ದ ಆ ವಡವಾಗ್ನಿಯಂತಹ ಅತ್ಯಂತ ದಾರುಣವಾದ ದುರ್ಧರ ಪ್ರಸಂಗ ಬಂದೇ ಬಂದಿತು. ಪಾರ್ವತೀಬಾಯಿ ಭೀತಿಯಿಂದ ಬೆಳ್ಳಗಾದಳು.

ವೇಣೂತಾಯಿ, ಭಾಗಕ್ಕ ಮುಂತಾದ ಊರ ಹತ್ತು ಹನ್ನೆರಡು ಸ್ತ್ರೀಯರು ಅಂದು ಪಾರ್ವತೀಬಾಯಿಯ ಮೇಲೆ ಹಲ್ಲೆ ಮಾಡಲು ಬಂದರು. ರೂಢವಾದ ಧರ್ಮರಕ್ಷಣೆಯಲ್ಲಿ ನಿರತರಾದ ಬಲಾಢ್ಯ ಸೇನಾಪಿಗಳಿವರು. ಕ್ಷುದ್ರವಾದ ಸ್ವಾರ್ಥ-ಗೃಹಕೃತ್ಯ-ಬದಿಗಿರಿಸಿ ಬಂದಿದ್ದರು. ಧರ್ಮದ ಆಧಾರ-

ಸ್ತಂಭದಂತಿರುವ ಭೀಮರಾಯರ ಮನೆಯಲ್ಲಿಯೇ ಅಧರ್ಮ ಬಲವಾಗಿ ನೆಯ್ಯೊಳ್ಳಲು ಆ ಧರ್ಮಮಂದಿರ ಕುಸಿಯದಿದ್ದೀತೆ? ಅಂತಹ ಆ ಕುಸಿದು ಬೀಳುವ ಧರ್ಮಮಂದಿರವನೆತ್ತಿ, ಹಿಡಿಯುವದವರ ಕರ್ತವ್ಯವಾಗಿರಲಿಲ್ಲವೆ? ಕ್ರೂರವಾದ ನೋಟಗಳೇ ಅವರ ಬಾಣ-ತೋಫುಗಳು ಸಿಡಿಲಿನಂತಹ ಮಾತುಗಳೇ ಅಣುಬಾಂಬು. ಇಂತಹ ಈ ಬಲಿಷ್ಠ ಸೇನೆಯನ್ನೆದುರಿಸುವ ಬಲವಾರದು? ಅದರಲ್ಲಿಯೂ ಮೊದಲೇ ದುಃಖ ಜರ್ಜರಿತಳಾದ ಪಾರ್ವತೀ ಬಾಯಿ ಹೇಗೆ ಎದುರಿಸುವಳು? ಆವ ಆಯುಧವೂ ಅವಳಲ್ಲಿರಲಿಲ್ಲ. ಅಂತೆಯೇ ಅವಳು ಗಾಬರಿಯಾದಳು.

ಪಾರ್ವತೀಬಾಯಿಯಲ್ಲಿಂದು ನಿಷೇಧ ಪ್ರದರ್ಶನದ ಸಭೆ ಸೇರಿದ್ದಿತು. ಇಂತಹ ಎಷ್ಟೋ ಸಭೆಗಳಲ್ಲಿ ಅಧ್ಯಕ್ಷಸ್ಥಾನ ಸ್ವೀಕರಿಸಿ ಅಧ್ಯಕ್ಷಣಿಯ ಕಾರ್ಯದೊಡನೆಯೇ ನ್ಯಾಯಾಧೀಶನಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ ಪಾರ್ವತೀಬಾಯಿಯೇ ಅಪರಾಧಿ, ಮಹಾಪರಾಧಿ. ಅಂತಹ ಒಂದು ನ್ಯಾಯಾಲಯದೆದುರು, ಅಪರಾಧಿಯಾಗಿ-ತನ್ನದೇನೂ, ಅಪರಾಧವಿಲ್ಲದೆ-ನಿಲ್ಲುವ ಪ್ರಸಂಗ ಬಂದುದಕ್ಕೆ ಪಾರ್ವತೀಬಾಯಿ ತೀರಾ ದುಃಖಿತಳಾದಳು. ಅದೆಲ್ಲಕ್ಕೂ ಕಾರಣಳಾದ ಗಂಗೂನನ್ನು ಸಾವಿರಸಲ ಶಪಿಸಿದಳು.

'ಏನ್ರೀ ಪಾರಕ್ಕಾ, ಖರೇ ಎನ್ರಿ?'

'ಹೌದು ವೇಣಕ್ಕಾ, ಖರೇನೇ ಅದನ್ರವ್ವಾ. ಎಲ್ಲಾ ಗೂರ್ ಕಾಣ್ತೀರ್ರಿ ಕ್ಕೆ ಸುಳ್ಳಂದ್ರ ಹಾಂಗ ನುಡ್ದೀತು?' 'ಅಲ್ರೀ ಇದೆಲ್ಲಾ ಆದದ್ದಾರ ಹ್ಯಾಂಗ?'

'ನನ್ನ್ಹಣೇ ಬಾರ. ಇನ್ನೇನು?'

'ಇದ್ರಾಗೇನ್ನ್ಹಣೇ ಬಾರ ಬಂತ್ರೀ? ಏನೇನೋ ಅನಾಚಾರಾನಡ್ದದ. ನೀವು ಕಣ್ಮುಚ್ಚೊಂಡ್ಕುತೀರಿ. ಹಣೇಬಾರಾ ಅಂತೀರಿ?'

'ಇಲ್ರೆವ್ವಾ ಕಣ್ಮುಚ್ಗೊಡ್ಕುತಿಲ್ಲಾ. ಭಲೋ ಕಣ್ತುಗದು ಕೂತ್ಕೊಂಡೆನಿ ಆದದ್ದೆಲ್ಲಾ ನೊಡ್ಕೋತ.'

'ಹಾಂಗಾರ ಇದಕ್ಕೆಲ್ಲಾ ನಿಮ್ಮ ಒಪ್ಗಿ ಅದ ಅಂಥಂಗಾತಲ್ಲ?'

'ಹೌದ್ಹಂಗs ಆಗೇದ. ಕಯ್ಯಾನಡೀದ್ಮ್ಯಾಲ ಕಣ್ತುಗದ್ರೇನು? ಮುಚ್ಚಿದ್ರೇನು? ನಿಮ್ಗೊ ನಾನs ಮಾಡಸ್ತೇನಂತ ಕಾಣ್ಸಿದೂ ಖರೇ ಅದ.'

'ಅಲ್ಲಾ ನಾ ಅಂತೇನೀ ನಿಷ್ಹಂಗs ಕೂತ್ರ ಇನ್ನೂ ಏನೆನ್ನಡ್ದೀತ್ರೆ ಅನ್ನೂದರ ಕಲ್ಪನಾ ಅದಏನ್ನಿಮಗ.'

‘ಅದೆನ್ರೆವ್ವಾ ಛಲೋತ್ನಾಗಿ ಅದ. ಆದ್ರ ಮಾಡೂದೇನು?’

‘ಅಲ್ಲಾ ಇದರಫಲಾ ಏನನ್ನೂದು ನಿಮಗ್ಗೊತ್ತಿಲ್ಲ?’

‘ಅದೂ ಗೊತ್ತದ. ಆದ್ರ ಮಾಡ್ಲೆನು?’

‘ಮುಂದಿಗ್ಯಾಂಗ್ಹೇಳ್ತಿದ್ರಿ? ಹಾಂಗ ಮಾಡ್ರಿ ಹೀಂಗ ಮಾಡ್ರಿ ಅಂತ ವ್ಹೇಳ್ಯಾಲ ಬಂದಾಗ—’

‘ಹೌದ್ರೆವ್ವಾ ಅನ್ಸಗೊಳೋಹಾಂಗ ಆಗೇದ ಅಂತೀರಿ.’

‘ಹೌದ್ರೀ ಪಾರಕ್ಕಾ; ಆಗೇದಂತs ಅಂತಾರ. ಆದ್ರ ಮಂದಿ ಅನ್ನೂ ಹಾಂಗ ಯಾಕ್ಮಾಡ್ಬೇಕು? ಊರ್ಗೆಲ್ಲಾ ಬುದ್ಧೀ ಹೇಳುವವ್ರು ನೀವs ಹೀಂಗ ಮಾಡಿದ್ರೇನನ್ಬೇಕು?’

‘ಭಾಗಕ್ಕಾ, ಖರೇ ಹೇಳ್ಬೇಕಂದ್ರ ಇದ್ರಾಗ ನಂಜೀವೆಲ್ಲಾ ಸಣ್ಣಾಗ್ಹೋಗೇದ. ದಿನಾ ನಾ ಎಷ್ಟ ಕಷ್ಟ ಪಡ್ತೇನಿ ಅನ್ನೂದು ಆ ಪರಮಾತ್ಮಗs ಅರಿಕೆ. ಏನ್ಮಾಡ್ಲೀ ನನ್ದೈವಾನs ಕೆಟ್ಟ ಅದ. ನಾ ಏನಂದ್ರೂ ಕೇಳೂಅವ್ರs ಇಲ್ಲ. ಇಲ್ಲೀತನ್ಕ ಧರ್ಮದ್ಕೆಲಸ್ದಾಗರs ನನ್ಮಾತ್ನಡೀತಿತ್ತು. ಈಗ ಅದೂ ಇಲ್ಲ. ನನ್ಪಾಡು ನಾಯೀಪಾಡಾಗೇದ.’

‘ಪಾರಕ್ಕಾ, ಹೀಂಗ ಹಾರಿಸ್ಕೊಂಡ್ಮಾತಾಡಿದ್ರ ಹ್ಯಾಂಗಾದೀತು? ಬೆಕ್ಕು ಕಣ್ಮುಚ್ಗೊಂಡ್ಹಾಲ್ಕುಡದ್ರೇನ್ಕಾಣ್ಸೂದಿಲ್ಲ? ಇದರ ಪರಿಣಾಮೇನಾದೀತಂತ ತಿಳ್ಕೊಂಡೀರೇನ?’

‘ವೇಣಕ್ಕಾ, ನೀವೇನ್ಬೇಕಾದ್ರೂ ಅನ್ರಿ. ಹಾರಿಸ್ಕೊಬೇಕಂತೂ ನಾ ಏನ್ಹೇಳೂದಿಲ್ಲಾ. ಖರೇ ಅಂದ್ರ ನನ್ಕೆಯ್ಯಾಗ ಏನೂ ಉಳ್ದಿಲ್ಲ. ಉಳ್ದದ್ದಂದ್ರ ಜೀವಾಕೊಡೋದು. ಅದೂ ಯಾವಾಗ ಬರ್ತsದೋ ಗೊತ್ತಿಲ್ಲ. ದೆವ್ವನ್ಹಂಗ ಇರೂದಕ್ಕಿಂತಾ ಸತ್ತs ದೆವ್ವಾದ್ರೇನ್ಕೆಟ್ಟ್ತು?’

‘ಏನೋ ನಮ್ಮವ್ವಾ. ನಮ್ಗಂತೂ ಸರಿ ಬರೂದಿಲ್ಲಾ ನೋಡ್ರಿ. ಗಂಡ್ಸತ್ಮುಂಡೇನು? ಮುಂಡಾ ಮೋಚ್ಗೊಳ್ಳೊದ್ಬಿಟ್ಟು ಗಂಡ್ಸರ್ಸಂಗ್ತೀ ಮೆರ್ಯೋದೇನು? ಆಕೀಗೆ ತಿಳೀದಿದ್ರ ನೀವು ತಂದೀ–ತಾಯೀ ತಿಳಿಹೇಳ್ಬೇಕು. ನೋಡ್ಲಿಲ್ಲ. ಏನಸಯ್ಯಂ. ಆ ಹೊಲ್ಯಾರ ಸಂಗ್ತೀ ಫೋಟೋ ತಗಿಸ್ಗೊಬೇಕs.’

‘ನಾ ಏನ್ಹೇಳಿದ್ರೂ ನಡೂದಿಲ್ಲ. ಗಂಡಸರು ಹೇಳೂದಿಲ್ಲಾ.’

‘ನೋಡ್ರಿ ಪಾರಕ್ಕಾ, ಹೀಂಗs ನೀವ್ಬಿಟ್ರ ಗತಿ ನೆಟ್ಗ ಕಾಣೂದಿಲ್ಲಾ. ನೀವೇನಾರs ಮಾಡಿ ಅವನ್ನ ಬಂದ ಮಾಡ್ರಿ.’

ಪಾರ್ವತಿಬಾಯಿಯೆಂದರೆ ಜನರಿಂದ ಒಂದೇ ಒಂದು ಮಾತು ಅನ್ನಿಸಿಕೊಂಡವಳಲ್ಲ; ಆದರೂ ಇಂತಹ ಭಯಂಕರ ಅಪಮಾನ ಸುಮ್ಮನೆ ಸಹಿಸಬೇಕಾಯಿತು. ಒಂದು ಶಬ್ದ ಕೂಡಾ ಆಡುವ ಸ್ಥಿತಿಯುಳಿದಿಲ್ಲ. ಬಹಳವಾಗಿ ಕೋಪಿಸಿದಳು; ಆದರೆ ಅದಕ್ಕೆ ಪ್ರತೀಕಾರವೆಲ್ಲಿ? ಇದಕ್ಕೆಲ್ಲ, ಕಾರಣಳಾದ ಗಂಗೂ ಅವಳ ಕೈಗೆ ನಿಲುಕದಷ್ಟು ದೂರ ಹೋಗಿದ್ದಳು. ಇನ್ನು ಸಮೀಪದಲ್ಲಿದ್ದವರು ಭೀಮರಾಯರು; ಆದರೆ ಭೀಮರಾಯರಲ್ಲೊಂದು ಮಹತ್ತರವಾದ ಮಾರ್ಪಾಟು ಉಂಟಾಗಿದ್ದಿತು. ನಿತ್ಯ ಕ್ರಮ ಮುನ್ನಿನಂತೆ ನಡೆದಿದ್ದರೂ ಅದರಲ್ಲಿ ಚೇತನೆಯೇ ಉಳಿದಿರಲಿಲ್ಲ. ಇಷ್ಟೇ ಅಲ್ಲ. ಇದೆಲ್ಲ ಧರ್ಮವೆಂಬದೇನಿದೆ? ಎಲ್ಲವೂ ನಿಜವಾಗಿಯೂ ಸರಿಯಾಗಿದೆಯೆ? ಬರಿಯ ರೂಢಿ ಮೂಲವಾದದ್ದೇ? ಮುಂತಾದ ಚಿಕಿತ್ಸಕ ಬುದ್ಧಿಯೊಂದುಂಟಾಗಿದ್ದಿತು. ರೂಢಿ ಮೂಲವಾದ ಧರ್ಮ ಆಚರಿಸುತ್ತಲಿರುವಾಗ, ತಮ್ಮ ಪ್ರೇಮಮಯ ಹೃದಯವವರನ್ನು ಬೇರೇ ದಾರಿಗೇನೇ ಎಳೆದೊಯ್ಯಿತು. ಸರಿಯಲ್ಲವೆಂದು ತೋರುತ್ತಲಿದ್ದರೂ ಸಮ್ಮತಿಸಬೇಕಾಯಿತು. ಮನಸ್ಸಮಾಧಾನಾರ್ಥವಾಗಿ ಸತ್ಯಶೋಧನೆಯಲ್ಲಿ ತೊಡಗಬೇಕಾಯಿತು. ಬೇಕಾದ ಉತ್ತರ ಸರಿಯಾಗಿ ಸಿಕ್ಕದಿದ್ದರೂ ರೂಢಿಯೇ ಸರಿಯಾದ ಧರ್ಮವಲ್ಲವೆಂಬ ನಂಬುಗೆ ಪ್ರಬಲವಾಗಹತ್ತಿತು. ಗಂಗೂನ ದಾರಿ ಸರಿಯೆಂದು ಹೃದಯ ಹೇಳುತ್ತಲಿದ್ದರೂ ವಿವೇಕ ಪೂಪ್ಪಿರಲಿಲ್ಲ. ಆ ವಿವೇಕವನ್ನು ಒಪ್ಪಿಸುವದರ ಸಲುವಾಗಿಯಾದರೂ ಶಾಸ್ತ್ರಾವಲೋಕನೆಗೆ ತೊಡಗಿದರು. ಹೆಚ್ಚು ಹೆಚ್ಚು ಆಳ ಇಳಿದಂತೆ ಸತ್ಯದ ದರ್ಶನವಾಗಲಾರಂಭಿಸಿತು. ಮನಸ್ಸು ಶಾಂತವಾಗಲಾರಂಭಿಸಿತು. ವಿವೇಕವೂ ತನ್ನ ಒಪ್ಪುಗೆ ಕೊಡಹತ್ತಿತು.

ಭೀಮರಾಯರಲ್ಲಿ ಸ್ಥಿತ್ಯಂತರವೇನೋ ಆಯಿತು; ಆದರೆ ಪಾರ್ವತೀಬಾಯಿಯಲ್ಲಿ-ಮುನ್ನಿನ ಆ ಅಚಲವಾದ ನಿಷ್ಠೆ ಹಾಗೇ ಇದ್ದಿತು. ಕೈಲಾದಮಟ್ಟಿಗೆ ಆವ-ಆಗಲಿದ್ದ ಅನರ್ಥವುಳಿಸಬೇಕೆಂಬ ವಿಚಾರ ಮತ್ತೆ ಪ್ರಬಲವಾಯಿತು. ಕೊನೆಯ ಯತ್ನವೊಂದನ್ನು ಮತ್ತೆ ಕೈಕೊಂಡಳು.

'ಅಲ್ಲಾ ಮತ್ತ ಗಂಗೂನ ವಿಚಾರಾ ಏನ್ಮಾಡಿದ್ರೀ.'

'ನಾ ಮಾಡೂ ವಿಚಾರ ಏನೂಇಲ್ಲಾ ಅಂತ ಹೇಳ್ಳಿಲ್ಲ?'

'ಅಲ್ಲಾ ಇದ್ರ ಪರಿಣಾಮ ವಿಚಾರಾ ಮಾಡೀರೇನು?'

'ಪರಿಣಾಮ, ಆ ವಿಚಾರ ಮಾಡಿದರೂ-ಮಾಡದಿದ್ದರೂ ನಮ್ಮನ್ನು ಅವಲಂಬಿಸಿಲ್ಲ. ಗಂಗೂ ತನ್ನ ಹೆಸರು ಸಾರ್ಥಕಗೊಳಿಸಿದಳು. ಜಗತ್ತನ್ನೇ ಪಾವನಗೊಳಿಸುವ ಗಂಗಾ ಮಾತೆಯುವಳು.'

'ನಮ್ಮ ಲಾನಃ ನರಕ್ದಾಗ್ಕೆಡವಿದ್ಲು.'

'ಇಕೊ ಅದನ್ನೇ ನಾನು ತಿಳಿಯುತ್ತಲಿದ್ದೇನೆ. ನಮ್ಮ ಕಲ್ಪನೆಗಳೆಲ್ಲ ತೀರಾ ಸರಿಯೆಂದು ಹೇಳಲು ಬರುವಂತಿಲ್ಲ. ನಾನು ಶಾಸ್ತ್ರಿಗಳನ್ನು ಕೇಳಿರುವೆ. ಶಾಸ್ತ್ರ ಓದಿರುವೆ. ಗಂಡ ದೇವರೆಂದು ನಂಬಿದ ನೀನು ಗಂಡನ ಮಾತನ್ನೂ ನಂಬು. ಗಂಗೂ ಕೈಕೊಂಡ ಕಾರ್ಯದಲ್ಲಿ ಪಾಪವಿನಿತೂ ಇಲ್ಲ. ಸಾಧಿಸಿದರೆ ಮಹತ್ಪುಣ್ಯವೇ; ಮತ್ತು ನಮ್ಮ ನಮ್ಮ ಕಾರ್ಯಕ್ಕೆ ನಾವೇ ಹೊಣೆ. ಬೇಡನಾದ ವಾಲ್ಮೀಕಿಗೆ ಆತ ಮಾಡಿದ ಪಾಪದಲ್ಲಿ ಅವನ ಹೆಂಡತಿ ಭಾಗ ತಕ್ಕೊಳ್ಳುವದಿಲ್ಲವೆಂದು ಹೇಳಲಿಲ್ಲವೆ? ಗಂಡನ ಪಾಪವೇ ಹೆಂಡತಿಗೆ ತಟ್ಟದಿರುವಾಗ ಬೇರೆಯವರ ಕುಲಕ್ಕೆ ಹೋದ ಮಗಳ ಪಾಪ-ಪುಣ್ಯಗಳು ಹೇಗೆ ತಟ್ಟುವವು? ಈ ನಿಮ್ಮ ಶುದ್ಧ ಮಾಡುವದೂ ಶಾಸ್ತ್ರದಿಂದ ಸರಿಯಾಗಿಲ್ಲ. ಈ ರೀತಿಯಲ್ಲಿ ಯಾರಾದರೂ ಶುದ್ಧರಾದರೆಂದು ಶಾಸ್ತ್ರದಲ್ಲಿ ಪುರಾಣಗಳಲ್ಲಿ ಎಲ್ಲಿಯೂ ಹೇಳಿಲ್ಲ. ಇದೆಲ್ಲ ಆ ವೇಳೆ ಬೌದ್ಧರನ್ನು ನೋಡಿ ಮಾಡಿದ ಅನುಕರಣವೆಂದು ಇತಿಹಾಸಕಾರರು ಹೇಳುತ್ತಾರೆ. ಬೇಕಿದ್ದರೆ ರಾಮಶಾಸ್ತ್ರಿಗಳನ್ನೂ ಕೇಳಿ ನೋಡು.'

ಪಾರ್ವತೀ ಬಾಯಿಯ ಬಾಯಿ ಕಟ್ಟಾಯಿತು. ಮನಸ್ಸೂ ಹೊಯ್ದಾಡ ಹತ್ತಿತು. ಗಂಡನೇ ದೇವರೆಂದಲ್ಲಿ ಆ ದೇವರ ಮಾತಿನಲ್ಲಿ ನಂಬಿಗೆ ಇಡದಿದ್ದರೇನೇ ಪಾಪವೆಂದು ಸಾರಹತ್ತಿತು. ಗಂಗೂ ಮತ್ತೆ ಮದುವೆಯಾದರೆ-ಎಂಬ ಶಂಕೆಯೊಂದು ಬಂದಿತು.

'ಆಗ್ಲಿ ನೀವ್ಹೇಳ್ತಿರೀ ಅಂದ್ಮ್ಯಾಲ ನಾ ಎಲ್ಲಾ ಬಿಟ್ಬಿಡ್ತೇನಿ. ಆದ್ರ ಗಂಗೂ ಮತ್ಮದುವ್ಯಾದ್ರ.'

'ಈ ವಿಚಾರ ನನಗೂ ಇದೆ. ಶಾಸ್ತ್ರಗಳಲ್ಲಿ ಅಂಥ ಆಧಾರ ಸಿಕ್ಕುವುದಿಲ್ಲ. ಆದರೂ ಹಿಂದೂ ಧರ್ಮಕ್ಕೆ ಗುರುವಾದ ಮನು ಒಂದು ಸ್ಥಳದಲ್ಲಿ ಹೇಳಿದ್ದಾನೆ ಆಗಬಹುದೆಂದು. ಅದೇನೇ ಇರಲಿ. ಇಷ್ಟು ಉಚ್ಚವಾದ ಕಾರ್ಯದಲ್ಲಿ ತೊಡಗಿದ ಗಂಗೂ ಮದುವೆಯಾಗುವಳೆಂದು ನನ್ನ ಮನಕ್ಕಂತೂ ತೋರುವದಿಲ್ಲ. ಒಂದು ವೇಳೆ ವಯೋಮಾನಕ್ಕನುಸರಿಸಿ ಮದುವೆಯಾಗ

ಬೇಕೆಂದು ಇಚ್ಛಿಸಿದರೆ ಅಡ್ಡ ಹಾದೀ ತುಳಿಯುವದಕ್ಕಿಂತ ಈಗಿನ ಕಾಲಕ್ಕನು ಸರಿಸಿ ಮದುವೆಯಾಗುವದೇ ಒಳಿತು. ಏನೇ ಆದರೂ ಅವಳ ಪಾಪ-ಪುಣ್ಯ ಗಳು ನಿನಗೆ ಯಾವರೀತಿಯಲ್ಲಿಯೂ ಸಂಬಂಧಿಸಿಲ್ಲ. ನನಗೆ ಹಾಗೆ ಮನ ವರಿಕೆಯಾಗಿದೆ. ನನ್ನ ಮಾತಿನಲ್ಲಿ ನಿನಗೆ ವಿಶ್ವಾಸವಿದ್ದರೆ ನಿಶ್ಚಿಂತಳಾಗಿ ನಿನ್ನ ದೇವರು ದಿಂಡರುಗಳಲ್ಲಿ ಮಗ್ನಳಾಗಿ ಕಾಲಕಳೆ.'

---

# ಮೋಹನರಾಯ.

ಶಿಕ್ಷಣ ಮಂತ್ರಿ ಮೋಹನರಾಯನ ಪರಿಚಯವೀಗಲೇ ತಕ್ಕ ಮಟ್ಟಿಗೆ ಆಗಿದೆ. ಅದೂ ಒಬ್ಬ ಶಿಕ್ಷಣಪ್ರೇಮೀ ಮಂತ್ರಿಯೊಬ್ಬನೆಂದು. ನಮ್ಮ ಕತೆಗೆ ಇನ್ನೂ ಸ್ವಲ್ಪ ಪರಿಚಯ ಅಗತ್ಯವಿದ್ದುದರಿಂದ ಇಲ್ಲಿ ಅವಲೋಕಿಸಬಹುದು.

ಮೋಹನರಾಯ ಉಚ್ಚ ಪದವೀಧರ. ಗಾಂಧೀಜೀಯವರ ಸವಿನಯ ಕಾಯಿದೇ ಭಂಗದ ಚಳವಳಿಯಕ್ಕೆ ನೌಕರಿ-ಚಾಕರಿಗಳನ್ನೆಲ್ಲ ಬಿಸುಟು ಧುಮ್ಮಿ ಕ್ಕಿದ. ಹತ್ತು ಹದಿನೈದು ವರುಷ ಕಾಂಗ್ರೆಸ್ಸಿನ ಸೇವೆಯನ್ನು ಒಮ್ಮನಸ್ಸಿ ನಿಂದ ಮಾಡಿದನು. ಅದರಲ್ಲವೆಷ್ಟೋ ತ್ಯಾಗ ಮಾಡಬೇಕಾಯಿತು. ರಾಷ್ಟ್ರ ದೆದುರು ಸ್ವಾರ್ಥಕ್ಕೇನು ಬೆಲೆ? ಬ್ರಿಟಿಶ ಸರಕಾರದ ಆತಿಥ್ಯ ಸ್ವೀಕರಿಸುತ್ತ ಲಿದ್ದಾಗಲೇ ಪತ್ನಿ ತೀರಿದಳು. ಕೊನೆಗಾಲದಲ್ಲಿ ಪತ್ನಿಯ ಮೋರೆ ನೋಡಲು ಬಿಡುಗಡೆ ಹೊಂದಿ ಅಂತ್ಯವಿಧಿ ಪೂರಯಿಸುತ್ತಲೇ ಮತ್ತೆ ತಾನೇ ಹೋಗಿ ಸರಕಾರದ ವಶನಾದ. ಆ ಸಮಯದಲ್ಲಿ ಮತ್ತೆ ಮದುವೆಯಾಗುವ ಸೂಚನೆ ಗಳೆಷ್ಟೋ ಬಂದುವು. 'ದೇಶಸೇವೆ ಸಂಪೂರ್ಣವಾಗಿ ಸ್ವೀಕರಿಸಬೇಕೆಂದೇ ಪರಮಾತ್ಮನಿಂತಹ ಸಂಧಿ ಒದಗಿಸಿ ಕೊಟ್ಟಿರಲು ಮತ್ತೆ ಬಂಧನದಲ್ಲೇಕೆ ಬೀಳಲಿ'ಎಂದು ಕಡೆಗಣಿಸಿದನು. ಮಕ್ಕಳೂ ಇರಲಿಲ್ಲ. ತಂದೆ-ತಾಯಿಗಳು ಮೊದಲೇ ತೀರಿ ಹೋಗಿದ್ದರು. ರಾಷ್ಟ್ರಸೇವೆಗೆಂದೇ ತನ್ನ ಜೀವನ ಮೀಸ ಲಾಗಿರಿಸಿದ್ದನು. ರಾಷ್ಟ್ರಸೇವಾಪರೀಕ್ಷೆಯಲ್ಲಿ ಅನೇಕ ಸಲ ವರೆಗೆ ಹತ್ತಿದ್ದನು. ಕಠಿಣತಮ ಪರೀಕ್ಷೆಗಳಲ್ಲಿ ಕೂಡಾ ಯಶಸ್ವಿಯಾಗಿ ಇಳಿದಿದ್ದನು. ತನು ಮನ ಧನಗಳನ್ನು ರಾಷ್ಟ್ರಕ್ಕೇ ಅರ್ಪಿಸಿ ರಾಷ್ಟ್ರವೇ ತಾನು, ತಾನೇ ರಾಷ್ಟ್ರವೆನ್ನುವಷ್ಟು ತನ್ಮಯತೆಯಿಂದ ರಾಷ್ಟ್ರಸೇವೆ ಕೈಕೊಂಡು ಪೂರಯಿಸುತ್ತಲಿದ್ದನು.

ಮೋಹನರಾಯನಿಗೀಗ ನಾಲ್ವತ್ತು ವರುಷ. ಭಾರತ ಸ್ವಾತಂತ್ರ್ಯಕ್ಕೆ ಬದ್ಧ ಕಂಕಣನಾಗಿದ್ದರು ಆವನ ಮನಸ್ಸಿನಲ್ಲಿ ಮದುವೆಯ ಒಂದೇ ಒಂದು

ವಿಚಾರ ಸುಳಿಯುತ್ತಲಿರಲಿಲ್ಲ. ಅನೇಕ ಸಾವಿರಾರು ಜನತೆಯ ಸತತ ಪ್ರಯತ್ನದ ಫಲವಾಗಿ ಭಾರತಹ ಪಾರತಂತ್ರ್ಯ ಹರಿಯಿತು. ಭಾರತಾಂಬೆ ಸ್ವತಂತ್ರಳಾದಳು. ಅಂತಹ ಆ ಸುದಿನ ಕಣ್ಣಾರೆ ನೋಡಲು ದೊರಕಿದ ನಾವೇ ಧನ್ಯರು. ಅಂದು ಭಾರತದ ಪ್ರತಿವ್ಯಕ್ತಿ ಹರುಷದಿಂದ ಹಾರಾಡಿತು. ಭಾರತ ಸ್ವತಂತ್ರವಾದಷ್ಟಕ್ಕೆ ಮುಂದಾಳುಗಳ ಕಾರ್ಯ ಪೂರಯಿಸಲಿಲ್ಲ. ಗಾಂಧೀಜೀಯವರ ಕನಸಿನ ರಾಮರಾಜ್ಯವನ್ನು ನನಸಾಗಿ ಮಾಡುವ ಅದ್ಭುತವಾದ ಕಾರ್ಯಕ್ಕೆ ಟೊಂಕ ಕಟ್ಟಬೇಕಾಯಿತು. ಕಾಂಗ್ರೆಸ್ಸಿನ ಮಂತ್ರಿಮಂಡಲಗಳೇರ್ಪಟ್ಟುವು. ಸ್ವಾತಂತ್ರ್ಯಯುದ್ಧಕ್ಕಾಗಿ ಕಾದಾಡಿದ ಆ ಮಹಾವೀರರು ಮಂತ್ರಿಮಂಡಲಗಳ ಮುಖಾಂತರವಾಗಿ ರಾಷ್ಟ್ರದುನ್ನತಿಗೆ ಯತ್ನಿಸಬೇಕಾಯಿತು. ಮೋಹನರಾಯನಿಗೂ ಅಂಥ ಒಂದು ಪದವಿ ದೊರಕಿತು. ಸುಶಿಕ್ಷಿತನಿದ್ದು ಶಿಕ್ಷಣಪ್ರೇಮಿಯಾಗಿದ್ದ ಮೂಲಕ ಶಿಕ್ಷಣ ಮಂತ್ರಿಯ ಸ್ಥಳವನ್ನೇ ಸ್ವೀಕರಿಸಿದ. ಜನತೆಯನ್ನು ಸುಶಿಕ್ಷಿತ ಸುಸಂಸ್ಕೃತರನ್ನಾಗಿ ಮಾಡಲು ಯತ್ನಿಸಲಾರಂಭಿಸಿದ.

ಮಂತ್ರಿಪದವಿ ಸ್ವೀಕರಿಸಿದ ಮೇಲೆ ಮೋಹನರಾಯನಿಗೆ ತನ್ನದೆಂಬೊಂದು ಮನೆಯಿಲ್ಲವಲ್ಲ! ಎಂಬ ಭಾವ ಮೇಲೆ ಮೇಲೆ ಬರಲಾರಂಭಿಸಿತು. ದಿನದ ಅನೇಕ ಕೆಲಸಗಳಲ್ಲಿ ಮನ ತೊಂದರೆಗೀಡಾಗಿ ಮನೆಯೆಂಬದೊಂದು ಸ್ಥಳವಿದ್ದು, ಆ ಮನೆಯಲ್ಲಿ ತನ್ನದೆಂಬೊಂದು ವ್ಯಕ್ತಿಯಿದ್ದರೆ ಮನಕ್ಕೆ ದಿನದ ದುಃಕ್ಕಗಳನ್ನು ಮರೆಯಲನುವಾಗುವದು. ತನ್ನ ಪ್ರೇಮಳ ವರ್ತನೆಯಿಂನ ಯಿಂದ ದಿನದ ತೊಂದರೆಗಳನ್ನೆಲ್ಲ ನಿವಾರಿಸುವಂತಹ ವ್ಯಕ್ತಿಯೊಂದಿದ್ದರೆ ಒಳಿತೆಂಬ ವಿಚಾರ ಮತ್ತೆ ಮತ್ತೆ ಬರಲಾರಂಭಿಸಿತು. 'ಸಾ ಭಾರ್ಯಾಯತ್ರ ನಿರ್ವೃತಿಃ' ಎಂದಂತೆ ನಿರ್ವೃತಿ ಸುಖ-ಶಾಂತಿಗಳನ್ನು ಕೊಡುವಂತಹ ಭಾರ್ಯೆಯೊಬ್ಬಳನ್ನು ಕಾಣಬೇಕೆಂದು ಯೋಚಿಸಲಾರಂಭಿಸಿದನು. ಮೋಹನರಾಯನಂತಹ ಮದುವೆಯಾಗಬೇಕೆಂದರೆ ಅದೆಷ್ಟೋ ಹೆಣ್ಣು ಬರಬಹುದಿತು; ಆದರೆ ತನಗೆ ಸರ್ವವಿಧದಿಂದಲೂ ಅನುರೂಪಳಾದವಳು ತನ್ನ ಭುಜಕ್ಕೆ ಭುಜವಾನಿಸಿ ರಾಷ್ಟ್ರಕಾರ್ಯ ಕೈಕೊಳ್ಳಬಹುದಾದ ಸಂಗತಿಯನ್ನರಸತೊಡಗಿದ.

ಇಂತಹ ಸನ್ನಿವೇಶದಲ್ಲಿ ಮೋಹನರಾಯನಿಗೆ ಗಂಗೂನ ಪರಿಚಯವಾಯಿತು. ಯಾವ ಭಾವನೆಗಳೂ ಮೂಡದಿರುವಾಗಲೇ ಅವಳೊಬ್ಬ ಗತಭರ್ತೃಕೆಯೆಂಬ ಸಂಗತಿ ತಿಳಿಯಿತು. ಗಂಗೂ ಯೋಗ್ಯ ಸಂಗಾತಿಯಾಗುವ

ಳೆಂಬ ಮನವರಿಕೆಯಾಯಿತು. ತನ್ನ ಸಹವಾಸದಲ್ಲವಳಿನ್ನೂ ಹೆಚ್ಚು ಕಾರ್ಯ ಮಾಡಬಹುದೆಂದಪೇಕ್ಷಿಸಿದ. ವಿಧವೆಯನ್ನು ಮದುವೆಯಾಗುವ ಬಗ್ಗೆಯೂ ಆಕ್ಷೇಪಣೆಯಿರಲಿಲ್ಲ. ಆದರೆ ಗಂಗೂನ ವಿಚಾರ-ಗಂಗೂನ ವಿಚಾರಗಳನ್ನರಿತವರಾರು? ಅಂತೆಯೇ ಗಂಗೂನ ಈ ವಿಚಾರಗಳನ್ನರಿಯಲು ಯತ್ನಿಸಬೇಕಾಯಿತು. ಕೃಷ್ಣರಾಯನೊಮ್ಮೆ ಮುಂಬಯಿಗೆ ಬಂದಾಗ ಈ ವಿಷಯವಾಗಿ ಪ್ರಸ್ತಾಪಿಸಿದ. ಕೃಷ್ಣರಾಯ ಯತ್ನಿಸುವದಾಗಿ ಆಶ್ವಾಸನೆಯಿತ್ತ.

'ಗಂಗೂ ಪುನರ್ವಿವಾಹ ಮಾಡಿಕೊಳ್ಳಲು ಒಪ್ಪುವಳೆ?' ಮುಂಬಯಿಯಿಂದ ಮರಳಿದ ಮೇಲೆ ಕೃಷ್ಣರಾಯನೊಮ್ಮೆ ಮನೋರಮೆಯನ್ನು ಕೇಳಿದ. ಅದೇ ಸಲ ಗಂಗೂನ ಮ್ಯಾಟ್ರಿಕ್ ಪರೀಕ್ಷೆ ಮುಗಿದಿದ್ದಿತು. ಅವರ ಶಾಲೆಯ ಪರವಾಗಿ ಸಾಕ್ಷರತೆಯ ಕಾರ್ಯ ಕೈಕೊಂಡಾಗಿನಿಂದ ಬಡವರ ಜೀವನದೊಂದಿಗೆ ಸಮರಸವಾಗುವದು, ಅವರ ಕಷ್ಟಮಯ ಜೀವನದಲ್ಲಿ ಅಲ್ಪವಾದರೂ ಮಾಧುರ್ಯ ಬೆರೆಸುವದು, ಅವಳ ಸ್ವಭಾವವೇ ಆಗಿದ್ದಿತು. ತನ್ನ ಮಿತ್ರೆಯರೊಡನೆ ಆಗಾಗ್ಗೆ ಬಡವರ ಗುಡಿಸಲಿಗೆ ಹೋಗುತ್ತಲಿದ್ದಳು. ಬಿಡುವಾಗಿದಿತಾದುದರಿಂದ ಇನ್ನೂ ಹೆಚ್ಚು ಅನುಕೂಲತೆಯುಂಟಾಗಿದ್ದಿತು. ಮುಂದೇನು ಮಾಡಬೇಕೆಂಬ ಪ್ರಶ್ನೆ ಸದ್ಯ ಇರಲಿಲ್ಲ.

'ನಮ್ಮ ಚರ್ಚೆಯಲ್ಲಿ ಈ ವಿಷಯ ಹಲವು ಸಲ ಬಂದಿದೆ. 'ಮತ್ತೆ ಮದುವೆಯಾಗ ಬಯಸುವವರು ಅವಶ್ಯವಾಗಿ ಆಗಬಹುದು. ಧರ್ಮಾಧರ್ಮದ ಪ್ರಶ್ನೆ ಬೇಕಿಲ್ಲ. ಹಾಗಾಗಬಹುದೆಂದು ಗಾಂಧೀಜಿಯವರು ತಮ್ಮ ಸಮ್ಮತಿ ಎಷ್ಟೋ ಸಲ ವ್ಯಕ್ತಪಡಿಸಿದ್ದಾರೆ.' ಮುಂತಾಗಿ ಸ್ಪಷ್ಟವಾಗಿ ಹೇಳಿದ್ದಾಳೆ; ಆದರೆ ಸ್ವಂತದ ಬಗ್ಗೆ ಚಕಾರ ಶಬ್ದವನ್ನೂ ಎತ್ತಿಲ್ಲ ಆಕೆಯ ಮನ ಬಹಳ ಬಲಿಷ್ಠವಾದದ್ದು.'

'ಅಹುದು. ಈ ಬಗ್ಗೆ ಗಂಗೂನನ್ನು ಎಷ್ಟು ಹೊಗಳಿದರೂ ಸ್ವಲ್ಪೇ ಇದೆ. ಬಹಳ ಸುಸಂಸ್ಕೃತವಾದ ಮನಸ್ಸು.'

'ಆದರೆ ಈ ಪ್ರಸ್ತಾಪ ಈಗ ಹೊರಡಲು ಕಾರಣವೇನು?'

'ನಮ್ಮ ಶಿಕ್ಷಣಮಂತ್ರಿ ಮೋಹನರಾಯರು ಮತ್ತೆ ಮದುವೆಯಾಗಲಿದ್ದಾರೆ. ಗಂಗೂನ ಗುಣಗಳಿಗೆ ಮೋಹಿತರಾಗಿದ್ದರೆ. ಗಂಗೂ ಒಪ್ಪುವದಾದರೆ ಒಳಿತಾಗುವದೆಂದು ಅವರ ಮತ.'

'ಗಂಗೂ ವಿಧವೆಯೆಂಬದವರಿಗೆ ತಿಳಿದಿದೆಯೆ?'

'ಅಹುದು. ತಿಳಿದಿದೆ. ಆ ಬಗ್ಗೆ ಅವರ್ಕ್ಷಆಕ್ಷೇಪಣೆಯೇನೂ ಇಲ್ಲ. ಸಮಾಜ ಸುಧಾರಣೆಯ ದೃಷ್ಟಿಯಿಂದ ಇನ್ನೂ ಒಳ್ಳೇದೇ ಎಂದು ಅವರ ಮತವಿದೆ.'

'ಹಾಗಾದರೆ ಬಹಳ ಒಳಿತಾಗುವದು; ಆದರೆ ಗಂಗೂನ ವಿಚಾರವೇನೂ ತಿಳಿಯುವಂತಿಲ್ಲ. ಆಕೆಯ ದೃಷ್ಟಿ ವಿಶಾಲವಾಗುತ್ತಲಿದೆ. ದರಿದ್ರ ಜನರೇ ತನ್ನ ಬಂಧು-ಬಳಗವೆಂದು ಭಾವಿಸಿರುವಳು. ಅವರ ಸೇವೆಯೇ ತನ್ನ ಇತಿ ಕರ್ತವ್ಯವೆಂದು ಅನ್ನುತ್ತಲಿರುವಳು. ಅಂತಹ ಅನುಕೂಲತೆಯನ್ನು ಕಲ್ಪಿಸಿ ಕೊಂಡು ಅಲ್ಲಿಯೇ ತನ್ನ ಆಯುವ್ಯಯಿಸಬೇಕೆನ್ನುತ್ತಾಳೆ.'

'ಮೋಹನರಾಯರನ್ನು ಮದುವೆಯಾಗುವದಾದರೆ ಗಂಗೂನ ಮಹತ್ಕಾರ್ಯಕ್ಕೆ ಇನ್ನೂ ಅನುಕೂಲತೆಯೇ ಅಲ್ಲವೆ?'

'ಅಹುದು; ಆದರೆ ಇದಕ್ಕೆ ಗಂಗೂನ ವಿಚಾರಗಳನ್ನೇ ತಿಳಿಯಬೇಕು.'

'ಹಾಗಾದರೆ ನೀನೇ ಕೆಲಸ ಮಾಡುವೆಯಾ?'

'ಮಾಡಬಹುದು; ಆದರೆ ಮಾಪನವರ ಸಮ್ಮತಿಯ ಹೊರತು ಗಂಗೂ ಎಂದೂ ಒಪ್ಪಲಿಕ್ಕಿಲ್ಲ.'

'ಚಿಕ್ಕಪ್ಪನ ಒಪ್ಪಿಗೆಯೇ? ಇದೀಗ ಕಠಿಣವಾದ ಕೆಲಸ. ಚಿಕ್ಕಪ್ಪ ಸುವಿಚಾರಿಯಿರುವನು. ಆದರೂ ಪುನರ್ವಿವಾಹದಂತಹ ಕೆಲಸಕ್ಕೆ ಸಮ್ಮತಿ ಕೊಡುವನೋ ಹೇಗೆ ಎಂಬದು ತಿಳಿಯುವಂತಿಲ್ಲ.'

ಅವರ ಸಮ್ಮತಿಯಿಲ್ಲವಾದತೆ ಗಂಗೂ ಎಂದೂ ಸಮ್ಮತಿಸಲಾರಳು.'

'ಆಗಲಿ. ಗಂಗೂನನ್ನು ಕೇಳು. ಆಕೆಯೊಪ್ಪಿದರೆ ಹೇಗಾದರೂ ಮಾಡಿ ಚಿಕ್ಕಪ್ಪನನ್ನೊಪ್ಪಿಸುವೆ.'

'ಅದಕ್ಕಿಂತಲೂ ಹೀಗೆ ಮಾಡಿ. ಮೊದಲು ಮಾವನವರನ್ನೊಪ್ಪಿಸಿ ಅವರಿಂದಲೇ ಗಂಗೂನಿಗೆ ಹೇಳಿಸಿರಿ. ಅಂದರೇನಾದರೂ ಗಂಗೂನ ಮನಸ್ಸಿನ ಮೇಲೆ ಪರಿಣಾಮವಾಗಿ ಆಕೆಯೂ ಒಪ್ಪಬಹುದು. ಹಾಗೆಯೇ ಸ್ವಾರ್ಥದಾಸೆಯಿಂದ ಒಪ್ಪುವ ಕ್ಷುದ್ರ ಪ್ರಕೃತಿ ಗಂಗೂನದಲ್ಲ.'

'ಇದೀಗ ಕೊಂಚ ಬಿಗಿಯಾದ ಕೆಲಸವೇ ಇದೆ. ಆಗಲಿ. ಹೀಗೇ ಮಾಡೋಣ. ಇದರಿಂದ ಗಂಗೂನ ಕರ್ತೃತ್ವ ಶಕ್ತಿಗೊಂದು ಅನುರೂಪವೇ ಆದ ಕ್ಷೇತ್ರ ಸಿಕ್ಕು ಗಂಗೂನ ಕೀರ್ತಿ ಭಾರತದಲ್ಲೆಲ್ಲ ಪಸರಿಸದಿರದು.'

'ಹಾಗೇ ಮಾಡಿರಿ. ಅದನ್ನುಳಿದು ಈ ಕಾರ್ಯ ಸಾಧಿಸಲಾರದು. ತಂದೆ ತಾನಾಗಿ ಹೇಳಿದರೆ ಗಂಗೂ ಆಕ್ಷೇಪಿಸಲಿಕ್ಕಿಲ್ಲ.'

ಕೃಷ್ಣರಾಯ ಒಂದು ಬಲವಾದ ಹೊಣೆ ಹೊತ್ತನು. ಪುನರ್ವಿವಾಹ ಸುಧಾರಕರ ಸಮಾಜದಲ್ಲಿ ಮನ್ನಣೆ ಪಡೆದ ವಿಷಯವೇನೋ ಸರಿ. ಅನೇಕ ಸುಧಾರಕರೆನ್ನಿಸಿಕೊಳ್ಳುವವರೂ ವಾದಿಸುವ ಭರದಲ್ಲಿ ಈ ಪುನರ್ವಿವಾಹವು ಅವಶ್ಯವೆಂದು ಒತ್ತಿ ಹೇಳಿದರೂ ಪ್ರತ್ಯಕ್ಷವಾಗಿ ಆಚರಿಸಲು ಹಿಂದೆ ಮುಂದೆ ನೋಡುತ್ತಲಿರುವಾಗ ಭೀಮರಾಯರಂತಹ ರೂಢವಾದ ಧರ್ಮದಲ್ಲಿ ನಿಷ್ಠೆಯುಳ್ಳವರು, ಪುನರ್ವಿವಾಹಕ್ಕೆ ಒಪ್ಪುವದೆಂದರೇನು? ಅಷ್ಟೆಲ್ಲಕ್ಕೂ ಸಮ್ಮತಿಯಿತ್ತುದಾದರೂ ಧರ್ಮಕ್ಕೆ ಒಪ್ಪುತ್ತದೆಂತಲ್ಲ; ಆದರೆ ಗಂಗೂನಲ್ಲಿದ್ದ ಆ ಪರಿಶುದ್ಧವಾದ ಪ್ರೇಮದ ಮೂಲಕವಾಗಿ. ಭೀಮರಾಯರ ಧರ್ಮನಿಷ್ಠೆ ಕೃಷ್ಣರಾಯನಿಗೆ ಚನ್ನಾಗಿ ಗೊತ್ತು; ಆದರೂ ಅವರ ಪ್ರೇಮಳ ಹೃದಯವನ್ನೂ ತಿಳಿದುದರಿಂದ ಆ ಪ್ರೇಮದ ಲಾಭ ಪಡೆದುಕೊಂಡು ಗಂಗೂನನ್ನು ಒಂದು ಹಾದಿಗೆ ಹಚ್ಚಲು ಸಮರ್ಥನಾದ. ಗಂಗೂನಲ್ಲಿ ಸುಪ್ತರೂಪದಲ್ಲಿದ್ದ ಕರ್ತೃತ್ವಶಕ್ತಿಗೊಂದು ವಿಕಾಸ ದೊರೆತು ಎಲ್ಲರೂ ಅಚ್ಚರಿಪಡುವಂತಹ ಕಾರ್ಯಕ್ಕೈಗೂಡಿಸಲನುವಾದ. ಗಂಗೂನ ಈ ಮಹತ್ಕಾರ್ಯ ಭೀಮರಾಯರನ್ನು ಬೆರಗುಗೊಳಿಸಿದ್ದಿತು. ಗಂಗೂನ ಬಗ್ಗೆ ಅವರಲ್ಲಿ ಹೆಮ್ಮೆಯೂ ಉಂಟಾಗಿದ್ದಿತು; ಆದರೆ ಇಷ್ಟರಿಂದಲೇ ಗಂಗೂನ ಪುನರ್ವಿವಾಹಕ್ಕೆ ಭೀಮರಾಯರು ಒಪ್ಪುವರೆಂಬ ಭರವಸೆಯಿರಲಿಲ್ಲ. ಶಿಕ್ಷಣ ಸಮಾಜ ಸೇವೆಗಳು ಧರ್ಮದಿಂದ ತೀರಾ ಹೊರಗಿರಲಿಲ್ಲ; ಆದರೆ ಪುನರ್ವಿವಾಹ.—

ಕೃಷ್ಣರಾಯನಾದರೂ ಭೀಮರಾಯರ ಸಮ್ಮತಿಯನ್ನಿಂತಹ ಕಾರ್ಯಕ್ಕೆ ದೊರೆಕಿಸಲು ಯತ್ನಿಸುತ್ತಲಿರಲಿಲ್ಲ; ಆದರೆ ಅಚಾನಕವಾಗಿ ಮೋಹನರಾಯನಂತಹರ ಸಂಬಂಧ ಅವನನ್ನು ಒತ್ತಾಯ ಪಡಿಸಿತು. ಮೋಹನರಾಯನೆಂದರೆ ಲಕ್ಷಕ್ಕೊಬ್ಬನಂತೆ ಸಿಕ್ಕಬಹುದಾದ ವ್ಯಕ್ತಿ. ಅಂತಹ ಜೊತೆಗಾರನಾಗಿ ಗಂಗೂನಿಗೆ ದೊರೆತರೆ ನಿಜವಾಗಿಯೂ ಗಂಗೂನ ಜೀವನವೇ ಸಾರ್ಥಕವಾಗುವಂತಿದ್ದಿತು. ಇಬ್ಬರೂ ಜೊತೆಯಾಗಿ ದುಡಿದಲ್ಲಿ ಒಬ್ಬರೇ ಮಾಡಬಹುದಾದ ಕಾರ್ಯಕ್ಕಿಂತಲೂ ಹೆಚ್ಚಾಗಿಯೇ ಕಾರ್ಯ ಸಫಲವಾಗಬಹುದಿದ್ದಿತು. ಮೋಹನರಾಯನೊಡನೆ ಗಂಗೂನ ಜೊತೆಗೂಡಿಸಲು ಕೃಷ್ಣರಾಯ ಒಳ್ಳೆ ಆತುರನಾಗಿದ್ದನು. ತಂದೆಯ ಸಮ್ಮತಿಯಿದೆಯೆಂದು ತಿಳಿದರೆ ಗಂಗೂ ಕೂಡ ಸಮ್ಮತಿಸಬಹುದೆಂಬ ಆಶೆಯವನನ್ನು ಈ ಕಾರ್ಯಕ್ಕೆ ಪ್ರೇರಿಸಿದ್ದಿತು. ಭೀಮರಾಯರನ್ನೊಪ್ಪಿಸುವ ಹಂಚಿಕೆ ಹುಡುಕುವುದರಲ್ಲಿಯೇ ಮಗ್ನನಾದ.

# ಸನ್ಮತಿ.

ಭೀಮರಾಯರು ತೀರಾ ಬದಲಾಗಿ ಹೋಗಿದ್ದರು. ಅವರ ಸಮಯ ವೆಲ್ಲ ಶಾಸ್ತ್ರಾವಲೋಕನೆಯಲ್ಲಿಯೇ ಕಳೆಯುತ್ತಲಿದ್ದಿತು. ಹಿಂದಿನ ಅವರ ಆಚಾರ-ವಿಚಾರಗಳಲ್ಲೂ ಬಹಳ ಮಾರ್ಪಾಟು ಕಾಣುತ್ತಲಿದ್ದಿತು. ಆಗ ಲಿದ್ದ ನಿತ್ಯಕ್ರಿಯೆ ಆಗಲೇಬೇಕೆಂಬ ಆಗ್ರಹವಿಲ್ಲ, ಆದಲ್ಲಿ ಆಕ್ಷೇಪಣೆಯಿಲ್ಲ. ಶಾಸ್ತ್ರಾವಲೋಕನದಿಂದ ಸತ್ಯ ಮೆಲ್ಲನೇ ತನ್ನ ಮಾಯೆ ಕಳಚಹತ್ತಿತು. ಆ ಮುಸುಕು ಮರೆಯಾದಂತೆ ಅವರ ಮನ ನಿಶ್ಚಿಂತವಾಗಹತ್ತಿತು. ಧರ್ಮ ಕರ್ಮಗಳ ನಿಜವಾದ ರೂಪರೇಷೆ ಮೂಡಹತ್ತಿತು. ಊರಿನಲ್ಲಿದ್ದರೂ ಇಲ್ಲ ದಂತಿದ್ದರು. ಮುನ್ನಿನ ಆ ದಾನ-ಧರ್ಮಗಳಿಗೆ ಅದರ ಮನೆಯಲ್ಲಿ ಅಷ್ಟು ಪ್ರಮುಖ ಸ್ಥಾನವಿರಲಿಲ್ಲ. ಮುನ್ನಿನಂತೆಯೇ ದಾನಾದಿಗಳು ನಡೆಯುತ್ತ ಲಿದ್ದರೂ ಅದರ ಹಿಂದೆ ಅಡಗಿದ್ದ ಆ ಪುಣ್ಯಾಪೇಕ್ಷೆ ಮಾಯವಾಗಲು, ಅದ ರಲ್ಲಿನ ಆಧ್ಯತೆಯೂ ಅಡಗುವುದು ಸ್ವಾಭಾವಿಕ. ಮೊದಲೇ ಮಿದುಮನದ ಮನುಷ್ಯ. ಶಾಸ್ತ್ರವೇದಾಂತಗಳ ಜ್ಞಾನ ಅವರನ್ನು ಇನ್ನೂ ಹಣ್ಣಾಗಿಸಿತು. ಪಾಪ-ಪುಣ್ಯ, ಧರ್ಮಾಧರ್ಮ ಮುಂತಾದುವುಗಳ ಜಂಜಡವೇ ತೊಲ ಗಿದ್ದಿತು.

ಪತಿಯಲ್ಲಿನ ಈ ಮಹತ್ತ್ವವಾದ ಮಾರ್ಪಾಟಿನ ಸುಂಕ ಪಾರ್ವತೀ ಬಾಯಿಗೂ ತಾಗದಿರಲಿಲ್ಲ. ತಮ್ಮ ಹಿಂದಿನ ಆ ನಂಬುಗೆ ತಪ್ಪಾಗಿದ್ದಿತೇನೊ ಎಂಬ ಶಂಕೆ ತಲೆದೋರಹತ್ತಿತು. ಪತಿಯು ಶಾಸ್ತ್ರಾವಲೋಕನೆ ಮಾಡ ಹತ್ತಲು, ನಿಜವಾದ ಅರಿವನ್ನು ಅರಿವ ಕುತೂಹಲ ಅವಳಲ್ಲಿಯೂ ಉಂಟಾ ಯಿತು. ಅನೇಕ ಸಲ ಪತಿಯೊಡನೆ ಚರ್ಚಿಮಾಡುತ್ತಲಿದ್ದಳು. ಆಕೆಯ ಲ್ಲಿಯೂ ಅದೆಷ್ಟೋ ಮಾರ್ಪಾಟು ಕಾಣಹತ್ತಿತು. ಬಾಹ್ಯ ಆಚರಣೆಗಿಂತಲೂ ಅಂತರಿನದರಿವು ಮಿಗಿಲೆಂದು ತಿಳಿದು ಬರಹತ್ತಿತು. ಮನ ಸುಸಂಸ್ಕೃತ ವಾಗಹತ್ತಿತು. ಈ ಅಲ್ಪಾವಧಿಯಲ್ಲಿ ಅದೆಷ್ಟೋ ಬದಲು ಕಾಣಹತ್ತಿತು. ಗಂಗೂನ ಬಗ್ಗೆ ಇದ್ದ ಮುನ್ನಿನ ದ್ವೇಷ ಮರೆಯಾಗಹತ್ತಿತು. ಅವರವರ ಕರ್ಮಗಳಿಗವರೇ ಹೊಣೆಯೆಂಬ ತಿಳಿವು ಬರಲು ಆ ದ್ವೇಷಬುದ್ಧಿ ಸಂಪೂರ್ಣ ಮರೆಯಾಯಿತು; ಮತ್ತು ಗಂಗು ಕೈಕೊಂಡ ಕಾರ್ಯದಲ್ಲಿ ಅಧರ್ಮವೇನೂ ಇರಲಿಲ್ಲವೆಂಬ ಭಾವನೆಯೂ ಉಂಟಾಗಹತ್ತಿತು. ರೂಢಿಯಿಂದ ಬಂದು

ದೆಲ್ಲ ಶಾಸ್ತ್ರಶುದ್ಧವಾದ ಧರ್ಮವಲ್ಲೆಂಬರಿಕೆ ಪಾರ್ವತೀಬಾಯಿಯಲ್ಲಿನ ಮಾತೃತ್ವ ಹುಟ್ಟಿಸಿತು. ಒಬ್ಬಳೇ ಒಬ್ಬಮಗಳು ಸುಖಿಯಾಗಿರಬೇಕೆಂಬ ಆಶೆ ಪ್ರಬಲವಾಗಹತ್ತಿತು.

ಕೃಷ್ಣರಾಯನಿಗೆ ಈ ಮಾರ್ಪಾಟು ತಿಳಿದಿರಲಿಲ್ಲ. ಅದು ತಿಳಿದುದಾಗಿದ್ದರೆ ಅವನೆಂದೂ ಅಷ್ಟು ಯೋಚನೆಗೊಳಗಾಗುತ್ತಿರಲಿಲ್ಲ. ಕೊನೆಗೊಮ್ಮೆ ನಿಶ್ಚಯಮಾಡಿ ಭೀಮರಾಯರನ್ನು ಕಂಡೇ ಬರಬೇಕೆಂದು ಹೊರಟನು.

ಅಕಸ್ಮಾತ್ತಾಗಿ ಕೃಷ್ಣರಾಯ ಬಂದುದನ್ನು ಕಂಡು ಪತಿ-ಪತ್ನಿಗಳಿಬ್ಬರಿಗೂ ಹರುಷವಾಯಿತು. ಇಬ್ಬರೂ ಕೃಷ್ಣರಾಯನನ್ನು ಸ್ವಾಗತಿಸಿದರು. ಔಪಚಾರಿಕ ವಿಧಿಗಳೆಲ್ಲ ನಡೆದುವು.

'ಏನಪ್ಪ ಕೃಷ್ಣ, ಒಮ್ಮೆಲೆ ನಡುವೆಯೇ ಹೊರಟು ಬಂದೆ?" ಭೀಮರಾಯರು ಕೇಳಿದರು. 'ಏನೋ ನಿನ್ನನ್ನು ಕಾಣಬೇಕೆನಿಸಿತು. ಬಂದೆ.' ಕೃಷ್ಣರಾಯ ಒರಿಯ ಹಾರಿಕೆಯ ಉತ್ತರವೊಂದನ್ನು ಕೊಟ್ಟನು.

ಜೀವನದ ವೈಚಿತ್ರ್ಯಗಳಲ್ಲಿ ಇದೂ ಒಂದಾಗಿದೆ. ನೀವು ಕೊಡುವ ಉತ್ತರ ಸುಳ್ಳೆಂದು ನಮಗಂತೂ ಗೊತ್ತೇ ಇರುತ್ತದೆ. ಹಾಗೆಯೇ ಆ ಉತ್ತರ ಪಡೆದವರಿಗಾದರೂ ಸಮಾಧಾನವಾಗುತ್ತದೆಯೆ? ಅದೂ ಇಲ್ಲ; ಮತ್ತು ಅವರಿಗೆ ಸಮಾಧಾನವಾಗಿಲ್ಲವೆಂಬದು ನಮಗಾದರೂ ತಿಳಿದೇ ಇರುತ್ತದೆ; ಹಾಗು ಅವರನ್ನು ಸಮಾಧಾನಗೊಳಿಸಬೇಕೆಂದೇನೂ ನಾವು ಹಾಗೆ ಉತ್ತರ ಕೊಡುತ್ತಲಿರುವುದಿಲ್ಲ. ಹೀಗೆ ಏನೊಂದೂ ಕೆಲಸ ಸಾಧಿಸುವ ಅಪೇಕ್ಷೆಯಿಲ್ಲದೆ ನಾವು ವ್ಯವಹರಿಸುತ್ತೇವೆ; ಆದರೆ ಹುಚ್ಚರಲ್ಲ. ಇದೆಂಥ ಜಾಣ್ಮೆಯೋ ತಿಳಿಯದು.

ಕೃಷ್ಣರಾಯನುತ್ತರದ ಸ್ಥಿತಿಯೂ ಹೀಗೇ ಆಯಿತು. ಭೀಮರಾಯರಿಗಾಗಲಿ, ಪಾರ್ವತೀಬಾಯಿಗಾಗಲಿ ಸಮಾಧಾನವಾಗುವುದು ಶಕ್ಯವೇ ಇರಲಿಲ್ಲ. ಗಂಗು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಿದ್ದು ಪರೀಕ್ಷೆ ಮುಗಿದಿದ್ದಿತು. ಮುಂದಿನ ಆಕೆಯ ವಿಚಾರವೇ ಕೃಷ್ಣರಾಯನಾಗಮನದ ಕಾರಣವಿರಬೇಕೆಂದೂಹಿಸಿದರು. ಈ ಬಗ್ಗೆ ಭೀಮರಾಯರ ವಿಚಾರವೇನೂ ಇರಲಿಲ್ಲ. ಕೃಷ್ಣರಾಯ, ಗಂಗೂ ಇಬ್ಬರಿಗೂ ಸರಿಗಂಡ ದಾರಿ ಹಿಡಿಯಬಹುದೆಂದು ನಿಶ್ಚಿಂತರೇ ಆಗಿದ್ದರು. ಈ ಮೊದಲಾಗಿದ್ದರೆ ಪಾರ್ವತೀಬಾಯಿ ಬಹಳವಾಗಿ

ಕೋಪಿಸದಿರುತ್ತಲಿರಲಿಲ್ಲ. ಆದರೀಗ ವಾತಾವರಣ ತಿಳಿಯಾಗಿದ್ದಿತು; ಮತ್ತು ಗಂಗು ತನ್ನ ಮಗಳೆಂಬ ಭಾವ ಪ್ರಬಲವಾಗಿದ್ದಿತು; ಹಾಗು ಈಗ ಲೀಗ ಗಂಗೂನ ವರ್ತನೆಯ ಬಗ್ಗೆ ಆಗ್ರಹವೂ ಇರಲಿಲ್ಲ. ಅಂತೆಯೇ ಗಂಗು ತನ್ನ ಬಳಿಯಿರಬೇಕೆಂಬ ಬಯಕೆಯೊಂದು ಮೂಡಿದ್ದಿತು. ಪಾರ್ವತೀ ಬಾಯಿಯಾದರೂ ಕೃಷ್ಣರಾಯ ಬಂದುದು ಗಂಗೂನ ಭವಿಷ್ಯ ವಿಚಾರಕ್ಕೇನೇ ಎಂದೂಹಿಸಿದಳು; ಮತ್ತು ತನ್ನ ನಿರ್ಧರ ಗೊತ್ತುಪಡಿಸುವದರಲ್ಲಿ ತೊಡ ಗಿದಳು.

ಕೃಷ್ಣರಾಯ ಬಂದ ಉದ್ದೇಶವಾದರೂ ಅದೇ ಆಗಿದ್ದಿತು; ಆದರೆ ಅದೆಷ್ಟು ಅಂತರ! ಅವನು ಬಂದುದು ಗಂಗೂನ ಪುನರ್ವಿವಾಹದ ಸಮ್ಮತಿ ಪಡೆಯಲಿಕ್ಕೆಂದು. ಇಂತಹ ವಿಚಾರದ ಅಲ್ಪಾಂಶವಾದರೂ ಅವರ ಮನದಲ್ಲಿ ಬಂದಿರಲು ಸಾಧ್ಯವಿರಲಿಲ್ಲ. ಅವರು ತಮ್ಮ ದೃಷ್ಟಿಯನ್ನೆಷ್ಟು ವಿಸ್ತರಿಸಿದರೂ ಅದೆಷ್ಟು ದೂರ ತಾನೇ ಹೋದೀತು? ಬಹಳವಾದರೆ ಭಾವೀ ಶಿಕ್ಷಣ, ನೌಕರಿ ಇಷ್ಟರವರೆಗೆ ಮಾತ್ರ. ಇಷ್ಟು ದೂರವಾದಾ ವಿಷಯವವರ ದೃಷ್ಟಿಗೇನೇ ನಿಲುಕದಿರುವಾಗ ಸಮ್ಮತಿ ಸಿಕ್ಕುವುದು ಹೇಗೆ? ಅಂತೆಯೇ ಕೃಷ್ಣರಾಯ ಒಮ್ಮೆಲೇ ಮಾತೆತ್ತಲಿಲ್ಲ.

ಕೆಲ ಸಮಯ ಕಳೆಯುವಷ್ಟರಲ್ಲಿ ಆ ಇಬ್ಬರಲ್ಲೂ ಆದ ಮಾರ್ಪಾಟು ಕೃಷ್ಟರಾಯನನ್ನು ಆಚ್ಚರಿಗೊಳಿಸಿತು. ಭೀಮರಾಯರಲ್ಲಾದ ಬದಲು ಬಹಳ ವಾಗಿದ್ದರೂ ಅಷ್ಟು ಮಹತ್ವದ್ದಾಗಿ ತೋರಲಿಲ್ಲ. ಸುವಿಚಾರಿಯೂ ವಿವೇ ಕಿಯೂ ಆದವ ತನ್ನ ತಪ್ಪನ್ನು ತಿಳಿಯಲವಕಾಶ ಬೇಕಿಲ್ಲ. ತಪ್ಪು ತಿಳಿಯು ತ್ತಲೇ ಅದನ್ನು ಸುಧಾರಿಸಿಕೊಳ್ಳುವುದವನ ಸ್ವಭಾವ. ಅಂತೆಯೇ ಭೀಮ ರಾಯರಲ್ಲಿ ಆದ ಬದಲು ಯೋಗ್ಯವೂ ಅನುರೂಪವೂ ಆಗಿದ್ದಿತು; ಆದರೆ ಪಾರ್ವತೀಬಾಯಿಯಲ್ಲಿ ಅದೆಂತಹ ಮಾರ್ಪಾಟು! ರೂಢವಾದ ಧರ್ಮವೇ ಆಕೆಯ ಜೀವನವಾಗಿದ್ದಿತು; ಆದರೆ ಈಗದು ಮಾಯವಾಗಿದ್ದಿತು. ಆ ಪ್ರಬಲ ಭಾವ ಮರೆಯಾಗಲು, ಅದರ ಬಗ್ಗೆ ಇದ್ದ ಆಗ್ರಹವೂ ನಿಂತಿದ್ದಿತು. ಒಮ್ಮೆಲೆ ಇಷ್ಟು ಮಹತ್ತರವಾದ ಮಾರ್ಪಾಟು ಅಶಕ್ಯವೆಂದೇ ಸಾಮಾನ್ಯವಾಗಿ ಹೇಳಬಹುದು. ಇದರಿಂದ ಕೃಷ್ಟರಾಯನಿಗತೀವ ಆನಂದವಾಯಿತು. ತಾಯಿ ಮಗಳ ನಡುವಿನ ಆ ಮಹದಂತರ ಕಡಿಮೆಯಾದುದನ್ನರಿತು ಉಲ್ಲ ಸಿತನಾದನು. ಗಂಗೂನ ಪುನರ್ವಿವಾಹವಾಗಲಿ-ಆಗದಿರಲಿ, ಆಕೆಯ ಜೀವನ

ಸುಖಕರವಾಗುವುದೆಂದು ಆಶೆಯುದಿಸಿತು. ಇಷ್ಟಾದರೂ ಪುನರ್ವಿವಾಹಕ್ಕೆ ಅವರ ಸಮ್ಮತಿ ಸಿಕ್ಕುವುದೆಂಬ ಆಶೆಯಿರಲಿಲ್ಲ.

'ಚಿಕ್ಕಪ್ಪಾ, ನಾನು ಸುಮ್ಮನೇ ಬಂದಿಲ್ಲವೆಂದು ನೀನೂಹಿಸಿರಬಹುದು.' ಕೃಷ್ಣರಾಯ ಭೀಮರಾಯರೊಬ್ಬರೇ ಇರುವಾಗ ಕೇಳಿದ.

'ಅಹುದು. ಕೃಷ್ಣಣ್ಣಾ, ನೀನು ಗಂಗೂನ ಭವಿಷ್ಯವನ್ನು ವಿಚಾರಿಸಲೆಂದು ಬಂದಿರುವೆಯೆಂದು ನಾನು ಬಲ್ಲೆ; ಆದರೆ ಕೃಷ್ಣಣ್ಣಾ, ಈ ವಿಷಯದಲ್ಲಿ ನಮ್ಮ ಸಲಹೆ ತೀರಾ ಅನವಶ್ಯಕ. ಬರೀ ನಾನೇ ಏಕೆ, ನಿನ್ನ ಚಿಕ್ಕಮ್ಮನದೂ ಸಂಪೂರ್ಣವಾದ ಸಮ್ಮತಿಯಿದೆ.'

ಅಹುದು. ಚಿಕ್ಕಪ್ಪಾ, ಅದು ಹೇಗೆ ಈ ಆಶ್ಚರ್ಯ ಸಂಭವಿಸಿದುದು?'

'ಕೃಷ್ಣಾ, ಇದರಲ್ಲಂತಹ ಆಶ್ಚರ್ಯವೇನೂ ಇಲ್ಲ. ನಮ್ಮಲ್ಲಿರುವ ಮೂಢ ನಂಬಿಗೆಯ ಫಲ. ಮೊದಲು ಗಂಡಸರಾದ ನಾವೇ ವಿಚಾರ ರಹಿತ ಮೂಢ ನಂಬುಗೆಯಲ್ಲಿ ಮುಳುಗಿರುತ್ತೇವೆ. ಸುವಿಚಾರಿಗಳೆನ್ನಿಸುವ ನಾವೇ ಹೀಗೆ ಮಾಡಿದ ಮೇಲೆ ಹೆಂಗುಸರ ಪಾಡೇನು? ಗಂಗೂನೇ ನನಗೆ ಗುರುವಾದಳು. ಗಂಗೂನ ಆಚರಣೆ ಧರ್ಮಕ್ಕೆ ಸರಿಯಾಗಿಲ್ಲವೆಂದು ನನ್ನ ಮನ ಹೇಳುತ್ತಲಿದ್ದರೂ ಹೃದಯವೊಪ್ಪಲಿಲ್ಲ. ಹೃದಯದ ಒರೆಗೆ ಧರ್ಮಹತ್ತದಿದ್ದೀತೆ? ಧರ್ಮದ ಕಟ್ಟು ಹೃದಯಹೀನರಿಂದ ನಿರ್ಮಿಸಲ್ಪಟ್ಟವೆಯೇ? ಎಂಬ ಶಂಕೆ ಪ್ರಬಲವಾಯಿತು. ಸತ್ಯವನ್ನರಿವ ಆಶೆಯುಂಟಾಯಿತು. ಅನ್ಯ ಉದ್ಯೋಗವೂ ಇರಲಿಲ್ಲ. ಅಂತೆಯೇ ಧರ್ಮಗ್ರಂಥಗಳನ್ನವಲೋಕಿಸತೊಡಗಿದೆ. ಹೃದಯದ ಹಾದಿಯೇ ಸರಿಯಾಗಿದ್ದಿತೆಂದು ತಿಳಿಯಿತು. ಪತಿಯೇ ದೇವರೆಂದು ನಂಬಿದ ನಿನ್ನ ಚಿಕ್ಕಮ್ಮನೂ ನನ್ನ ಮಾತುಗಳಲ್ಲಿ ನಂಬುಗೆಯಿಟ್ಟಳು. ಅಂತಹ ಮನಸ್ಸಮಾಧಾನವೂ ದೊರೆಕಿದೆ. ಗಂಗು ಸುಖಿಯಾಗಬೇಕೆಂಬದೇ ನಮ್ಮಿಬ್ಬರಿಚ್ಛೆ. ಇನ್ನುಳಿದುದೆಲ್ಲವೂ ನಿನ್ನದು.'

'ಚಿಕ್ಕಪ್ಪಾ, ನಿಜವಾಗಿಯೂ ನಾನಿಂದು ಧನ್ಯನಾದೆನು. ಗಂಗೂನ ದೈವ ಬಲವತ್ತರವಾಗಿದೆ. ತಾಯಿ-ತಂದೆಗಳ ಹರಕೆ ದೊರಕುತ್ತಲಿದೆಯೆಂದು ತಿಳಿದರೆ ನಿಜವಾಗಿಯೂ ಗಂಗೂನಿಗೆ ತೀರಾ ಹರುಷವಾಗುವುದು.'

'ಬಿಡುವಿನಲ್ಲಿ ಬರಹೇಳಬೇಕೆಂಬದೇ ನಿನ್ನ ಚಿಕ್ಕಮ್ಮನಿಚ್ಛೆಯಿದೆ. ನನಗೆ ಬಲವಂತಪಡಿಸುತ್ತಲಿರುವಳು. ಒಂದೆರಡು ದಿನಗಳಲ್ಲಿ ನಾನೇ ಬರುವವನಿದ್ದೆ. ನೀನೇ ಬಂದೆ. ಬಹಳ ಒಳಿತಾಯಿತು.'

'ನಿಜವಾಗಿಯೂ ಸುಯೋಗವಿದು.'

'ಆಗಲಿ ಕೃಷ್ಣಣ್ಣಾ, ಆದರೆ ಈಗ ನಿನ್ನ ಮುಂದಿನ ಯೋಚನೆಯೇನು?'

'ಯೋಚನೆಯೇನಾದರೂ ಮಾಡಲಾದೀತು; ಆದರೆ ಈಗ ನಾನೊಂದು ತೀರಾ ಸೂಕ್ಷ್ಮವಾದ ವಿಷಯದ ಬಗ್ಗೆ ವಿಚಾರಿಸಬೇಕಾಗಿದೆ.'

'ಅಂತಹ ಸೂಕ್ಷ್ಮ ವಿಚಾರವಾದರೂ ಏನು? ಗಂಗೂನ ಪುನರ್ವಿವಾಹದ ವಿಷಯಕ್ಕೇನಾದರೂ ಚರ್ಚಿಸಬೇಕೆನ್ನುವಿಯಾ? ಹೇಳು ಕೃಷ್ಣಣ್ಣಾ, ನಿನ್ನ ವಿಚಾರಗಳನ್ನು ಸ್ಪಷ್ಟವಾಗಿ ಹೇಳು. ನಾನೀ ವಿಷಯವನ್ನಾದರೂ ವಿಚಾರಿಸದಿಲ್ಲ. ಪುನರ್ವಿವಾಹ ಶಾಸ್ತ್ರಸಮ್ಮತವೇ ಎಂದು ನನಗೆ ಮನವರಿಕೆಯಾಗದಿದ್ದರೂ ಶಾಸ್ತ್ರಾದಲ್ಲದರ ನಿಷೇಧವೂ ಸಿಕ್ಕಲಿಲ್ಲ; ಮತ್ತು ಹೃದಯ ನಮ್ಮ ಶುದ್ಧವಾದ ಅಂತಃಕರಣಕ್ಕೆ ಒಪ್ಪಿತವಾದ ವಿಷಯವೇ ಧರ್ಮ. ಅದೇ ನಿಜವಾದ ಧರ್ಮವೆಂಬ ನಂಬುಗೆ ನನಗಾಗಿದೆ. ಅಂತೆಯೇ ಈ ಪುನರ್ವಿವಾಹ ವಿಷಯಕ್ಕಾದರೂ ನನ್ನ ಮನ ಅನುಕೂಲವಾಗಿದೆ. ನಿನ್ನ ಚಿಕ್ಕಮ್ಮ ಕೂಡಾ ಆಕ್ಷೇಪಿಸಲಿಕ್ಕಿಲ್ಲ.'

'ನಿಜವಾಗಿಯೂ ಚಿಕ್ಕಪ್ಪಾ, ಇಂತಹ ಸುದಿನ ನೋಡುವ ಭಾಗ್ಯ ನನಗೊದಗೀತೆಂದು ನಾನೆಂದೂ ಭಾವಿಸಿರಲಿಲ್ಲ. ನಾನೀ ವಿಷಯವನ್ನೂ ವಿಚಾರಿಸಿರಲಿಲ್ಲ; ಆದರೆ ನಮ್ಮ ಶಿಕ್ಷಣಮಂತ್ರಿ ಮೋಹನರಾಯರೇ ಈ ಪ್ರಸ್ತಾಪವೆತ್ತಿದರು.'

'ಏನು, ಶಿಕ್ಷಣ ಮಂತ್ರಿ ಮೋಹನರಾಯರೇ?'

'ಅಹುದು. ಅವರ ಹೆಂಡತಿ ತೀರಿ ಹತ್ತು-ಹನ್ನೆರಡು ವರುಷಗಳಾದುವು. ಮಕ್ಕಳೂ ಇಲ್ಲ. ಆಪ್ತರೂ ಇಲ್ಲ. ಇದುವರೆಗೆ ಅದೆಷ್ಟೋ ಜನ ಕೇಳಿದರು; ಆದರೆ ಸ್ವಾತಂತ್ರ್ಯಯುದ್ಧ ಗೆಲ್ಲುವುದೊಂದೇ ಧ್ಯೇಯವೆಂದು ಹೇಳಿ ನಿರಾಕರಿಸಿದ್ದರು. ಈಗ ಮದುವೆಯಾಗಬೇಕೆನ್ನುತ್ತಾರೆ.'

'ನಿಜವಾಗಿಯೂ ಬಹಳ ಸುಂದರ ಸಮಯ. ನಮ್ಮ ಮನಸ್ಸಿನ್ನೂ ಸಿದ್ಧವಾಗದಿದ್ದರೂ ಗಂಗೂನ ಹಿತಕ್ಕೆ ಅಡ್ಡ ಬರುವ ಇಚ್ಛೆ ನನ್ನದಿಲ್ಲ. ಗಂಗೂ ಒಪ್ಪಿರುವಳಷ್ಟೆ?'

'ಇನ್ನೂ ಗಂಗೂನನ್ನು ಈ ಬಗ್ಗೆ ವಿಚಾರಿಸಿಲ್ಲ. ಸರ್ವಸಾಮಾನ್ಯವಾಗಿ ಪುನರ್ವಿವಾಹಕ್ಕೆ ಗಂಗೂ ಪ್ರತಿಕೂಲಳಿಲ್ಲ; ಆದರೆ ಸ್ವಂತದ ಬಗ್ಗೆ ಆಕೆಯ ಮತವೇನೆಂಬದನ್ನರಿಯುವುದೇ ಕಠಿಣವಾಗಿದೆ. ನಿಮ್ಮ ಸಮ್ಮತಿಯಿದೆ

ಯೆಂದರಿತರೆ ಎಷ್ಟೋ ಅನುಕೂಲ ಭಾವ ತಳೆಯ ಬಹುದು; ಮತ್ತು ಈ ಸಂಬಂಧ ಕೂಡಿದಲ್ಲಿ ಒಬ್ಬರೊಬ್ಬರಿಗೆ ನಿಜವಾಗಿಯೂ ಸುಖವಾಗುವುದಲ್ಲದೆ ದೇಶಕ್ಕೆ ಕೂಡಾ ಹಿತವಾಗದಿರದು.'

'ಕೃಷ್ಣಣ್ಣಾ, ನಾನೀಗಲೇ ಹೇಳಿದೆನಲ್ಲವೆ? ಎಂತಹ ಸುಂದರವಾದ ಸಂಧಿಯೊದಗಿದೆ? ಇದಕ್ಕೆ ತಡೆ ಹಾಕುವ ಇಚ್ಛೆ ನನಗಿಲ್ಲ. ನನ್ನದು ಸಂಪೂರ್ಣವಾದ ಸಮ್ಮತಿಯಿದೆ. ಮನಃಪೂರ್ವಕವಾಗಿ ನಾನು ಆಶೀರ್ವದಿಸುವೆ. ನಾನೇ ನನ್ನ ಕೈಗಳಿಂದಲೇ ತಿಲಕವಿಡುವೆ.'

ತನ್ನ ಅಂತಹ ಕ್ರಾಂತಿಕಾರಕ ವಿಚಾರ ಅಷ್ಟು ಸುಲಭವಾಗಿ ಸಾಧಿಸುವ ಆಶೆಯಿರಲಿಲ್ಲ; ಆದರೆ ಆಚಾನಕವಾಗಿ ತನ್ನ ಶ್ರಮದಲ್ಲಿಯ ಹತ್ತರಲ್ಲೊಂದು ಪಾಲು ಕೂಡಾ ಆಗದೆ ಸಾಧಿಸಿದಂತಾದುದರಿಂದ, ಕೃಷ್ಣರಾಯನಿಗತೀವ ಹರ್ಷವಾಯಿತು. ಅಲ್ಪಾವಕಾಶದಲ್ಲಿದೇ ವಿಷಯ ಪಾರ್ವತೀಬಾಯಿಯ ಬಳಿಯೂ ಹೊರಟಿತು. ಅಲ್ಲಿ ಕೃಷ್ಣರಾಯ ಮಾತನಾಡದೆ, ಭೀಮರಾಯರೇ ಪ್ರಮುಖ ಪಾತ್ರವಹಿಸಿದರು.

'ಕೃಷ್ಣಣ್ಣ ಈಗೊಂದು ಮಹತ್ವದ ಕೆಲಸಕ್ಕೆ ಬಂದಿರುವ.'

'ಅದೇನು? ಅಂತಹ ಮಹತ್ವದ ಕೆಲಸವಾದರೂ ಏನು ಕೃಷ್ಣಣ್ಣಾ?"

'ನಾನೇ ಹೇಳುತ್ತೇನೆ; ಆದರೆ ನಾನು ಹೇಳುವುದನ್ನೆಲ್ಲ ಶಾಂತಚಿತ್ತದಿಂದ ಕೇಳಿಕೊಳ್ಳು. ನಿನ್ನಲ್ಲಿರುವ ಧಾರ್ಮಿಕ ಬುದ್ಧಿಯು ನೈಜವಾದ ಪ್ರೇರಣೆಯಿಂದ ನಿನ್ನಲ್ಲೀಗ ಬಹಳ ಬದಲಾಗಿದೆ. ಅದಾಗದೇ ಹೋಗಿದ್ದರೆ ನಾವಾರೂ ಈ ವಿಷಯವನ್ನೇ ಚರ್ಚಿಸುತ್ತಲಿರಲಿಲ್ಲ.'

'ಅದೆಲ್ಲ ಇರಲಿ. ಅಂಥ ಕೆಲಸವಾದರೂ ಏನು?'

'ಇನ್ನೇನಿಲ್ಲ. ನಮ್ಮ ಶಿಕ್ಷಣ ಮಂತ್ರಿ ಮೋಹನರಾಯರು ಗಂಗೂ ನನ್ನು ಮದುವೆಯಾಗಬೇಕೆನ್ನುತ್ತಾರೆ. ಮೋಹನರಾಯರು ಯಾರು? ಅವರ ಪರಿಸ್ಥಿತಿಯೇನು? ಅನ್ನುವುದೆಲ್ಲ ನಿನಗೆ ಈ ಮೊದಲೇ ಗೊತ್ತು-ಇದಕ್ಕೆ ನಿನ್ನ ಸಮ್ಮತಿ-ಆಶೀರ್ವಾದಗಳು ಬೇಕಾಗಿವೆ.'

'ನೀವು ನಿಮ್ಮ ಆಶೀರ್ವಾದ, ಸಮ್ಮತಿ ಕೊಟ್ಟಿರುವಿರಾ?'

'ಅಹುದು. ಅಂತೆಯೇ ನಾನೀಗ ನಿನಗೆ ಹೇಳುತ್ತಲಿರುವುದು.'

'ನೀವು ಕೊಡಬೇಕೆಂದರೆ ಕೊಡುವೆ.'

'ಆದರೆ ಗಂಗೂನ ಜೀವನ ಸುಖಕರವಾಗಬೇಕೆಂಬ ಮನಃಪೂರ್ವಕ ವಾದ ಹರಕೆ ಬೇಕು. ನೀನು ಮನಃಪೂರ್ವಕವಾಗಿ ಇದಕ್ಕೆ ನಿನ್ನ ಒಪ್ಪಿಗೆ ಕೊಡುವದಲ್ಲದೇ, ನೀನೇ ನಿನ್ನ ಕೈಯಿಂದ ಕುಂಕುಮ ಹಚ್ಚಬೇಕು.'

ನನಗೀಗ ಬೇರೇ ಧರ್ಮವಿಲ್ಲ. ಪತಿಯಾಜ್ಞೆ ಪಾಲನೆಯೇ ನನ್ನ ಧರ್ಮ. ಶಾಸ್ತ್ರ-ಪುರಾಣಗಳಾವೂ ಬೇಕಿಲ್ಲ. ಪತಿಯ ವಾಕ್ಯವೇ ವೇದವಾಕ್ಯ. ನಿಮ್ಮ ಹೇಳಿಕೆಯಂತೆ ನಡೆಯುವದೇ ನನ್ನ ಕರ್ತವ್ಯ. ನೀವು ಹೇಗೆ ಹೇಳು ವಿರೋ ಹಾಗೆ ಮಾಡುವೆ. ನನಗೆ ನನ್ನ ಆಯುಷ್ಯದಲ್ಲಿಯೇ ಸಿಕ್ಕದ ಶಾಂತಿ-ಸಮಾಧಾನಗಳು ಈ ಕೆಲ ವರ್ಷಗಳಲ್ಲಿ ಸಿಕ್ಕುಹೋಗಿದೆ. ಇನ್ನೇನು? ನಾನು ಯಾವದಕ್ಕೂ ಭಯಪಡಬೇಕಾಗಿಲ್ಲ. ಗಂಗೂನಿಗೆ ಕುಂಕುಮ ಹಚ್ಚ ಬೇಕೆಂದು ನಿಮ್ಮ ಆಜ್ಞೆಯಿದ್ದರೆ ಹಚ್ಚುವೆನು. ಹರಸಬೇಕೆಂದರೆ 'ದೀರ್ಘ ಸುಮಂಗಲಿಯಾಗು' ಎಂದು ಹರಸುವೆನು. ಕೃಷ್ಟಣ್ಣಾ, ಒಮ್ಮೆ ನಾನು ಹಾದೀ ಬಿಟ್ಟಿದ್ದೆನು. ಹೆಂಗುಸರಿಗೆ ದೇವರಾದ ಪತಿಯನ್ನೇ ಮರೆತು, ಅನ್ಯ ದೇವರ ಬೆನ್ನು ಹತ್ತಿದ್ದೆನು. ಅಂತೆಯೇ ಅನೇಕ ಸಂಕಟಗಳನ್ನು ಭೋಗಿ ಸಿದೆನು. ನನ್ನ ದೇವರು ನನ್ನ ಪತಿಯೆಂದು ಕಂಡುಕೊಂಡಾಗಲೇ ಅನಂತ ಸುಖದೊರಕಿತು. ನನ್ನ ಮಗಳು ಗಂಗು ಸುಖಿಯಾಗಬೇಕೆಂಬದೇ ನನ್ನ ಹಾರೈಕೆ. ನಿಮಗೂ ನಮ್ಮ ಮನೆಯವರಿಗೂ ಯೋಗ್ಯವೆನಿಸುವ ದಾರೀ ಹಿಡಿಯಬಹುದು. ನನ್ನ ಸಂಪೂರ್ಣ ಸಮ್ಮತಿಯಿದೆ.'

ಕೃಷ್ಣರಾಯನ ಕಣ್ಣು ಆನಂದಾಶ್ರುಗಳಿಂದ ತುಂಬಿದವು. ಗಂಗೂನ ಸದ್ಗುಣ, ಅಚಲವಾದ ನಿಷ್ಠೆ, ನಿಸ್ವಾರ್ಥೀ ಸೇವೆಗಳು ಯೋಗ್ಯ ಪರಿಣಾಮ ಹೊಂದಿದುವೆಂದು ಭಾವಿಸಿದನು.

---

# ಆಕರ್ಷಣೆ.

ಕೃಷ್ಣರಾಯ ಭೀಮರಾಯರಲ್ಲಿಂದ ಮರಳಿದ. ಹೋಗುವಾಗಿನ ಅವನ ಭಾವನೆಗಳಿಗೂ ಬರುವಾಗಿನ ಭಾವನೆಗಳಿಗೂ ಅದೆಷ್ಟು ಅಂತರ! ಮಾನವೀ ಜೀವನದಲ್ಲಿ ಕ್ವಚಿತ್ತಾಗಿ ಸಿಕ್ಕಬಹುದಾದ ಅತ್ಯಂತ ಸುಂದರವಾದ ನೋಟ ವೊಂದು ಅವನಿಗೆ ದೊರೆತಿದ್ದಿತು. ಕ್ರಾಂತಿ ಯಾವಾಗಲೂ ಕಾಣಬಹುದು. ಅದೇಕೆ, ಪ್ರತಿನಿಮಿಷ ಕ್ರಾಂತಿ ನಡೆದೇ ಇದೆ. ಆದರದೆಂತಹದು? ತೀರಾ

ಕಣ್ಣಿಗೆ ಕೂಡಾ ಕಾಣದಂತಹ ಕ್ರಾಂತಿ. ಈಗ ಕೃಷ್ಣರಾಯ ಕಂಡ ಕ್ರಾಂತಿಯೆಂದರೆ ದೇದೀಪ್ಯಮಾನವಾದ ಕ್ರಾಂತಿ. ಕಣ್ಣು ಕುಕ್ಕಿಸುವಂತಹ ಅದ್ಭುತವಾದ ಕ್ರಾಂತಿ. ಶಿವಶರಣರ ಪವಾಡಗಳಲ್ಲಿ, ಸಂತ-ಸಜ್ಜನರ ಚಮತ್ಕೃತಿಗಳಲ್ಲಿ ಇಂತಹ ವಿಷಯ ಕೇಳಿದುದುಂಟು; ಆದರೆ ಅಂತಹ ಒಂದಾದರೂ ಸನ್ನಿವೇಶವಿಲ್ಲದೇ ಇಂತಹ ಅತ್ಯದ್ಭುತ ಕ್ರಾಂತಿ ಕಾಣುವದೂ ಒಂದು ಸುಯೋಗವೇ. ಪಾರ್ವತೀಬಾಯಿಯೆಂದರೆ ಅದೆಂತಹ ಹೆಣ್ಣುಮಗಳು? ಸಂಸ್ಕೃತಿ-ಸುಧಾರಣೆಗಳ ಸಂಪರ್ಕವೆನಿತೂ ಇರಲಿಲ್ಲ. ಶಿಕ್ಷಣದ ಗಂಧವಿರಲಿಲ್ಲ. ವಿಶಾಲದೃಷ್ಟಿಯರಿವೇ ಇರಲಿಲ್ಲ. ಮೂಢವಾದ ಧಾರ್ಮಿಕ ಕಲ್ಪನೆಗಳೇ ತಾನಾಗಿ ಇರುವಂಥ ಒಂದು ಸರ್ವ ಸಾಮಾನ್ಯ ವ್ಯಕ್ತಿ; ಆದರೆ ಅಲ್ಪಾವಕಾಶದಲ್ಲಿ ಮಹಾವ್ಯಕ್ತಿಗೂ ನಿಲುಕದ ತಾಳ್ಮೆ, ಶಾಂತಿಗಳನ್ನು ಹೊಂದಿದ್ದಳು. ಅತ್ಯಂತ ಸುಸಂಸ್ಕೃತವಾದ ಮನಸ್ಸು ಅವಳದಾಗಿದ್ದಿತು. ಈಗ ಪಾರ್ವತೀಬಾಯಿಯ ದೃಷ್ಟಿಯಲ್ಲಿ ಅಪರಾಧವೇ ಉಳಿದಿರಲಿಲ್ಲ. ಎಲ್ಲವೂ ತನ್ನೊಂದು ರೀತಿಯಿಂದ ಸರಿಯಾಗಿದೆ ಎನ್ನುವ ತಾಣಕ್ಕೆ ತಲುಪಿದ್ದಳು.

ಕೃಷ್ಣರಾಯ ಇಂತಹ ಸುಂದರ ಸುಮಧುರವಾದ ಕ್ರಾಂತಿ ಕಣ್ಣಾರೆ ಕಂಡು ಅತ್ಯಂತ ಉಲ್ಲಸಿತ ಮನದಿಂದ ಮರಳಿದನು. ನಾಲ್ಕಾರು ದಿನಗಳಲ್ಲಿ ಭೀಮರಾಯ ಪಾರ್ವತೀಬಾಯಿ ಇಬ್ಬರಿಗೂ ಧಾರವಾಡಕ್ಕೆ ಬರಲು ಹೇಳಿದ್ದನು. ನಿಜವಾಗಿಯೂ ಗಂಗೂನ ಜೀವನವಂದು ಪರಿಪೂರ್ಣವಾಯಿತೆಂದು ಬಗೆದನು. 'ರತ್ನಂ ಸಮಾಗಚ್ಛತು ಕಾಂಚನೇನ.' ಎಂದು ಕವಿಕುಲಗುರು ಕಾಳಿದಾಸನು ಹೇಳಿದಂತೆ, ಗಂಗೂ-ಮನೋಹರರಾಯರ ಸಂಗಮವು ಸುಂದರವಾಗುವುದೆಂದು ತೀರಾ ಆನಂದಿತನಾದನು. ಅನೇಕ ಸುಂದರ ಸುಮಧುರ ಕನಸುಗಳಲ್ಲಿ ಮುಳುಗಿಯೇ ಧಾರವಾಡಕ್ಕೆ ತಲುಪಿದನು.

ಮನೋರಮೆ, ಮುಗುಳುನಗೆಯಿಂದ ಎದುರುಗೊಂಡಳು.

'ಹೋದ ಕಾರ್ಯವೇನಾಯಿತು?'

'ಶಕ್ತಿ ಮೀರಿ ಯಶಸ್ವಿಯಾಯಿತು. ನನಗೆ ನಿನಗೆ ಕಲ್ಪನೆಯಾಗದಷ್ಟು ಯಶಸ್ವಿಯಾಯಿತು. ಗಂಗೂನ ಪುಣ್ಯ ಒದಗಿ ಬಂದಿತು.'

'ಅಂದರೆ ಮಾವನವರೊಪ್ಪಿದರೆ?'

ಚಿಕ್ಕಪ್ಪಾ ಒಪ್ಪುವದಂತೂ ಇರಲಿ. ಮನಃಪೂರ್ವಕವಾಗಿ ಹರಸಿದನು; ಆದರೆ ಚಿಕ್ಕಮ್ಮಾ ಕೂಡಾ ಸಮ್ಮತಿಸಿದಳು.'

'ಏನು, ಅತ್ತೆಯವರು ಒಪ್ಪಿದರೆ? ಅದೇನು? ನಾನೇನನ್ನು ಕೇಳುತ್ತಲಿರುವೆ. ಅತ್ತೆಯವರು ಗಂಗೂನ ಪುನರ್ವಿವಾಹಕ್ಕೆ ಒಪ್ಪಿದರೆ!-ಅಂ-ನಿಜವಾಗಿಯೂ ಒಪ್ಪಿದರೆ?'

'ಅಹುದು, ಮನಃಪೂರ್ವಕವಾಗಿ ಒಪ್ಪಿಮದುವೆಯಲ್ಲಿ ತಾನೇ ಕುಂಕುಮ ಹಚ್ಚಿ 'ದೀರ್ಘಸುಮಂಗಲೆಯಾಗು' ಎಂದು ಆಶೀರ್ವದಿಸುವಳು.'

'ಇದೇನು? ಇಂತಹ ಆಶ್ಚರ್ಯ ಹೇಗೆ ಸಂಭವಿಸಿತು?'

'ಆಶ್ಚರ್ಯವೆನ್ನೋ ಸರಿಯೆ; ಆದರೆ ಪೂರ್ಣವಾಗಿ ವಿಚಾರಿಸಿ ನೋಡಿದರೆ ಅಷ್ಟು ಆಶ್ಚರ್ಯಪಡುವ ಕಾರಣವೇನೂ ಇಲ್ಲ.'

'ಏನು? ಪೂರ್ವದ ಸೂರ್ಯ ಪಶ್ಚಿಮಕ್ಕೆ ಮೂಡಿದರೂ ಆಶ್ಚರ್ಯವಿಲ್ಲವೆ?'

"ಅಂತಹ ಅಸಂಭಾವ್ಯ ಘಟನೆಯೇನೂ ಇಲ್ಲ. ಧಾರ್ಮಿಕ ಆಚಾರವಿಚಾರಗಳಲ್ಲಿ ಮುಳುಗಿ ಅನ್ಯ ವಿಚಾರಗಳಿಗವಕಾಶ ಕೊಟ್ಟಿರಲಿಲ್ಲ. ಪ್ರತಿ ಧಾರ್ಮಿಕ ಕ್ರಿಯೆಯೇ ಮಹತ್ವದ್ದೆಂದು ಭಾವಿಸಿ ಅದರಲ್ಲಡಕವಾಗಿದ್ದ ತತ್ವವನ್ನೇ ಮರೆತಿದ್ದರು; ಆದರೆ ಗಂಗೂನೇ ಅವರ ಕಣ್ಣು ತೆರೆದಳು."

'ಹೇಗೆ? ಹೇಗೆ? ಇದೆಲ್ಲಕ್ಕೂ ಗಂಗೂ ಹೇಗೆ ಕಾರಣಳಾದಳು?'

'ಅನೇಕರ ಜೀವನಮಟ್ಟ ಎತ್ತರಿಸಲು ಕಾರಣಳಾದ ಗಂಗೂನೇ ತನ್ನ ತಂದೆ-ತಾಯಿಗಳ ಮನವನ್ನು ಮೇಲಕ್ಕೊಯ್ಯಲು ಕಾರಣಳಾದಳು.'

'ಅದು ಹೇಗೆ?'

'ದಯೆಯೇ ಧರ್ಮದ ಮೂಲವೆಂದು ಎಲ್ಲ ಧರ್ಮಗಳೂ ಸಾರಿ ಸಾರಿ ಹೇಳುತ್ತಲಿರಲು, ಆ ದಯೆಯು ಚಿಕ್ಕಪ್ಪನನ್ನು ವಿಚಾರಕ್ಕೆ ಗುರಿಮಾಡಿತು. ವಿಚಾರಾಂತ್ಯದಲ್ಲಿ ದಯೆಯೇ ಧರ್ಮದ ಮೂಲವೆಂದು ಮನಗಂಡು, ಚಿಕ್ಕಮ್ಮನ ಮನಕ್ಕೂ ಬಿಂಬಿಸಿದನು. ಮೂಲವಾಗಿ ಒಬ್ಬರೊಬ್ಬರು ಒಬ್ಬರೊಬ್ಬರ ಕರ್ಮಕ್ಕೆ ಹೊಣೆಯಲ್ಲವೆಂದು ಉದಾಹರಣೆಗಳಿಂದ ತೋರಿಸಿಕೊಡಲು, ಚಿಕ್ಕಮ್ಮನ ಮನವೆಷ್ಟೋ ಹಗುರವಾಯಿತು. ಗಂಗೂನ ಅಧಾರ್ಮಿಕತೆಯ ಮೂಲಕ ತಾನು ನರಕದಲ್ಲಿ ಬೀಳಬೇಕಾಗಿಲ್ಲವೆಂಬ ಮನವರಿಕೆಯಾಗಲು, ಸ್ವಾರ್ಥಬುದ್ಧಿ ಮರೆಯಾಯಿತು. ಒಡನೆಯೇ ದೃಷ್ಟಿ ವಿಕಸಿತವಾಯಿತು. ಅಂತಹ ವಿಶಾಲವಾದ ದೃಷ್ಟಿಯಲ್ಲಿ ಗಂಗೂನ ಕಾರ್ಯದ ನೈಜರೂಪ ಪ್ರಕಟವಾಯಿತು. ವಯೋಮಾನಕ್ಕನುಸರಿಸಿ ಉಂಟಾಗುವ ಭಾವನೆಗಳಿಗೆ ನ್ಯಾಯವಾದ ಅವಕಾಶ ಸಿಕ್ಕದೆ ಹೋದರೆ ಅನ್ಯಾಯದ ಮಾರ್ಗ ಹಿಡಿಯಲೇ

ಬೇಕಾಗುವುದು. ಇಂತಹ ಎಷ್ಟೋ ದುರ್ಘಟನೆ ನಾವು ಕೇಳುವುದಿಲ್ಲವೆ? ಅದೆಲ್ಲಕ್ಕೂ ಹೊಣೆಯಾರು? ಸಮಾಜವೇ ಅಲ್ಲವೆ? ಇವೇ ಮುಂತಾದ ವಿಚಾರಗಳಿಂದ ಚಿಕ್ಕಪ್ಪ ಆಕೆಯ ಕಣ್ಣನ್ನು ಪೂರ್ಣವಾಗಿ ತೆರೆದ.'

'ಅಂತೂ ಚಿಕ್ಕಮ್ಮನಂತಹಳೂ ಪೂರ್ಣ ಸುಧಾರಿಸಿದಳು.'

'ಇಲ್ಲ ನಾವು ತಿಳಿದುಕೊಂಡ ರೀತಿಯಲ್ಲಿ ಆಕೆಯೆಂದೂ ಸುಧಾರಿಸಿಲ್ಲ, ಸುಧಾರಿಸುವುದೂ ಇಲ್ಲ. ತನ್ನ ಆ ಪ್ರಾಚೀನ ಕಲ್ಪನೆಯಲ್ಲಿಯೇ ಚಿಕ್ಕಮ್ಮ ಈ ಎಲ್ಲದಕ್ಕೂ ಮನಃಪೂರ್ವಕ ಸಮ್ಮತಿಸಿರುವಳು.'

'ಅಂದರೆ? ಇದೇನು ಒಗಟು?'

'ಒಗಟೇನೂ ಅಲ್ಲ. 'ಗಂಡನೇ ದೇವರು' ಎಂಬ ಬಲವಾದ ನಂಬುಗೆ ಚಿಕ್ಕಮ್ಮನಲ್ಲಿದೆ. ತನ್ನಾ ನಂಬುಗೆಯಲ್ಲಿಯೇ ಚಿಕ್ಕಪ್ಪನಾಣತಿಯನ್ನು ಪಾಲಿಸಬೇಕಾಯಿತು. ಪತಿದೇವನಾಣತಿ ಪಾಲಿಸಿದಳು.'

'ಗಂಡನೇ ದೇವರು' ಎಂಬದರಲ್ಲಿಯೂ ಒಳಿತಿದೆಯೆನ್ನಬಹುದು.'

'ಇದೇ ಆದರೆ ಆ ಗಂಡ ಸರಿಯಾದ ದಾರಿಯನ್ನು ತಾನು ಕಾಣಬೇಕು. ಆ ಮೇಲದನ್ನು ಹೆಂಡತಿಗೆ ತೋರಿಸಬೇಕು. ಅಂದರೇನೇ ನಿಜವಾದ ಕಲ್ಯಾಣ. ಏನೇ ಆದರೂ ಆ ದೇವತ್ವದ ಭಾವನೆಯಲ್ಲಿ ಕುಂದು-ಕೊರತೆಗಳು ಕಾಣದಾಗುವವು. ಜೀವನವು ಸುಕರವಾಗುವದು.'

'ಅಹುದಹುದು. ನಿಜವಿದೆ. ಅಂತೆಯೇ 'ಅಹಲ್ಯೆ, ತಾರೆಯರನ್ನು ಪತಿವ್ರತೆಯರೆಂದು ಪೂಜಿಸುತ್ತೇವೆ. ದ್ರೌಪದಿಯ ಪಂಚಪತಿತ್ವ ನಮಗೆ ಕಾಣುವುದಿಲ್ಲ.' ನಿಜವಾಗಿಯೂ ನಮ್ಮ ತತ್ವಗಳು ಅಮೌಲ್ಯವಾದುವಿವೆ. 'ಅಹುದು ತಿಳಿಯದೇ ಆಚರಿಸಿದರೆ ಮೌಢ್ಯತೆಯಾಗುವದು. ತಿಳಿಯದೇ ಆಚರಿಸದೇ ಸುಮ್ಮನೇ ಇಣುಕಿದರೆ ಹುಚ್ಚುತನವಾಗುವದು. ತಿಳಿದರೆ ಮಾತ್ರ ಸುಂದರವಾದುದೆಂಬರಿಕೆಯಾಗಿ ಆಚರಣೆಗೆ ಪ್ರೇರಣೆಯಾಗುವದು; ಅದರೆ ಸುಮಧುರ ಫಲ ಸಿಕ್ಕುವುದು.'

ನಿಜವಾಗಿಯೂ ಅಂದು ಆ ದಂಪತಿಗಳಿರ್ವರಿಗೂ ಅತೀವ ಆನಂದಿತದಾಗಿದ್ದಿತು. ಮೋಹನರಾಯನಂತಹ ಶ್ರೇಷ್ಠ ಪುರುಷ-ಮಂತ್ರಿ ಪದವಿಯಲ್ಲಿರುವ ಅಧಿಕಾರಿಯನ್ನು ಗಂಗೂ ಆನಂದದಿಂದ ಜೊತೆಗಾರನನ್ನಾಗಿ ಸ್ವೀಕರಿಸುವಲ್ಲಿ ಯಾವ ಸಂಶಯವೂ ಇರಲಿಲ್ಲ. ಇಂತಹ ಸಂಬಂಧವನ್ನಾವ ತರುಣಿ ತಾನೆ ತಿರಸ್ಕರಿಸುವಳು? ತಂದೆ-ತಾಯಿಗಳ ವಿರೋಧವನ್ನೂ ಲೆಕ್ಕಿಸದೆ, ಮದುವೆ

ಯೊಗಲು ಹೆದರುವದಿಲ್ಲ. ತಂದೆ-ತಾಯಿಗಳ ಸಂಪೂರ್ಣ ಸಮ್ಮತಿ ದೊರೆತಲ್ಲಿ ಕೇಳುವದೇನು? ಮನೋರಮೆ ಆಗಲೇ ಆ ಮದುವೆಯ, ಅದಕ್ಕೆಮುಂದಿನ ಅನೇಕ ಸುಂದರ ನೋಟಗಳನ್ನು ನೋಡುವದರಲ್ಲಿ ತಲ್ಲೀನಳಾದಳು. ಆ ಗಂಗೂನಿಗಾ ಸಂಗತಿಯನ್ನರುಹಿ ಅವಳನ್ನು ಹರ್ಷಪುಲುಕಿತಳನ್ನಾಗಿ ಮಾಡಬೇಕೆಂದು ಎದ್ದಳು; ಆದರೆ ತಂದೆ-ತಾಯಿಗಳೇ ಹಾಗೆ ಹೇಳಿದಾಗ ಆಕೆಗಾಗ ಬಹುದಾದ ಆಶ್ಚರ್ಯಾನಂದ ನೋಡಬೇಕೆಂದಾಶೆಯಿಂದ ಸುಮ್ಮನುಳಿದಳು. ಶಕ್ಯವಿದ್ದಮಟ್ಟಿಗೂ ಈ ಎಲ್ಲ ಸಂಗತಿಯನ್ನು ಗಂಗೂನಿಂದ ಬಚ್ಚಿಟ್ಟಳು.

ಗಂಗೂನ ತಂದೆ-ತಾಯಿಗಳ ಸಮ್ಮತಿಯನ್ನು ಕೃಷ್ಣರಾಯ ಮೋಹನರಾಯನಿಗೆ ತಿಳಿಸಿದನು. ಗಂಗೂ ಕೂಡಾ ಸುಲಭವಾಗಿ ಸಮ್ಮತಿಸಬಹುದೆಂಬ ಸಂಗತಿಯನ್ನೂ ತಿಳಿಸಲು ಮರೆಯಲಿಲ್ಲ. ತಂದೆ ತಾಯಿಗಳೇ ತಮ್ಮ ಸಮ್ಮತಿಯೊಡನೆ ಗಂಗೂನಿಗೆ ತಿಳಿಸಲೆಂದು ಬೇಕೆಂದೇ ಗಂಗೂನಿಗೆ ತಿಳಿಸಿಲ್ಲವೆಂದೂ ಬರೆದಿದ್ದನು. ಒಂದೆರಡು ದಿನಗಳಲ್ಲಿ ಸಂತೋಷಸೂಚಕ ಉತ್ತರವೂ ಬಂದಿತು.

ಭೀಮರಾಯ ಪಾರ್ವತೀಬಾಯಿಯವರು ಬರುವ ದಿನ ಬಂದಿತು. ಕೃಷ್ಣರಾಯ ಅವರನ್ನು ಕರೆತರಲು ಗಾಡೀ ಕಳುಹಿಸಿದನು. ಗಂಗೂ ಇನ್ನೆಲ್ಲೋ ಹೋಗಬೇಕಿದ್ದಿತು; ಆದರೆ ಮನೋರಮೆ ಏನೇನೋ ನೆವ ಹೇಳಿ ತಡೆ ಹಾಕಿದಳು. ಹುಡುಗರೊಡನಾಡುತ್ತ ಆವುದೋ ಪುಸ್ತಕವೊಂದನ್ನೋದುತ್ತ ಕುಳಿತಳು. ಅಷ್ಟರಲ್ಲಿ ಗಾಡಿಯ ಸದ್ದಾಯಿತು ಶಶಿಕಲೆ, ಮೋಹನರಿಬ್ಬರೂ ಬಾಲ್ಯಸ್ವಭಾವಕ್ಕನುಸರಿಸಿ ಹೊರಗೋಡಿದರು. ಭೀಮರಾಯರನ್ನು ಕಾಣುತ್ತಲೇ 'ಅಜ್ಜ ಬಂದ' ಎಂಬ ಮಾತು ಕೇಳುತ್ತಲೇ ಗಂಗೂ ಕುತೂಹಲದಿಂದ ಪುಸ್ತಕ ಕೆಳಗಿರಿಸಿ ಮುಂಬಂದಳು. ಭೀಮರಾಯರನ್ನು ಕಾಣುತ್ತಲೇ ಹರುಷಗೊಂಡು ನಗುತ್ತ 'ಅಪ್ಪಾ' ಎಂದು ಬಾಯ್ದೆರೆಯುವಷ್ಟರಲ್ಲಿಯೋ ಪಾರ್ವತೀಬಾಯಿ ಬರುವದು ಕಾಣಿಸಿತು. ಒಮ್ಮೆಲೇ ಸ್ತಂಭಿತಳಾದಳು. ಭೀಕರ ನೋಟವೊಂದು ಮುಂಬಂದು ನಿಂತಿತು. ತನ್ನ ಸುಖಸಾಮ್ರಾಜ್ಯವೆಲ್ಲ ಕೊನೆಗಂಡಿತೆಂದೇ ಬಗೆದಳು. ತನ್ನನ್ನು ಕರೆದೊಯ್ಯುವದಕ್ಕಾಗಿಯೇ ಅವ್ವ ತಂದೆಯೊಡನೆ ಬಂದಿರುವಳೆಂದು ಬಗೆದು, ಅನೇಕ ಭಯಾನಕ ಕಲ್ಪನೆಗಳು ತಲೆಯಲ್ಲಿ ಮೂಡುತ್ತಲೇ ಗಾಬರಿಯಿಂದ ಮೂಕಳಂತೆ ನಿಂತುಬಿಟ್ಟಳು.

ಗಂಗೂನ ಆ ಅವಸ್ಥೆ ಭೀಮರಾಯ, ಪಾರ್ವತೀಬಾಯಿ ಇಬ್ಬರ ಕಣ್ಣಿಗೂ ಬಿದ್ದಿತು. ಇಬ್ಬರಿಗೂ ವಸ್ತುಸ್ಥಿತಿಯ ಅರಿವಾಯಿತು. ಪಾರ್ವತೀ

ಬಾಯಿಯ ಹೊಟ್ಟೆಯಲ್ಲಿ ತಳಮಳವಾಯಿತು. ತಾಯಿತನ ಜಾಗ್ರತವಿರುವಾಗ ತನ್ನ ದೌಷ್ಟ್ಯದ ಪರಿಣಾಮ ಮಗಳ ಮನಸ್ಸಿನ ಮೇಲೆ ಬಹಳವಾದುದನ್ನರಿತು ತನ್ನ ಮೇಲೆಯೇ ಬಹಳವಾಗಿ ಕೋಪಿಸಿದಳು. ಆಕೆಯಿಂದ ತಡೆಯುವದಾಗಲಿಲ್ಲ. ಒಮ್ಮೆಲೇ ಮುಂಬಂದು ಗಂಗೂನನ್ನು ಬಿಗಿದಪ್ಪಿ 'ಗಂಗೂ ಮಗು, ಗಾಬರಿಯಾಗಬೇಡ. ನಾನೇನೂ ನಿನ್ನನ್ನು ಯಾವದೇ ರೀತಿಯಲ್ಲಿ ಪೀಡಿಸಬೇಕೆಂದು ಬಂದಿಲ್ಲ. ಅಂದು ಮೂಢಭಾವನೆಗಳ ಮೂಲಕ ಕುರುಡಳಾಗಿದ್ದೆ. ಇಂದು ನನ್ನ ಕಣ್ಣು ತೆರೆದಿವೆ. ಅಂದು ನಾನು ಮಾಡಿದುದು ಮಹದಪರಾಧವೆಂಬ ಅರಿವು ನನಗಾಗಿದೆ. ಗಂಗೂ, ನಿನ್ನ ಈ ಬಡತಾಯಿಯ ಮೇಲೆ ಇನ್ನೂ ಕೋಪವೆ? ತಿಳಿಯದೆ ಮಾಡಿದ ತಪ್ಪಿಗಾಗಿ ಕ್ಷಮಿಸಲಾರೆಯಾ?' ಪಾರ್ವತೀಬಾಯಿಯ ಒಂದೊಂದೇ ಮಾತಿನಲ್ಲಿ ಅವಳ ಹೃದಯ ತುಂಬಿದ್ದಿತು. ಅವಳಾ ಕನಿಕರ ದುಃಖದ ಮಾತು ಗಂಗೂನ ಹೃದಯವನ್ನೆ ಅಲುಗಿಸಿತ್ತು. ಇಂತಹ ಅಶಕ್ಯವಾದ ಬದಲು ಹೇಗಾಯಿತೆಂಬುದೇ ತಿಳಿಯಲಿಲ್ಲ ದಿಙ್ಮೂಢಳೇ ಅವಳಾದಳು. ಭೀಕರ ದುಃಖದ ಆಳವಾದ ತಗ್ಗಿನ ತಳದಲ್ಲಿ ತೊಳಲುತ್ತಲಿರುವಾಗ, ಸುಖದ ಅತ್ಯಂತ ಉಚ್ಚತಮ ಶಿಖರದ ತುತ್ತುದಿಯ ಮೇಲೆ ಕೂರಿಸಿದರೆ ಆ ವ್ಯಕ್ತಿಯವಸ್ಥೆ ಹೇಗಾದೀತು? ಗಂಗೂನ ಬಾಯಿಂದ ಮಾತುಗಳೇ ಹೊರಡದಾದವು.

ಭೀಮರಾಯರು ವಸ್ತುಸ್ಥಿತಿಯರಿತು ಗಂಗೂನ ಮನದ ಗೊಂದಲವನ್ನು ಶಾಂತಗೊಳಿಸಿದರು. ತಾಯಿ-ಮಗಳ ಆ ಸುಮಧುರ ಸಮಾಗಮವನ್ನು ಬಣ್ಣಿಸಲು ಸಮರ್ಥರಾರು? ನಿಜವಾಗಿಯೂ ತನ್ನ ಜೀವನ, ತನ್ನ ಕಾರ್ಯ, ತನ್ನ ಅಸ್ತಿತ್ವಗಳೆಲ್ಲವೂ ಸಾರ್ಥಕವಾದುವೆಂದು ಭಾವಿಸಿ, ಗಂಗೂ ತೀರಾ ಆನಂದಿತಳಾದಳು.

ಅವರ ಆಗಮನದ ಉದ್ದೇಶವಿನ್ನೂ ಬಯಲಿಗೆ ಬಂದಿರಲಿಲ್ಲ. ಯೋಗ್ಯ ಸಂಧಿಯನ್ನೇ ಎಲ್ಲರೂ ಅವಲೋಕಿಸುತ್ತಿದ್ದರು. ಮನೋರಮೆಯೇ ತನ್ನ ಚಾತುರ್ಯದಿಂದ ಆ ಕಾರ್ಯ ಸಾಧಿಸಬೇಕಿದ್ದಿತು. ಎಲ್ಲರೂ ಮನೋರಮೆಯ ಮೇಲೆಯೇ ಆ ಹೊಣೆ ಹೊರಿಸಿದರು. ನಿಜವಾಗಿಯೂ ಅದೊಂದು ಕಠಿಣ ಕೆಲಸವಾಗಿರಲಿಲ್ಲ. ತಾರುಣ್ಯಾವಸ್ಥೆಗೆ ತಲುಪಿದ ಬಾಲೆ ಜೊತೆಗಾರನನ್ನಪೇಕ್ಷಿಸುವುದು ತೀರಾ ಸ್ವಾಭಾವಿಕ. ವಿಧವೆಯೆಂಬ ಪ್ರತಿಷೇಧದಿಂದ ಅಂತಹಳು ತನ್ನ ಮನೋಭಾವನೆ ಪ್ರಕಟಪಡಿಸದಿರಬಹುದು; ಆದರೆ ಗಂಗೂಗೆ ಅಂತಹ

ಅಡ್ಡಿ-ಆತಂಕಗಳಾವೂ ಇರಲಿಲ್ಲ; ಮತ್ತು ಸ್ವತಃ ಗಂಗೂನಲ್ಲಿ ಪುನರ್ವಿವಾಹದ ಬಗ್ಗೆ ವಿರೋಧವಿರಲಿಲ್ಲ. ತಂದೆ-ತಾಯಿಗಳ ಸಮ್ಮತಿಯೇ ಸಿಕ್ಕ ಮೇಲೆ ಮತ್ತೇನು? ಆನಂದದಿಂದ ಒಪ್ಪುವಳು; ಹಾಗು ಜೊತೆಗಾರರೆಂದರೆಂತಹರು? ಸಾವಿರಾರು ಮಂದಿ ತರುಣಿಯರು ತನು ಮನ ಧನಗಳನ್ನರ್ಪಿಸಲು ಹಿಂದೆ ಮುಂದೆ ನೋಡದಂತಹರು!

ಅಂದಿನಿರುಳು ಮನೆಯಂಗಣದ ತೋಟದಲ್ಲಿ ಎಲ್ಲರೂ ಕುಳಿತಿದ್ದರು. ಮನೋರಮೆ ಮೆಲ್ಲನೆ ಮಾತು ತೆಗೆದಳು.

‘ಗಂಗೂ, ಇಂದು ನೀನು ನಿಜವಾಗಿಯೂ ಸುದೈವಿ!’

‘ಅಹುದು ಅತ್ತಿಗೀ, ಇಂತಹ ದಿನ ಕಾಣುವ ಆಶೆ ನನಗಿರಲಿಲ್ಲ. ಅವ್ವನ ಮನ ನನ್ನ ಬಗ್ಗೆ ಇಷ್ಟು ಅನುಕೂಲವಾಗುವ ಆಶೆಯೆಂದರೆ ಅಶಕ್ಯವೆಂದೇ ನನ್ನ ನಂಬುಗೆಯಿದ್ದಿತು.’

‘ಎಷ್ಟೋ ಸಲ ಅಶಕ್ಯವೆನ್ನಿಸುವ ಸಂಗತಿಗಳೂ ಸುಲಭವಾಗಿ ಸಾಧಿಸುತ್ತವೆಂದು ಹೇಳುವುದಕ್ಕಿದೇ ಪ್ರಮಾಣ’

‘ಅಹುದಹುದು. ನಿಜವಿದೆ; ಆದರೆ ಅಪ್ಪಾ, ಇಂತಹ ಬದಲು ಹೇಗಾಯಿತು?‘

‘ಗಂಗೂ, ನೀನೇ ಅದಕ್ಕೆ ಕಾರಣಳು.’

‘ಅಂದರೇನು?‘

‘ಇನ್ನೇನಿಲ್ಲ. ನೀನು ಮಾಡಿದುದಾ ಮಹತ್ಕಾರ್ಯ; ಆದರೆ ಮೊದಲು ಆಕೆಗದರ ದಿಟವಾದ ಕಲ್ಪನೆಯಾಗಿರಲಿಲ್ಲ. ಬೇರೊಂದು ದೃಷ್ಟಿಯಲ್ಲಿ ಕಾಣುತ್ತಲಿದ್ದಳು. ನನಗೂ ಅಷ್ಟು ವಿಶ್ವಾಸವಿರಲಿಲ್ಲ; ವಿಚಾರ, ಗ್ರಂಥಾವಲೋಕನದಿಂದ ನನ್ನ ಮನ ತಿಳಿಯಾಯಿತು. ನನ್ನ ಮಾತುಗಳಲ್ಲಿ ವಿಶ್ವಾಸವಿಟ್ಟದ್ದರಿಂದ ನಿನ್ನ ಅವ್ವನ ಮನವೂ ತಿಳಿಯಾಯಿತು.’

‘ಅಹುದೇನೇ ಅವ್ವಾ?‘

‘ಹೌದು ಮಗು. ಹಳೆಯದೆಲ್ಲ ಛಲೋದು ಅನ್ನೋ ಅವ್ರು ನಾವು. ಆದ್ರ ಛಲೋದದನಃ ಇಲ್ಲಃ ನೋಡೂ ಅವ್ರು ಯಾರು? ಹಾಂಗ ನೋಡಿದ್ಮ್ಯಾಕ್ಡ್ಲೆ ಹೊಸಾದೂ ಛಲೋದು ಅಂತ ತಿಳೀತು. ನನ್ನಪ್ಪು ನನಗ ತಿಳಿತು. ಅದ್ಕಃ ನಿನ್ಭೆಟ್ಯಾಗ್ಬೇಕಂತ ಓಡ್ಬಂಬೆ.‘

'ಅಪ್ಪಾ, ಇದೇನೂ ಮಹಾ ಕಾರ್ಯವಲ್ಲ. ನಿಮ್ಮ ಆಶೀರ್ವಾದ ಬಲದಿಂದ ಇದಕ್ಕಿಂತಲೂ ಬಹು ದೊಡ್ಡದಾದ ಕಾರ್ಯ ನಾನು ಕೈಗೂಡಿಸ ಬಲ್ಲೆ. ನನ್ನ ಮನಸ್ಸಿನ ಒಂದು ಭೀತಿ ಮರೆಯಾಯಿತು. ಇನ್ನೇನು ನಿಶ್ಚಿಂತ ಮನದಿಂದ ಸಮಾಜಸೇವೆ ಕೈಕೊಳ್ಳುವೆ; ಮತ್ತು ಅತ್ಯಂತ ಯಶಸ್ವಿತೆಯಿಂದ ಪೂರೈಸುವೆ.'

'ಗಂಗಕ್ಕಾ, ನಿನ್ನ ಸುದೈವ ಇಲ್ಲಿಗೇ ತೀರಲಿಲ್ಲ. ಇನ್ನೂ ಬಹಳವಿದೆ.'

'ಅಂದರೇನು ಅತ್ತಿಗೀ?'

ಕೃಷ್ಣರಾಯನು ಅದೇ ವೇಳೆಗೆ ಆ ಸಭೆಯನ್ನು ಸೇರಿದನು.

'ಅಹುದು ಗಂಗಕ್ಕಾ, ಅನ್ಯ ತರುಣಿಯರು ಮಾತ್ಸರಪಡುವಂತಹ ಸುದೈವ ನಿನ್ನದಿದೆ. ಚಿಕ್ಕಪ್ಪ-ಚಿಕ್ಕಮ್ಮ ಅದಕ್ಕೇನೇ ಬಂದಿರುವರು.'

'ಏನಿದು? ನೀವೇನು ಹೇಳುತ್ತಿರುವಿರಿ? ಅಪ್ಪಾ, ಇದೇನು? ನೀವು ಬಂದ ಅಂತಹ ಕಾರ್ಯವಾವುದು?'

'ಮಗು, ನೀನು ಮತ್ತೆ ಮದುವೆಯಾಗಬೇಕೆನ್ನುವುದೇ ನಮ್ಮ ಅಪೇಕ್ಷೆ. ಮಗಳು ಮಹತ್ಕಾರ್ಯ ಸಾಧಿಸಬೇಕೆಂಬದೇನೋ ನಮ್ಮ ಉತ್ಕಟೇಚ್ಛೆಯೇ ಇದೆ; ಆದರೆ ಸಂನ್ಯಾಸಿನಿಯಾಗಿರುವುದನ್ನು ನೋಡುವುದು ನಮ್ಮ ಮನಸ್ಸೊಪ್ಪದು. ನೀನು ಬೇಕಾದ ಕಾರ್ಯ ಮಾಡು; ಆದರೆ ಆಡಿಸಲು ನಮಗೆ ಮೊಮ್ಮಕ್ಕಳು ಬೇಕು. ಮಕ್ಕಳಿಲ್ಲದ ಬಾಳು ಹಾಳು. ಶಿಕ್ಷಣ ಮಂತ್ರಿ ಮಾನ್ಯ ಮೋಹನರಾಯರೇ ನಿನ್ನನ್ನು ಮದುವೆಯಾಗಲಿಚ್ಛಿಸಿದ್ದಾರೆ. ನಿನ್ನ ಸ್ಥಿತಿಯನ್ನರಿತಿರುವರು. ಸಂಕೋಚಕ್ಕೆ ಕಾರಣವಿಲ್ಲ. ನಮ್ಮ ಆಶೆ ಕೈಗೂಡಿಸಬೇಕು.'

'ಹೌದು ಗಂಗೂ. ಆವೊತ್ತು ನಿನ್ನ ಕುಂಕುವ ನಾನೇ ಅಳಿಸಿದೆ; ಈಗ ಮತ್ತೆ ನಾನೇ ಹಚ್ಚುತೇನಿ. ಆವತ್ತು ನಿನ್ನ ಶ್ರಾಪಿಸಿದ್ದೆ, ಈಗ ದೀರ್ಘ ಸುಮಂಗಲೆಯಾಗು, ಎಂದು ಹರಸುತ್ತೇನೆ. ನಿನ್ನ ಈ ಮಾಂಗಲ್ಯ ನೋಡಬೇಕು ಅನ್ನೋ ತಾಯೀ ಮನಸ್ಸು ಮುರೀ ಬ್ಯಾಡ."

# ಭೋಗವೋ-ತ್ಯಾಗವೋ?

ಗಂಗು ಅಚಾನಕವಾಗಿ ಒಂದು ವಿಚಿತ್ರ ಸನ್ನಿವೇಶದಲ್ಲಿ ಸಿಕ್ಕಳು. ಕಲ್ಪನೆಗೆ ನಿಲುಕದಂತಹ ಸ್ಥಿತಿಯದು. ತಂದೆಯ-ತಾಯಿಯ ಮಾತುಗಳನ್ನು ಆಗ್ರಹದ ವಿನಂತಿಯನ್ನು ಕೇಳಿ ಒಮ್ಮೆಲೇ ಗೊಂದಲದಲ್ಲಿ ಬಿದ್ದಳು. ಒಮ್ಮೆಲೆ ತನ್ನ ಒಪ್ಪಿಗೆ ಆನಂದದಿಂದ ಕೊಡಬಹುದೆಂದು ಪಾರ್ವತೀಬಾಯಿ ಬಗೆದಿದ್ದಳು; ಆದರೆ ಗಂಗೂನಿಂದ ಏನೂ ಉತ್ತರ ಬಾರದಿರಲು ಮತ್ತೆ ಮತ್ತೆ ಅವೇ ಮಾತು ಹೇಳಹತ್ತಿದಳು. ಮನೋರಮೆ ಗಂಗೂನ ಬಿಡುಗಡೆ ಮಾಡಿದಳು.

'ಗಂಗಕ್ಕಾ, ಈಗಲೇ ನೀನು ಉತ್ತರ ಕೊಡಬೇಕೆಂದು ನಮ್ಮ ಆಗ್ರಹವಿಲ್ಲ. ವಿಚಾರ ಮಾಡು. ನಾಳೆ ನಾಡದು ಕೂಡಾ ನೀನು ನಿನ್ನ ಉತ್ತರ ತಿಳಿಸಬಹುದು. ಆದರೂ ನನ್ನ ಸೂಚನೆಯಿಷ್ಟೇ, ಬಂದ ಸಂಧಿಯ ಲಾಭ ತೆಗೆದುಕೊಳ್ಳು. ಮೋಹನರಾಯರೆಂತಹರೆಂದು ನೀನು ಚನ್ನಾಗಿ ಬಲ್ಲೆ. ಅಲ್ಪಾವಕಾಶದಲ್ಲಿ ಜನರ ಸ್ವಭಾವ ತಿಳಿಯುವಷ್ಟು ಚತುರಳು ನೀನಿರುವೆ. ಮನೋಹರರಾಯರ ಸಹವಾಸದಲ್ಲಿ ನಿನಗೆ ಸುಖ ಸಿಕ್ಕುವದೆಂಬ ನಂಬಿಗೆ ನನಗಿದೆ. ಬರಿಯ ಪ್ರಾಪಂಚಿಕ ಸುಖದ ಬಗ್ಗೆ ನಾನು ಹೀಗೆ ಹೇಳುತ್ತಲಿರುವದಿಲ್ಲ. ದೇಶ, ಸಮಾಜಗಳ ಸೇವೆಗೂ ನಿನಗೆ ಒಳ್ಳೇಯ ಅವಕಾಶ ಸಿಕ್ಕುತ್ತಲಿದೆಯೆಂದು ನನ್ನ ವಿಶ್ವಾಸವಿದೆ. ಅಂತಹ ಮಹಾಪುರುಷನ ಸಲಹೆ, ಸಹವಾಸಗಳಿಂದ ನೀನು ಅನೇಕ ಮಹತ್ಕಾರ್ಯ ಸಾಧಿಸಬಲ್ಲೆ.'

ಅಂದು ಇರುಳಿನಲ್ಲೆಲ್ಲ ಗಂಗೂನ ತಲೆಯಲ್ಲಿ ಅನೇಕ ವಿಚಾರಗಳು ತಾಂಡವವಾಡತೊಡಗಿದವು. ಆವುದೋ ಒಂದು ಸುಖವನ್ನು ತಾನು ಮೊದಲು ಆಶಿಸಿದ್ದಳು. ಆ ಸುಖದ ಸವಿಗನಸುಗಳೆಲ್ಲ ಮಣ್ಣುಗೂಡಿ ಹೋದವು. ಭೀಕರ ದುಃಖ ಮೈಗೊಂಡುಮುಂಬಂದು ಮುಂಗಾಣದವಳನ್ನಾಗಿ ಮಾಡಿತು. ಸಾಯುವವರೆಗೂ ಭೀಕರ ಸಂಕಟಗಳಲ್ಲಿಯೇ ತೊಳಲಬೇಕೆಂದು ಗಾಬರಿಯಾಗಿರುವಾಗಲೇ ಅಂತಹ ದುಃಖದಿಂದಲೂ ಬಿಡುಗಡೆ ಹೊಂದಿದಳು. ಬೇರೊಂದು ಬಗೆಯ ಆನಂದದಲ್ಲಿ ಮಗ್ನಳಾದಳು. ಈಗಲೇ ಗಂಗು ಸುಖದಲ್ಲಿಯೇ ಇದ್ದಳೆಂದು ಹೇಳಬೇಕಿಲ್ಲ. ಆದರಿದು ಬೇರೆ ಬಗೆಯದು. ಯಾವದು ಮೇಲು ಯಾವದು ಕೀಳು ಎನ್ನುವವಿಚಾರಕ್ಕವಕಾಶವೇ ಇರಲಿಲ್ಲ. ಏಕೆಂದರೆ; ಮುನ್ನಿನದು ಬರೀ ಕನಸಾಗಿದ್ದಿತು. ಪ್ರತಿ ಮಾನವ ಇಚ್ಛಿಸಬಹುದಾಗಿದ್ದ

ಸುಖವನ್ನವಳೂ ಇಚ್ಛಿಸಿದಳು; ಸಿಕ್ಕಲಿಲ್ಲ. ಅಂತಹ ಒಂದು, ಮುನ್ನಿನದಕ್ಕಿಂತಲೂ ಸುಂದರವಾದ, ಶೀರ ಸುಂದರವಾದ ಸನ್ನಿವೇಶವೀಗ ತಾನಾಗಿಯೇ ಬಂದಿದ್ದಿತು. ಯಾರ ಸಮ್ಮತಿ ಅಶಕ್ಯವೇ ಎಂದು ಹೇಳಬಹುದಾಗಿದ್ದಿತೋ, ಅಂತಹ ತಂದೆ-ತಾಯಿ ತಾವಾಗಿಯೇ ಹಾಗೆ ಮಾಡಲು ಆಗ್ರಹಪಡಿಸುತ್ತಲಿದ್ದರು. ದೇಶಸೇವೆ, ಸಮಾಜ ಸೇವೆಗಳಿಗೂ ಅವಕಾಶವಿದೆ. ಸಾಂಸಾರಿಕ ಸೌಖ್ಯವೂ ಸಿಕ್ಕುವದು. ಮರುಮಾತಿಲ್ಲದೆ ಒಪ್ಪಿದರೆ—

ಮೋಹನರಾಯನ ಭವ್ಯವಾದ ಆಕೃತಿ ಕಣ್ಣೆದುರು ನಿಂತಿತು. ಅಂದು ಆ ಸಮಾರಂಭದಲ್ಲಿ ಕಂಡಾಗಿನಕ್ಕಿಂತಲೂ ಸುಂದರವಾಗಿ ತೋರಿತು. ಅವನ ಒಂದೊಂದೇ ಮಾತು ಅವನ ಬುದ್ಧಿಮತ್ತೆಯನ್ನೇ ತೋರಿಸುತ್ತಲಿದ್ದಿತು. ಅವನಾ ವಿಶಾಲವಾದ ಹಣೆ, ಬಾಹು—ಎಲ್ಲವೂ ಅವನೊಬ್ಬ ಸುಂದರನಾದ, ಚತುರನಾದ ಪುರುಷನೇ ಆಗಿದ್ದನು. ವಿಚಾರ ಮಾಡಿದಂತೆ ಹೆಚ್ಚು ಹೆಚ್ಚು ಮೋಹಕನೇ ಆಗಿ ತೋರಹತ್ತಿದನು. ಇಂತಹ ಸುಂದರ ಸಂಧಿ ನಿರಾಕರಿಸುವದು ನಿಜವಾಗಿಯೂ ಮೂರ್ಖತನವೆಂದು ಮನಸ್ಸು ಸಾರಿ ಹೇಳಹತ್ತಿತು; ಆದರೆ ದೇಶಸೇವೆಯಲ್ಲಿ ಭಾರತದುನ್ನತಿಗಾಗಿ ತನ್ನಂತಹ ಅನೇಕರನ್ನು ಸಿದ್ಧಗೊಳಿಸುವ ಆ ತ್ಯಾಗದಲ್ಲಿನ ಆನಂದ ಇದರಲ್ಲಿದೆಯೆ? ಎಂದು ವಿವೇಕ ಕೇಳಹತ್ತಿತು. ಮನಸ್ಸು ವಿವೇಕಗಳೆರಡಕ್ಕೂ ಕಲಹವೇ ಆರಂಭವಾಯಿತು.

'ಮೋಹನರಾಯ ಸುಂದರನಿರುವ, ಸುಗುಣಿಯಿರುವ. ಎಲ್ಲವೂ ನಿಜ. ಆದರೆ ಆತನನ್ನು ಮದುವೆಯಾಗಬೇಕೆಂದು ಇಚ್ಛಿಸುವದೇತಕ್ಕೆ?' ವಿವೇಕ ಕೇಳಿತು. ಮನ ಕೊಂಚ ಗೊಂದಲದಲ್ಲಿ ಬಿದ್ದಿತು. ಉತ್ತರ ಸಿಕ್ಕದಾಯಿತು. 'ನಾನು ಹೇಳುತ್ತೇನೆ ಕೇಳು. ಇದೆಲ್ಲವೂ ಬರಿಯ ವೈಷಯಿಕ ಸುಖಕ್ಕಾಗಿ. ಮೋಹನರಾಯನೊಡನೆ ಬಾಳುವೆ ಮಾಡಬೇಕು. ಎಲ್ಲ ಬಗೆಯ ಅನುಕೂಲತೆಯಿದೆ. ಸುಖ-ಸಂಪತ್ತಿಗಳಲ್ಲಿ ಮುಳುಗಬೇಕು. ಮೋಟರಿನಲ್ಲಿ ಅಲೆದಾಡಬೇಕು. ಹೋದ ಹೋದಲ್ಲಿ ಜನ ಕೈಜೋಡಿಸಿ ನಿಲ್ಲುವರು. ಮಾನ-ಸನ್ಮಾನಗಳು ಸಿಕ್ಕುವವು. ಇದೆ ಅಲ್ಲವೆ?' ವಿವೇಕ ಮತ್ತೆ ಕೇಳಿತು.

'ಅಹುದು, ಆದರೇನಾಯಿತು? ಇಂತಹ ಸುಖ ಇನ್ನೆಲ್ಲಿ ಸಿಕ್ಕುವದು? ಎಲ್ಲರೂ ಆಶಿಸುವದಾದರೂ ಇನ್ನೇನು? ಇದಕ್ಕಿಂತ ಹೆಚ್ಚಿನ ಸುಖವೆಂದರದಾವದು?' ಮನ ಮೂದಲಿಸಿತು.

'ಇದೀಗ ಸುಖವೆ? ಸುಖವಲ್ಲ. ಸುಖದ ಭ್ರಾಮಕ ಕಲ್ಪನೆ. ಎಲ್ಲರೂ ಈ ಭ್ರಾಮಕ ಸುಖಕ್ಕಾಗಿ-ಸಂಸಾರ, ಹಣ, ಅಧಿಕಾರ, ಮಾನಗಳಿಗಾಗಿ—ಆಶಿಸುವುದು ಸಹಜ; ಆದರೆ ನಿಜವಾದ ಸುಖ ಇದಕ್ಕಿಂತಲೂ ಮೇಲೆ-ಬಹಳ ಮೇಲೆ ಇದೆ. ಭಾರತದುನ್ನತಿಗಾಗಿ ಸ್ವಸುಖದ ತ್ಯಾಗ ಮಾಡಿದರೆ, ಸ್ವ ಶರೀರವನ್ನೂ ಸವೆಸಿ, ಭಾರತದ ಕೋಟ್ಯಾನುಕೋಟಿ ಜನರಿಗೆ ಸುಖವಾಗು ವಂತೆ ಮಾಡಿದರೆ, ನಿಜವಾದ ಆನಂದವಲ್ಲಿಯೇ ಇದೆ.'

'ಮೋಹನರಾಯನನ್ನು ಮದುವೆಯಾದರೆ ಭಾರತದುನ್ನತಿಗಾಗಿ ದುಡಿಯಲಾಗದೆ? ಮೋಹನರಾಯನೆಂದರೆ ಪ್ರಥಮ ತರಗತಿಯ ದೇಶ ಸೇವಕ. ಅಂತಹನ ಸಹವಾಸ ದೇಶಸೇವೆಗೆ ಇನ್ನೂ ಅನೂಕೂಲವೇ ಆಗುವು ದಿಲ್ಲವೆ? ಮೂರ್ಖತನ ಬೇಡ.'

ಗಂಗೂ ವಿಚಾರಗಳಲ್ಲಿ ಮುಳುಗಿ ಹೋದಳು. ಎಷ್ಟು ಜನ ಸ್ತ್ರೀ ಯರು ವಿವಾಹವಾಗಿದ್ದರೂ ಶ್ರೇಷ್ಠವಾದ ಕಾರ್ಯ ಮಾಡಿಲ್ಲ? ಕಸ್ತೂರಿ ಬಾಯಿಯವರು ಮದುವೆಯಾಗಿರಲಿಲ್ಲವೆ? ಅಂತಹ ಆದರ್ಶ ಸ್ತ್ರೀರತ್ನ ಸಿಕ್ಕೀತೆ? ಇನ್ನೂ ಅನೇಕರ ಸ್ಮರಣೆ ಬಂದು ಗಂಗೂವ ಮನಸ್ಸು ಹೆಚ್ಚು ಹೆಚ್ಚು ಮದುವೆಯತ್ತಲೇ ಒಲಿಯಲಾರಂಭಿಸಿತು.

ಗಂಗೂವ ಮನಸ್ಸಿನಲ್ಲಿ ತನ್ನ ಭಾವೀ ಜೀವನದ ಅನೇಕ ವಿಚಾರ ಗಳು ಬರಲಾರಂಭಿಸಿದವು. ಮದುವೆ, ಸುಂದರವಾದ, ಸುಸಜ್ಜಿತವಾದ ಬಂ-ಗಲೆಯೊಂದರಲ್ಲಿನ ತನ್ನ ಸಂಸಾರ, ಅನೇಕರ ಅಭಿನಂದನೆ ಇಂತಹ ಸುಂದರ ಸುರಮ್ಯ ನೋಟಗಳಲ್ಲಿ ತಲ್ಲೀನಳೇ ಆಗಿ, ತನ್ನನ್ನೇ ತಾನು ಮರೆತಳು. ಬರ ಬರುತ್ತ ಗಂಗೂ ವಿಶಾಲ ವಿಶ್ವವನ್ನೇ ಮರೆತು ತನ್ನ ಸಂಸಾರವಾಯಿತು, ತಾನಾಯಿತು ಎಂಬಂತಾಯಿತು. ಆದಾವ ಸಂಗತಿಗಳಿಗೂ ಕಡಿಮೆಯಿಲ್ಲದ ಸಂಸಾರದಲ್ಲಿ ತನ್ಮಯಳೇ ಆದಳು. ಭಾರತದುನ್ನತಿಗಾಗಿ ದೇಹವನ್ನೇ ಅರ್ಪಿಸಿದಗಂಗೂ ಬೇರೆ, ಮಂತ್ರಿಯ ಮಡದಿಯಾಗಿ ಸುಖಸಾಗರದಲ್ಲಿ ತೇಲಾ ಡುವ ಗಂಗೂ ಬೇರೆ ಎನ್ನುವಷ್ಟು ಮಾರ್ಪಾಟಾಯಿತು. ದುಃಖದಲ್ಲಿರು ವಾಗ ಅನ್ಯರ ದುಃಖದರಿವಾಗುತ್ತದೆ. ತನ್ನ ಕಟುತನ ದುಃಖದಲ್ಲಿಯೇ ಅನ್ಯರ ದುಃಖಗಳ ಬಗ್ಗೆ ಸಹಾನುಕಂಪವಾಗುತ್ತದೆ. ಸಹಾಯ ಹಸ್ತ ಮುಂಬರುತ್ತದೆ; ಆದರೆ ಸುಖದಲ್ಲಿ ಮುಳುಗಿರುವಾಗ ಎಲ್ಲವೂ ಮರೆಯಾಗು ತ್ತದೆ. ಗಂಗೂವ ಕಣ್ಣಿನಿಂದ ದರಿದ್ರ ಭಾರತ ತೀರಾ ಮರೆಯಾಯಿತು.

ಶ್ರೀಮಂತ, ಸುಸಂಪನ್ನ ಜನರ ಸಹವಾಸ, ಆಳು-ಹೋಳುಗಳ ಸೇವೆ, ಸುಂದರ-ಸುಮಧುರವಾದ ಪಕ್ವಾನ್ನ, ರಮಣೀಯವಾದ ಉಡುಪು-ತೊಡುಪುಗಳು ಇಂತಹ ಅನೇಕ ನೋಟಗಳು ಕುಕ್ಷಿಯಲ್ಲಿ ಕುಳಿತಿರುವಾಗಲೇ ಗಂಗೂನ ಮನದಲ್ಲಿ ಮೂಡಿ ಮಾಯವಾಗುತ್ತಲಿದ್ದವು. ಒಂದೊಂದೇ ನೋಟ ಗಂಗೂನನ್ನು ಹರ್ಷಪುಲುಕಿತಳನ್ನಾಗಿ ಮಾಡುವ ಸುಮಧುರ ಸ್ಪರ್ಶದಂತಿದ್ದಿತು.

ಒಂದೆಡೆ ಸಮಾರಂಭವೊಂದು ವಿಜೃಂಭಣೆಯಿಂದ ನಡೆದಿದೆ. ಬಾಲದಿನಾಚರಣೆಯೋ ಇನ್ನೇನೋ ಇರಬೇಕು. ಶಿಕ್ಷಣ ಮಂತ್ರಿಯ ಪತ್ನಿ ಗಂಗೂನೇ ಅಧ್ಯಕ್ಷಸ್ಥಾನ ವಹಿಸಿರುವಳು. ಸಭಾಮಂಟಪವೆಲ್ಲ ಸುಂದರವಾಗಿ ಭೂಷಿಸಲ್ಪಟ್ಟಿದೆ. ಅನೇಕ ಆಮಂತ್ರಿತ ಸ್ತ್ರೀ-ಪುರುಷರು ಸುಂದರವಾದ ವಸ್ತ್ರಗಳಿಂದ ಭೂಷಿತರಾಗಿ ಆಸನಗಳನ್ನಲಂಕರಿಸಿದ್ದಾರೆ. ಎಷ್ಟೋ ಜನರು ಉದ್ದುದ್ದವಾದ ಭಾಷಣ ಮಾಡುತ್ತಲಿದ್ದಾರೆ. ಬಂದು ಹೋದವರೆಲ್ಲ ನಗುಮೊಗದಿಂದ ಗಂಗೂನನ್ನು ಅಭಿವಂದಿಸುತ್ತಾರೆ. ಚಿಕ್ಕ ಚಿಕ್ಕ ಬಾಲಕರಿಗೆ ಮಿಠಾಯಿ ಹಂಚುವ ಸಮಾರಂಭ ನಡೆದಿದೆ. ಕಾರ್ಯದರ್ಶಿಯೊಬ್ಬ ಪುಡಿಕೆಗಳನ್ನು ಗಂಗೂನ ಕೈಗೆ ಕೊಡುತ್ತಾನೆ. ಒಬ್ಬರೊಬ್ಬರಂತೆ ಚಿಕ್ಕ ಬಾಲಕ-ಬಾಲಿಕೆಯರು ಮುಂಬಂದು ಪುಡಿಕೆಗಳನ್ನು ಕೊಂಡೊಯ್ಯುತ್ತಾರೆ. ಮೊದಮೊದಲು ಗಂಗೂನಿಗವರ ಮುಖದತ್ತ ಲಕ್ಷ್ಯವೇ ಇರಲಿಲ್ಲ; ಆದರೆ ಕ್ರಮೇಣ ಅವಳ ಕಣ್ಣು ಆ ಬಾಲ-ಬಾಲೆಯರ ಮೇಲೆ ಹೋಯಿತು. ಅವರಾ ಮುಖಗಳೆಲ್ಲ ಕೃಶವಾಗಿದ್ದುವು. ಮುಖದಲ್ಲಿ ಅಲ್ಪವಾದರೂ ಉತ್ಸಾಹವಿಲ್ಲ. ಕಣ್ಣುಗಳಲ್ಲಿ ಆ ತಿಂಡಿ ತಿನ್ನುವ ಆಶೆಯೊಂದನ್ನುಳಿದು ಬೇರೆ ಯಾವ ಆಶೆಯೂ ಇಲ್ಲ. 'ಹೀಗೇಕೆ?' ಎಂದು ತನ್ನನ್ನು ತಾನೇ ಕೇಳಿದಳು. 'ಭಾರತದ ಭಾವೀ ಪ್ರಜೆಗಳಿವರೆ?" ಅನೇಕರು ತಮ್ಮ ಸರ್ವಸ್ವ ಧಾರೆಯೆರೆದು ಗಳಿಸಿದ ಸ್ವಾತಂತ್ರ್ಯ ಉಳಿಸಿಕೊಳ್ಳುವ ವೀರರಿವರೆ? ಭಾರತದ ಅಭ್ಯುದಯಕ್ಕಾಗಿ ಯತ್ನಿಸಿ ಭಾರತದ ಕೀರ್ತಿ ದಿಗಂತದಲ್ಲೂ ಪಸರಿಸುವಂತೆ ಮಾಡುವ ಮುಂದಾಳುಗಳಿವರೆ?' ಎಷ್ಟೋ ಸಮಯ ವಿವೀಕ್ಷಿಸಿದಳು. ಉಲ್ಲಸಿತ ಮುದ್ರೆಯ ಸಶಕ್ತ, ಶೌರ್ಯ-ಧಾರ್ಯಗಳಿಂದ ಶೋಭಿಸಬಹುದಾದ ಬಾಲಕರೆನಿತು!-ಅಯ್ಯೋ ಇದೇನೀ ಅವಸ್ಥೆ? ಇಷ್ಟು ಜನ ಧನಿಕರು, ಸ್ವಾತಂತ್ರ್ಯ ಗಳಿಸಿದ ವೀರರು, ಭಾರತಕ್ಕಾಗಿ ಸರ್ವಸ್ವವರ್ಪಿಸಿದ ತ್ಯಾಗಿಗಳು, ಭಾರತದ ಉಜ್ವಲ ಭವಿಷ್ಯ ಹಾಡುತ್ತಲಿರುವ ಭಾರತೀಯರು, ರಾಜ

ಕಾರಣಿಗಳು-ಒಬ್ಬರ ಲಕ್ಷ್ಯವಾದರೂ ಈ ಭಾರತದ ಭಾವೀ ಪ್ರಜೆಯತ್ತ ಇದೆಯೆ?—'

'ಗಂಗೂ, ಗಂಗೂ, ನೋಡು. ದೀನ ಭಾರತದ ದರಿದ್ರ ಬಾಲಕರನ್ನು ಕಣ್ಣಾರೆ ನೋಡು. ಇಂತಹರ ಉನ್ನತಿಗಾಗಿ ಯತ್ನಿಸುವುದನ್ನು ಳಿದು ಸಂಸಾರ ಸುಖದಲ್ಲಿ ತೇಲಬಯಸುವೆಯಾ? ಅದು ನಿಜವಾದ ಸುಖವಾದರೂ ಅಹುದೆ? ನೋಡು, ಚೆನ್ನಾಗಿ ನೋಡು; ಕಂದೆರೆದು ನೋಡು. ಬಡವರ ಭಾಗ್ಯದೇವತೆಯೆಂದು ಅನೇಕರು ಹೆಮ್ಮೆಯಿಂದ ನಿನ್ನನ್ನು ಹೊಗಳಿದ್ದರಲ್ಲವೆ? ಮದುವೆಯಾಗಿ ಸುಖ-ಸಂಸಾರಕ್ಕೆ ಬಾಯ್ಬಿಡುವ ನೀನು, ಬಡವರ ಭಾಗ್ಯ ದೇವತೆಯಾಗುವೆಯಾ—'

ಗಂಗೂ ಒಮ್ಮೆಲೇ ಗಡಬಡಿಸಿಕೊಂಡಿದ್ದಳು. ಕಣ್ಣುಜ್ಜಿಕೊಂಡು ನೋಡಿದಳು. ತಾನಿರುವುದೆಲ್ಲಿ? ಕಂಡ ನೋಟಗಳೆಲ್ಲ ಎಲ್ಲಿ ಹೋದುವು? ತನ್ನನ್ನು ಹಾಗೆ ಎಚ್ಚರಿಸಿದವರಾರು?-ಮುನ್ನಿನ ಸನ್ನಿವೇಶ ಗಂಗೂನ ಲಕ್ಷದಲ್ಲಿ ಬಂದಿತು. ತನ್ನ ಮದುವೆಯ ಕಲ್ಪನೆ ತನ್ನನ್ನೀವರೆಗೆ ಎಳೆದೊಯ್ದಿತೆಂದು ತಿಳಿಯಲು, ಶೇಖಮಹಮ್ಮದ ನಾನು, ಎಂದು ಕಿರುನಗೆ ನಕ್ಕಳು.

ಮದುವೆಯ ವಿಚಾರ ಮತ್ತೆ ಮುತ್ತಿತು ದೀನ ದರಿದ್ರರ ಸೇವೆ ಮದುವೆಯಾದರೆ ಮಾಡಲಾಗದೆ?—ಮನ ಮತ್ತೆಮತ್ತೆ ಕೇಳಹತ್ತಿತು.

'ಅಯ್ಯೋ! ಏನಿದು? ಮದುವೆಯ ಮೋಹ ಆವರಿಸದಾಗಿದೆ. ದೇಶ ನಿಷ್ಠ ಆ ಮೋಹನರಾಯನಿಗೆ ಮದುವೆಯಾಗಲು ಬೇರೆ ಹೆಣ್ಣಿಲ್ಲವೆ? ನನ್ನನ್ನೇಕೆ ಆರಿಸಿದ? ನಾನು ನನ್ನ ಪರಿಯಿಂದ ಸುಖಸಾಮ್ರಾಜ್ಯವನುಭವಿಸುವಾಗಲೇ ಈ ಮೋಹ ನನಗೆ ಏಕೆ ತೋರಿಸಿದ? ದೇವರೇ-ದೇವರೇ! ನಾನೇನು ಮಾಡಬೇಕು ಈಗ? ತಂದೆ-ತಾಯಿಗಳ ಅಕ್ಷೇಪಣೆಯನ್ನೂ ತೊಡೆದು ಹಾಕಿದೆ. ಉಪದೇಶ ಮಾಡುವ ಅಣ್ಣಾ-ಅತ್ತಿಗೆಯರನ್ನೂ ಮಂಕುಗೊಳಿಸಿದೆ. ಇದೇನು, ನನ್ನನ್ನು ಪರೀಕ್ಷಿಸಬೇಕೆನ್ನುವೆಯಾ? ಸುಮ್ಮನೇ ನನ್ನ ಪಾಡಿಗೆ ನನ್ನನ್ನೇಕೆ ಬಿಡದಾದೆ? ಇಲ್ಲವೆ ಈ ಸಮಾಜಸೇವೆಯ ಹುಚ್ಚನ್ನಾದರೂ ಏಕೆ ಹಾಕಿದೆ? ನಿನ್ನ ಪರೀಕ್ಷೆ ಘನವಾಗಿದೆ. ಅದರಲ್ಲಿ ಯಶಸ್ವೀಯಾಗುವ ಶಕ್ತಿ ನನ್ನದಲ್ಲ. ಅಂತಹ ಶಕ್ತಿಯನ್ನಾದರೂ ಕೊಡು; ಇಲ್ಲವೆ ಈ ಮೋಹವನ್ನಾದರೂ ತೊಡೆದು ಹಾಕು. ನನ್ನನ್ನು ಚೇತನಾ ವಿಹೀನಳನ್ನಾದರೂ ಮಾಡು.—'

———

# ನಿರ್ಧಾರ.

ಮರುದಿನ ಬೆಳಗು ಬಂದಿತು. ಗಂಗೂನ ಸಮ್ಮತಿಯನ್ನೆಲ್ಲರೂ ನಿರೀಕ್ಷಿಸಿದ್ದರು; ಆತುರರೂ ಆಗಿದ್ದರು. ಕೃಷ್ಣರಾಯ ಕೂಡಾ ಮೋಹನರಾಯನಿಗೆ ಒಳ್ಳೇ ಸುದ್ದಿ ತಿಳಿಸುವ ಸಿದ್ಧತೆಯಲ್ಲಿದ್ದನು. ಎಲ್ಲರ ಕಣ್ಮನಗಳು ಭಾವೀ ಸೋಟಿಗಳತ್ತ ಮುಂದೆ ಮುಂದೆ ಓಡುತ್ತಲಿದ್ದವು.

ಗಂಗೂ ಕೂಡಾ ಇಬ್ಬಗೆಯಾಗಿ ವಿಚಾರಿಸಿದಳು. ವಿಚಾರದಲ್ಲಿಯೇ ಇರುಳಿನ ಬಹಳ ಬಹಳ ಭಾಗ ಅಳಿದಿದ್ದಿತೆಂದು ಕೆಂಪಾದ ಕಣ್ಣುಗಳೇ ಹೇಳುತ್ತಲಿದ್ದುವು. ಮುಖಪ್ರಸನ್ನವಾಗಿದ್ದು, ಮನದಲ್ಹಾದ ದೃಢನಿಶ್ಚಯವನ್ನೇ ಪ್ರತಿಬಿಂಬಿಸುತ್ತಲಿದ್ದಿತು. ಕಾತರತೆಯಾಗಲಿ, ಆತುರತೆಯಾಗಲೀ ಅಲ್ಪವಾದರೂ ಅಲ್ಲಿ ಕಾಣುತ್ತಲಿರಲಿಲ್ಲ. ಆದರಾ ಸುಂದರ ಮೊಗ ಉಜ್ವಲ ಕಾಂತಿಯಿಂದ ಕೂಡಿದ್ದಿತು. ಕಣ್ಣು ನಸುಗೆಂಪಾಗಿದ್ದರೂ ಶಾಂತತೆಯನ್ನೇ ಸೂಸುತ್ತಲಿದ್ದುವು. ಅಂದು ಗಂಗೂನ ಆ ಸೌಂದರ್ಯ ಅವರ್ಣನೀಯವಾಗಿ ತೋರುತ್ತಲಿದ್ದಿತು. ಸ್ವತಃ ಭೀಮರಾಯರಿಗೆ ಕೂಡಾ ಆ ಅನಿಂದ್ಯ ಸೌಂದರ್ಯ ಹೊಸ ಬಗೆಯದಾಗಿ ತೋರಿತು. 'ಇದೀಗ ಪಾವಿತ್ರ್ಯದ ಮೂರ್ತಿಯವಳು. ಪಾಪಿಗಳ ಕಲುಷಿತ ಮನವನ್ನೂ ತೊಳೆದು ಹಾಕುವ ಗಂಗಾಮಾತೆಯಂತೆ ಶುಚಿಯಾದಿವಳ ನಿರ್ಣಯ ಈಕೆಯ ಈ ಪಾವಿತ್ರ್ಯಕ್ಕೆ ಅನುರೂಪವಾಗಿಯೇ ಇರಬೇಕು. ಮದುವೆಗನುಕೂಲವಾದಂತಿಲ್ಲ!" ಎಂದು ಯೋಚಿಸಿದರು.

ಉಪಹಾರಕ್ಕೆಂದು ಎಲ್ಲರೂ ಕುಳಿತಿದ್ದರು. ಮುಖ್ಯ ವಿಷಯದತ್ತ ಎಲ್ಲರ ಮನವಿದ್ದರೂ ಗಂಗೂನ ಶಾಂತ ಪ್ರಶಾಂತವಾದ ಗಂಭೀರ ಮುದ್ರೆಯನ್ನು ನೋಡಿ ಯಾರೂ ಮಾತೆತ್ತಲಿಲ್ಲ. ಪರಿಸ್ಥಿತಿಯರಿವು ಗಂಗೂವಿಗಾ

ಯಿತು. ತನ್ನ ನಿರ್ಧರ ಬಿಚ್ಚಿಡಲು ಆರಂಭಿಸಿದಳು. ಸ್ವರ ಶಾಂತವಾಗಿದ್ದಂತೆ ಗಂಭೀರವೂ ಆಗಿದ್ದಿತು.

'ನೀವೆಲ್ಲರೂ ನನ್ನ ನಿರ್ಧರ ಕೇಳಬೇಕೆಂದು ಇಚ್ಛಿಸುತ್ತಲಿರಬಹುದು. ಇರುಳೆಲ್ಲ ನಾನೂ ಯೋಚಿಸಿರುವೆ. ಇಂತಹ ಸುಂದರ ಸಂದರ್ಭ ಸಿಕ್ಕುವಾಗ ಬೇಡವೆಂದೇಕೆ ಅನ್ನಬೇಕು? ಎಂದೂ ಅನೇಕ ಸಲ ಯೋಚಿಸಿದೆ. ಮನ ವೊಪ್ಪಿತು; ವಿವೇಕವೊಪ್ಪಲಿಲ್ಲ. ಹೃದಯವಂತೂ ನನ್ನ ಸಾವಿರಾರು ಕೊಟ್ಯಾವಧಿ ಬಡ ಬಾಂಧವರತ್ತ ಹರಿಯಿತು. 'ಈ ಬಾಂಧವರ ಸೇವೆ ಈಗಿನಂತೆ, ಇದಕ್ಕಿಂತಲೂ ಹೆಚ್ಚಾಗಿ ಆಗುವುದೆ?' ಎಂಬ ಪ್ರಶ್ನೆ ಮತ್ತೆ ಎದುರಾಯಿತು. ಮಂತ್ರಿಯಂತಹ ಮಹಾ ಪುರುಷನ ಮಡದಿಯಾಗಿರಲು ಸಾಧ್ಯನೇಕಿಲ್ಲ? ಎಂಬ ಉತ್ತರವಿದ್ದರೂ ಅದು ತೋರಿಕೆಯದು ಮಾತ್ರ. ಏಕೆಂದರೆ ಮದುವೆಯಾದಲ್ಲಿ ನನ್ನದೊಂದು ಮನೆಯಾಗುವುದು. ಗಂಡ, ಮಕ್ಕಳು ನನ್ನವರಾಗುವರು. ಈ ಒಂದು ಚಿಕ್ಕ ಜಗತ್ತು ಹೊರಗಿನ ಈ ವಿಶಾಲವಾದ ಭಾರತದಿಂದ ಭಿನ್ನವಾಗುವುದರಲ್ಲಿ ಸಂಶಯವಿಲ್ಲ. ನನ್ನ ವೇಳೆ-ಶಕ್ತಿಗಳು ಈ ಎರಡೂ ಜಗತ್ತಿನಲ್ಲಿ ಒಡೆದು ಹೋಗುವುವು. ಆಗ? ಈಗ ನನಗೆ ಅತ್ಯಂತ ಪ್ರಿಯವಾಗಿರುವ, ನನ್ನಂತಹ ಲಕ್ಷಾವಧಿ ಜನರ ಅಖಂಡವಾದ ಸೇವೆ ಅತ್ಯಾವಶ್ಯವಾಗಿರುವ, ನಾನು ತನುಮನದಿಂದಲೂ ಸೇವಿಸಬೇಕೆಂದಿರುವ ಈ ಭಾರತಕ್ಕೆ ಎಷ್ಟು ಸಮಯ ಸಿಕ್ಕುವುದು? ಶಕ್ಯವಿದ್ದಷ್ಟು ವೇಳೆ ಹಾಕಬೇಕೆಂದರೂ ಗೃಹಿಣೀ ಧರ್ಮಕ್ಕನುಸರಿಸಿ ಕೆಲ ಸಮಯವನ್ನಾದರೂ ನಾನು ಹಾಕಲೇಬೇಕು. ಪೂರ್ಣವಧಿಯಿಂದ ದೇಶವನ್ನು ಸೇವಿಸಲಾರೆನೆಂಬ ದಂತೂ ನಿಶ್ಚಿತ. ನನ್ನದೆಂಬ ಮೋಹ ಬಳೆದಂತೆ ನನ್ನ ಈ ಅಚ್ಚುಮೆಚ್ಚಿನ ಭಾರತ ನನ್ನ ಕಣ್ಣಿಳಿಂದ ಒಂದುವೇಳೆ ತೀರಾ ಮರೆಯಾಗಿ ಹೋದೀತು. ಅಣ್ಣಾ, ನೀನೇ ಹೇಳಿದ್ದೆಯಲ್ಲವೆ? ನಿಜವಾದ ಆನಂದ ಭೋಗಕ್ಕಿಂತ ತ್ಯಾಗದಲ್ಲಿದೆಯೆಂದು. ಆದುದರಿಂದ ನನ್ನದೆನ್ನುವದೆಲ್ಲವನ್ನೂ ತ್ಯಾಗಮಾಡಿ, ಎಲ್ಲವನ್ನೂ ನನ್ನದನ್ನಾಗಿಸುವೆ. ಪರಮೋಚ್ಚವಾದ ಆನಂದವನುಭವಿಸುವೆ. ಅಪ್ಪಾ, ಕೋಪಿಸಬೇಡಿ. ನಿಮಗೆ ಆಡಲು ಒಬ್ಬಿಬ್ಬ–ನಾಲ್ಕಾರು ಜನ ಮಕ್ಕಳೇಕೆ, ಸಹಸ್ರ ಸಂಖ್ಯೆಯಲ್ಲಿ ದೀನರಾದ, ಹೀನರಾದ, ಅನಾಥರಾದ ಮಕ್ಕಳನ್ನು ನಿಮಗೆ ಕೊಡುವೆ. ನೀವು ನನ್ನೊಡನೆ ಬನ್ನಿರಿ. ನಿಜವಾದ ಆನಂದವನ್ನೆಲ್ಲರೂ ಭೋಗಿಸುವಾ. ಅತ್ತಿಗೀ, ನೀನು ಯೋಚನೆ ಮಾಡಬೇಡ.

ನನ್ನನ್ನಿಂತಹ ಸುಂದರವಾದ ಮಾರ್ಗಕ್ಕೆ ತಲುಪಿಸಿರುವೆ. ಆದರಿಂದ ಮತ್ತೆ ಮರಳಿಸಬೇಡ. ಮದುವೆ ಅವಶ್ಯವೇ ಇರಲಿ-ಇಲ್ಲದಿರಲಿ, ಅದೊಮ್ಮೆ ಆಗಿಹೋಯಿತು. ಬಾಪೂಜೀಯವರೇ ಒಂದೆಡೆ ಹೇಳಿದ್ದಂತೆ You have had your chance, let others have it (ನಿಮ್ಮ ಸರದಿ ಮುಗಿದಿದೆ; ಬೇರೆಯವರಿಗೆ ಸಂಧಿ ಕೊಡಿರಿ) ನನ್ನ ಸರದಿಯೊಮ್ಮೆ ಮುಗಿದಿದೆ; ಒಮ್ಮೆ ಕೂಡಾ ಮದುವೆಯಾಗದ ಅನೇಕ ನನಗಿಂತಲೂ ರೂಪವತಿಯರಾದ, ಸುಸಂಸ್ಕೃತರಾದ ವಧುಗಳಿರುವರು. ಅವರಲ್ಲೊಬ್ಬಳು ಮೋಹನರಾಯರ ಮಡದಿಯಾಗಲಿ. ಮದುವೆಯಾಗಿ ಸಂಸಾರ ಮಗ್ನಳಾಗಬೇಕೆಂದಿದ್ದರೆ, ಪರಮಾತ್ಮ ನನ್ನನ್ನೀ ಅವಸ್ಥೆಯಲ್ಲಿಡುತ್ತಲಿರಲಿಲ್ಲ. ನಾನು ಸಂನ್ಯಾಸಿನಿಯಾಗಿಯೇ ಸಮಾಜ ಸೇವೆ ಮಾಡಬೇಕೆಂಬದವನ ಇಚ್ಛೆ. ಆ ಇಚ್ಛೆಗೆ ಯಾರೂ ವಿರೋಧ ಮಾಡಲಾಗದು.'

ಸಂ
ಸಂ ಪೂ ರ್ಣ
ರ್ಣ



# ಹೊಸ ಪುಸ್ತಕಗಳು.

★

ಜೋಸೆಫ ಮ್ಯಾಝಿನಿ
ಮತ್ತು
ಸ್ವಾತಂತ್ರ್ಯವೀರ ಸಾವರಕರ ಬೆಲೆ ೧ ರೂ.

ವಿಚಿತ್ರ ಚಟ
(ಪತ್ತೇದಾರಿ)

ಸ್ಕೂಲ ಮಾಸ್ತರ
(ಸಾಮಾಜಿಕ)

ಪರಿವರ್ತನ
(ಸಾಮಾಜಿಕ)

ಝಾನ್ಸೀ ರಾಣಿ
(ಐತಿಹಾಸಿಕ)

ಸುಲಕ್ಷಣ ಸತಿಸೇವೆ
(ಸಾಮಾಜಿಕ)

ಇವಲ್ಲದೆ ಅನೇಕ ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಶೃಂಗಾರಿಕ ವಗೈರೆ ಕಾದಂಬರಿಗಳೂ ಚರಿತ್ರ, ನಾಟಕ, ಧಾರ್ಮಿಕ, ವೈದ್ಯಕ ಪುಸ್ತಕಗಳೂ ದೊರೆಯುವವು. ಕ್ರಯಪಟ್ಟಿಗೆ ಎ ಅಡೆ

**ಬಿ. ಪಿ. ಕಾಳೆ ಮದಿಹಾಳ-ಧಾರವಾಡ.**